**ಕರ್ನಾಟಕ ಸರ್ಕಾರ**

**ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ**

# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ 1976

# ಮತ್ತು

# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ 1977

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ

# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ 1976

# ಮತ್ತು

# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ 1977

# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1976

## ವಿಷಯಾನುಕ್ರಮಣಿಕೆ

**ಪ್ರಕರಣಗಳು**


1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ
2. ಪರಿಭಾಷೆಗಳು
3. ಪ್ರಾಧಿಕಾರದ ರಚನೆ ಮತ್ತು ನಿರ್ಗಮನ
4. ಸದಸ್ಯ ಪದಕ್ಕೆ ಅನರ್ಹತೆ
5. ಸದಸ್ಯರ ಪದಾವಧಿ ಮತ್ತು ಸೇವಾ ಷರತ್ತುಗಳು
6. ಸದಸ್ಯನನ್ನು ತೆಗೆದುಹಾಕುವುದು
7. ಪುನರ್ನೇಮಕಕ್ಕೆ ಪಾತ್ರತೆ
8. ಪ್ರಾಧಿಕಾರದ ಸಭೆಗಳು
9. ಸಮಿತಿಗಳ ನೇಮಕ
10. ವಿವಿಧ ಪ್ರಾಧಿಕಾರಗಳ ಅಧಿಕಾರಗಳು
11. ತಾನು ಮಾಡುವ ಅಥವಾ ತನ್ನ ವಿರುದ್ಧವಾಗಿ ಮಾಡಲಾಗುವ ಕ್ಲೇಮುಗಳ ಬಗ್ಗೆ ಪ್ರಾಧಿಕಾರವು ರಾಜಿಯನ್ನು ಮಾಡಿಕೊಳ್ಳಬಹುದು.
12. ಅಧ್ಯಕ್ಷನ ಕರ್ತವ್ಯಗಳು
13. ಹಂಗಾಮಿ ಅಧ್ಯಕ್ಷನ ನೇಮಕ
14. ಪ್ರಾಧಿಕಾರದ ಉದ್ದೇಶಗಳು
15. ಕಾಮಗಾರಿಗಳನ್ನು ಕೈಗೊಳ್ಳಲು ಮತ್ತು ಅಭಿವೃದ್ಧಿ ಇತ್ಯಾದಿಗಳಿಗಾಗಿ ವೆಚ್ಚವನ್ನು ವಹಿಸಲು ಪ್ರಾಧಿಕಾರಕ್ಕೆ ಇರುವ ಅಧಿಕಾರ
16. ಅಭಿವೃದ್ಧಿ ಯೋಜನೆಯಲ್ಲಿ ಒದಗಿಸಬೇಕಾದ ವಿವರಗಳು
17. ಯೋಜನೆಯು ಪೂರ್ಣಗೊಂಡ ಮೇಲಿನ ಪ್ರಕ್ರಿಯೆ
18. ಯೋಜನೆಯ ಮಂಜೂರಾತಿ
19. ಮಂಜೂರಾತಿಯಾದ ಮೇಲೆ, ಸ್ವಾಧೀನಪಡಿಸಿಕೊಳ್ಳಬೇಕಾದ ಭೂಮಿಯ ವಿವರಗಳನ್ನು ಕೊಡುವ ಘೋಷಣೆಯನ್ನು ಪ್ರಕಟಿಸತಕ್ಕದ್ದು.
20. ಪುರೋಭಿವೃದ್ಧಿ ತೆರಿಗೆಯನ್ನು ವಿಧಿಸುವುದು
21. ಪ್ರಾಧಿಕಾರವು ಪುರೋಭಿವೃದ್ಧಿ ತೆರಿಗೆಯನ್ನು ನಿರ್ಧರಿಸುವುದು

22. ಪುರೋಭಿವೃದ್ಧಿ ತೆರಿಗೆಯನ್ನು ಸಂದಾಯ ಮಾಡುವ ರೀತಿ

23. ಪುರೋಭಿವೃದ್ಧಿ ತೆರಿಗೆಯ ವಸೂಲಿ

24. ಸಂದಾಯ ಇತ್ಯಾದಿಗಳು ಮುಂದೆ ಸ್ವಾಧೀನಪಡಿಸಿಕೊಳ್ಳುವುದಕ್ಕೆ ಪ್ರತಿಷೇಧಕವಾಗತಕ್ಕುದಲ್ಲ.

25. ಹೆಚ್ಚಿನ ಅಭಿವೃದ್ಧಿಗಾಗಿ ಕಾಮಗಾರಿಗಳನ್ನು ಕೈಕೊಳ್ಳಲು ಪ್ರಾಧಿಕಾರಕ್ಕಿರುವ ಅಧಿಕಾರ

26. ವಸೂಲಾದ ಪುರೋಭಿವೃದ್ಧಿ ತೆರಿಗೆಯನ್ನು ಕೆಲವು ಸಂದರ್ಭದಲ್ಲಿ ನಿಗಮದ ನಿಧಿಗಳಿಗೆ ಜಮೆ ಮಾಡುವುದು.

27. ಪ್ರಾಧಿಕಾರವು ಯೋಜನೆಯನ್ನು ಐದು ವರ್ಷಗಳೊಳಗೆ ಕಾರ್ಯಗತಗೊಳಿಸತಕ್ಕದ್ದು

28. ನಿಗಮದಲ್ಲಿ ನಿಹಿತವಾದ ಮತ್ತು ಬೀದಿಯ ನಿರ್ಮಾಣಕ್ಕಾಗಿ ಪ್ರಾಧಿಕಾರಕ್ಕೆ ಅಗತ್ಯವಿರುವ ಭೂಮಿಯನ್ನು ತಾತ್ಕಾಲಿಕವಾಗಿ ಪ್ರಾಧಿಕಾರದಲ್ಲಿ ನಿಹಿತಗೊಳಿಸತಕ್ಕದ್ದು.

29. ಮೈಸೂರು ಅಧಿನಿಯಮ 1949 ರ ಮೇರೆಗೆ ಪ್ರಾಧಿಕಾರವು ಮತ್ತು ಅಧ್ಯಕ್ಷನು ಅಧಿಕಾರವನ್ನು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

30. ಬೀದಿಗಳು ಪೂರ್ಣಗೊಂಡ ಬಳಿಕ ಅವು ನಿಗಮದಲ್ಲಿ ನಿಹಿತವಾಗತಕ್ಕದ್ದು ಮತ್ತು ಅದು ಅವುಗಳನ್ನು ಸುಸ್ಥಿತಿಯಲ್ಲಿ ಇಡತಕ್ಕದ್ದು.

31. ಕೆಲವು ಸಂದರ್ಭಗಳಲ್ಲಿ ಪ್ರಾಧಿಕಾರವು ನಿವೇಶನಗಳನ್ನು ಮಾರತಕ್ಕುದಲ್ಲ ಅಥವಾ ಅನ್ಯಥಾ ವಿಲೆ ಮಾಡತಕ್ಕುದಲ್ಲ.

32. ಹೊಸ ಬಡಾವಣೆಗಳ ಅಥವಾ ಲೇಔಟುಗಳ ನಿರ್ಮಾಣ ಅಥವಾ ಹೊಸ ಖಾಸಗಿ ಬೀದಿಗಳ ರಚನೆ.

33. ಬಡಾವಣೆಯನ್ನು, ಲೇಔಟನ್ನು ಅಥವಾ ಬೀದಿಯನ್ನು ವ್ಯತ್ಯಾಸಗೊಳಿಸುವುದು ಅಥವಾ ನಾಶಪಡಿಸುವುದು.

34. ಕಾಮಗಾರಿಯನ್ನು ಮಾಡಬೇಕೆಂದು ಆದೇಶವನ್ನು ಮಾಡಲು ಅಥವಾ ಅದಕ್ಕೆ ತಪ್ಪಿದಲ್ಲಿ ತಾನೇ ಮಾಡಲು ಪ್ರಾಧಿಕಾರಕ್ಕಿರುವ ಅಧಿಕಾರ

35. ಒಪ್ಪಂದದ ಮೂಲಕ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಪ್ರಾಧಿಕಾರಕ್ಕೆ ಇರುವ ಅಧಿಕಾರ

36. ಒಪ್ಪಂದದ ಮೂಲಕವಲ್ಲದೆ ಇತರ ರೀತಿಯಲ್ಲಿ ಮಾಡಿಕೊಳ್ಳುವ ಭೂಸ್ವಾಧೀನಕ್ಕೆ ಅನ್ವಯವಾಗುವ ಉಪಬಂಧಗಳು

37. ಸರ್ಕಾರಕ್ಕೆ ಅಥವಾ ನಿಗಮ ಇತ್ಯಾದಿಗಳಿಗೆ ಸೇರಿದ ಭೂಮಿಯನ್ನು ಪ್ರಾಧಿಕಾರಕ್ಕೆ ವರ್ಗಾಯಿಸಲು ಸರ್ಕಾರಕ್ಕಿರುವ ಅಧಿಕಾರ

38. ಸ್ವತ್ತನ್ನು ಗೇಣಿಗೆ ಕೊಡಲು, ಮಾರಲು ಅಥವಾ ವರ್ಗಾಯಿಸಲು ಪ್ರಾಧಿಕಾರಕ್ಕಿರುವ ಅಧಿಕಾರ

39. ಸಾಲವನ್ನು ಪಡೆಯಲು ಪ್ರಾಧಿಕಾರಕ್ಕಿರುವ ಅಧಿಕಾರ

40. ಅಭಿವೃದ್ಧಿ ನಿಧಿ ಮತ್ತು ಅಂಥ ನಿಧಿಗೆ ಜಮೆ ಮಾಡಬೇಕಾದ ಬಾಬ್ತುಗಳು

41. ಬೆಂಗಳೂರು ಅಭಿವೃದ್ಧಿ ನಿಧಿಯ ವಿನಿಯೋಗ

42. ಆದಾಯದ ಮತ್ತು ವೆಚ್ಚದ ವಾರ್ಷಿಕ ಅಂದಾಜನ್ನು ಮಂಡಿಸುವುದು.

43. ಪ್ರಾಧಿಕಾರವು ಅಂಥ ಅಂದಾಜನ್ನು ಅನುಮೋದಿಸುವುದು ಅಥವಾ ತಿದ್ದುಪಡಿ ಮಾಡುವುದು

44. ಅಂದಾಜುಗಳನ್ನು ಮಂಜೂರಾತಿಗಾಗಿ ಸರ್ಕಾರಕ್ಕೆ ಒಪ್ಪಿಸತಕ್ಕದ್ದು.

45. ಅವಶ್ಯವಾದಾಗ ಪೂರಕ ಅಂದಾಜುಗಳನ್ನು ತಯಾರಿಸಬಹುದು ಮತ್ತು ಒಪ್ಪಿಸಬಹುದು

46. ವೆಚ್ಚದ ಬಗೆಗಿನ ಉಪಬಂಧಗಳು

47. ಲೆಕ್ಕಪರಿಶೋಧನೆ

48. ದಸ್ತಾವೇಜನ್ನು ಹಾಜರುಪಡಿಸುವಂತೆ ಮತ್ತು ಸಂಬಂಧಪಟ್ಟ ವ್ಯಕ್ತಿಗಳು ಹಾಜರಾಗುವಂತೆ ಅಗತ್ಯಪಡಿಸಲು ಲೆಕ್ಕಪರಿಶೋಧಕನಿಗಿರುವ ಅಧಿಕಾರ

49. ಸರ್ಕಾರದ ಮಂಜೂರಾತಿಗಾಗಿ ಒಪ್ಪಿಸಬೇಕಾಗಿರುವ ಅಧಿಕಾರಿಗಳ ಮತ್ತು ನೌಕರರ ಅನುಸೂಚಿ

50. ನೇಮಕ, ಇತ್ಯಾದಿಗಳನ್ನು ಯಾರು ಮಾಡತಕ್ಕದ್ದು

51. ಕಲಾ ಆಯೋಗದ ರಚನೆ

52. ಪ್ರವೇಶಾಧಿಕಾರಗಳು

53. ಪ್ರಾಧಿಕಾರದ ನಿರ್ದೇಶನಗಳು

54. ಕಂಪನಿಗಳಿಂದ ಅಪರಾಧಗಳು

55. ಜುಲ್ಮಾನೆಯು ವಸೂಲಾದಾಗ, ಅದನ್ನು ಬೆಂಗಳೂರು ಅಭಿವೃದ್ಧಿ ನಿಧಿಗೆ ಜಮೆ ಮಾಡತಕ್ಕದ್ದು.

56. ಅಪರಾಧಿಗಳ ರಾಜಿ

57. ಪ್ರಾಧಿಕಾರದ ಆದೇಶಗಳು ಮತ್ತು ದಸ್ತಾವೇಜುಗಳ ಅಧಿಪ್ರಮಾಣೀಕರಣ

58. ಸದಸ್ಯರು ಮತ್ತು ಅಧಿಕಾರಿಗಳು ಲೋಕ ನೌಕರರಾಗಿರತಕ್ಕದ್ದು

59. ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿ

60. ಪ್ರಾಸಿಕ್ಯೂಷನ್ನಿನ ಮಂಜೂರಾತಿ

61. ಸದ್ಭಾವನೆಯಿಂದ ಕೈಗೊಳ್ಳಲಾದ ಯಾವುದೇ ಕ್ರಮದ ರಕ್ಷಣೆ

62. ಪ್ರತ್ಯಾಯೋಜಿಸುವ ಅಧಿಕಾರ

63. ಪುನರೀಕ್ಷಣೆ

64. ಪ್ರಾಧಿಕಾರದ ವಿರುದ್ಧ ದಾವೆಯ ನೋಟೀಸು

65. ಪ್ರಾಧಿಕಾರಕ್ಕೆ ನಿರ್ದೇಶನಗಳನ್ನು ಕೊಡಲು ಸರ್ಕಾರಕ್ಕಿರುವ ಅಧಿಕಾರ

66. ಕರ್ತವ್ಯವನ್ನು ನೆರವೇರಿಸುವಲ್ಲಿ ತಪ್ಪುವುದು

67. ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961ರ ತಿದ್ದುಪಡಿ

68. ಗೃಹನಿರ್ಮಾಣ ಮಂಡಲಿಯು ಯಾವುದೇ ಗೃಹನಿರ್ಮಾಣ ಯೋಜನೆಯನ್ನು ಕೈಕೊಳ್ಳತಕ್ಕದಲ್ಲ.

69. ನಿಯಮಗಳ ರಚನಾಧಿಕಾರ

70. ವಿನಿಯಮಗಳ ರಚನಾಧಿಕಾರ

71. ಉಪವಿಧಿಗಳ ರಚನಾಧಿಕಾರ

72. ಈ ಅಧಿನಿಯಮದ ಉಪಬಂಧಗಳ ಉಲ್ಲಂಘನೆಗಾಗಿ ದಂಡ

73. ಈ ಅಧಿನಿಯಮವು ಇತರ ಕಾನೂನುಗಳ ಮೇಲೆ ಅಧ್ಯಾರೋಹಿಯಾಗಿರತಕ್ಕದ್ದು

74. ತೊಂದರೆಗಳ ನಿವಾರಣೆ

75. ಪ್ರಾಧಿಕಾರದ ವಿಘಟನೆ

76. ನಿರಸನ ಮತ್ತು ಉಳಿಸುವಿಕೆಗಳು

77. ಕರ್ನಾಟಕ ಅಧ್ಯಾದೇಶ, 1975ರ 29ರ ನಿರಸನ

## ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ, 1977


1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ

2. 3ನೇ ಪ್ರಕರಣದ ತಿದ್ದುಪಡಿ

3. 62ನೇ ಪ್ರಕರಣದ ತಿದ್ದುಪಡಿ

4. ಕರ್ನಾಟಕ ಅಧ್ಯಾದೇಶ. 1977ರ 5ರ ನಿರಸನ

## ಕರ್ನಾಟಕ ಅಧಿನಿಯಮ, 1976ರ 12

(1976ರ ಮಾರ್ಚ್ ಎಂಟನೆಯ ದಿನಾಂಕದಂದು ಕರ್ನಾಟಕ ರಾಜ್ಯಪತ್ರ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟಿತವಾಗಿದೆ.)

## ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1976

(1976ರ ಮಾರ್ಚ್ ಎರಡನೆಯ ದಿನಾಂಕದಂದು ರಾಜ್ಯಪಾಲರ ಅನುಮತಿಯನ್ನು ಪಡೆದಿದೆ)

ಬೆಂಗಳೂರು ನಗರದ ಮತ್ತು ಅದಕ್ಕೆ ಹೊಂದಿಕೊಂಡಿರುವ ಪ್ರದೇಶಗಳ ಅಭಿವೃದ್ಧಿಗಾಗಿ ಅಭಿವೃದ್ಧಿ ಪ್ರಾಧಿಕಾರವನ್ನು ಸ್ಥಾಪಿಸುವ ಬಗ್ಗೆ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಉಪಬಂಧಿಸುವ ಅಧಿನಿಯಮ.

ಬೆಂಗಳೂರು ನಗರದ ಮತ್ತು ಅದಕ್ಕೆ ಹೊಂದಿಕೊಂಡಿರುವ ಪ್ರದೇಶಗಳ ಅಭಿವೃದ್ಧಿಗಾಗಿ ಅಭಿವೃದ್ಧಿ ಪ್ರಾಧಿಕಾರವನ್ನು ಸ್ಥಾಪಿಸುವ ಬಗ್ಗೆ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಉಪ ಬಂಧಿಸುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಇಪ್ಪತ್ತೇಳನೆಯ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು :–

### ಅಧ್ಯಾಯ – I

### ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ :–** (1) ಈ ಅಧಿನಿಯಮವನ್ನು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1976 ಎಂದು ಕರೆಯತಕ್ಕದ್ದು.

(2) ಇದು 1975 ರ ಡಿಸೆಂಬರ್ ಇಪ್ಪತ್ತನೇಯ ದಿನಾಂಕದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

**2. ಪರಿಭಾಷೆಗಳು :–** ಅಧಿನಿಯಮದಲ್ಲಿ, ಸಂದರ್ಭಕ್ಕೆ ಬೇರೆ ಅರ್ಥದ ಆಗದಿದ್ದರೆ

(ಕ) "ಪ್ರಾಧಿಕಾರ" ಎಂದರೆ, 3ನೇ ಪ್ರಕರಣದ ಮೇರೆಗೆ ರಚಿತವಾದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ;

(ಖ) "ಸೌಕರ್ಯ" ಎಂಬುದು ರಸ್ತೆಯನ್ನು, ಬೀದಿ ದೀಪದ ವ್ಯವಸ್ಥೆಯನ್ನು, ಚರಂಡಿ ವ್ಯವಸ್ಥೆಯನ್ನು, ಲೋಕೋಪಯೋಗಿ ಕಾಮಗಾರಿಗಳನ್ನು ಮತ್ತು ಈ ಅಧಿನಿಯಮದ ಉದ್ದೇಶಗಳಿಗಾಗಿ ಸರ್ಕಾರವು ಅಧಿಸೂಚನೆಯ ಮೂಲಕ ಸೌಕರ್ಯವೆಂದು ನಿರ್ದಿಷ್ಟಪಡಿಸಬಹುದಾದಂಥ ಇತರ ಸೌಲಭ್ಯಗಳನ್ನು ಒಳಗೊಳ್ಳುತ್ತದೆ;

(ಗ) "ಬೆಂಗಳೂರು ಮಹಾನಗರ ಪ್ರದೇಶ" ಎಂದರೆ, 1949ರ ಬೆಂಗಳೂರು ಮುನ್ಸಿಪಲ್ ಕಾರ್ಪೋರೇಷನ್ ಅಧಿನಿಯಮದಲ್ಲಿ (1949ರ ಮೈಸೂರು ಅಧಿನಿಯಮ 69) ಪರಿಭಾಷಿಸಿದಂತೆ, ಬೆಂಗಳೂರು ನಗರ ಪ್ರದೇಶವನ್ನೊಳಗೊಂಡ ಪ್ರದೇಶ, ಈ ಅಧಿನಿಯಮದ ಪ್ರಾರಂಭದ ನಿಕಟಪೂರ್ವದಲ್ಲಿ 1945ರ

ಬೆಂಗಳೂರು ನಗರಾಭಿವೃದ್ಧಿ ಅಧಿನಿಯಮವು (1945ರ ಮೈಸೂರು ಅಧಿನಿಯಮ 5) ಜಾರಿಯಲ್ಲಿದ್ದ ಪ್ರದೇಶಗಳು ಮತ್ತು ಸರ್ಕಾರವು ಕಾಲಕಾಲಕ್ಕೆ ಅಧಿಸೂಚನೆ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ ಮೇಲೆ ಹೇಳಿದವುಗಳ ಪಕ್ಕದಲ್ಲಿರುವ ಇತರ ಪ್ರದೇಶಗಳು;

(ಘ) "ಅಭಿವೃದ್ಧಿ ತೆರಿಗೆ" ಎಂದರೆ ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತ ಮಾಡುವುದರಿಂದ ಉಂಟಾಗುವ ಭೂಮಿಯ ಮೌಲ್ಯದಲ್ಲಿ, ಹೆಚ್ಚಳದ ಸಂಬಂಧವಾಗಿ, 20ನೇ ಪ್ರಕರಣದ ಮೇರೆಗೆ ಸಂದಾಯವಾಗತಕ್ಕ ತೆರಿಗೆ;

(ಙ) "ಕಟ್ಟಡ" ಎಂಬುದು ವಾಸ್ತವವಾಗಿ ಬಳಕೆಯಲ್ಲಿರುವ ಅಥವಾ ಬಳಕೆಯಲ್ಲಿರದ ನಿವಾಸದ, ಉದ್ದಿಮೆಯ, ವಾಣಿಜ್ಯದ ಅಥವಾ ಇತರೆ ಉದ್ದೇಶಗಳಿಗಾಗಿ ಉಪಯೋಗಿಸಲು ಉದ್ದೇಶಿಸಲಾಗಿದ್ದು, ವಾಸ್ತವವಾಗಿ ಉಪಯೋಗಿಸುತ್ತಿರುವ ಅಥವಾ ಇಲ್ಲದಿರುವ ಯಾವುದೇ ರಚನೆಯನ್ನು ಅಥವಾ ನಿರ್ಮಾಣವನ್ನು ಅಥವಾ ರಚನೆಯ ಅಥವಾ ನಿರ್ಮಾಣದ ಭಾಗವನ್ನು ಒಳಗೊಳ್ಳುತ್ತದೆ.

(ಚ) "ಕಟ್ಟಡ ರಚನಾ ಕಾರ್ಯಗಳು" ಎಂಬುದು ಪುನರ್ನಿರ್ಮಾಣ ಕಾರ್ಯಗಳನ್ನು ಕಟ್ಟಡಗಳ ರಚನೆಯ ಬದಲಾವಣೆಗಳನ್ನು ಅಥವಾ ಅವುಗಳ ವಿಸ್ತರಣೆಯನ್ನು ಮತ್ತು ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿ ಸಾಮಾನ್ಯವಾಗಿ ಕೈಕೊಂಡ ಇತರ ಕಾರ್ಯಗಳನ್ನು ಒಳಗೊಳ್ಳುತ್ತದೆ.

(ಛ) "ಉಪವಿಧಿಗಳು" ಎಂದರೆ, ಈ ಅಧಿನಿಯಮದ ಮೇರೆಗೆ ಪ್ರಾಧಿಕಾರವು ರಚಿಸಿದ ಉಪವಿಧಿಗಳು;

(ಜ) "ಅಧ್ಯಕ್ಷ" ಎಂದರೆ, ಪ್ರಾಧಿಕಾರದ ಅಧ್ಯಕ್ಷ;

(ಝ) "ನಿಗಮ" ಎಂದರೆ, ಬೆಂಗಳೂರು ಪೌರ ನಿಗಮ;

(ಞ) "ಅಭಿವೃದ್ಧಿ" ಎಂದರೆ, ಅದರ ವ್ಯಾಕರಣ ವ್ಯತ್ಯಾಸಗಳೊಂದಿಗೆ, ಭೂಮಿಯಲ್ಲಿ, ಅದರ ಮೇಲೆ ಅಥವಾ ಅದರ ಒಳಗೆ ಕಟ್ಟಡ ನಿರ್ಮಾಣದ, ಇಂಜಿನಿಯರಿಂಗ್‌ನ ಅವಾ ಇತರ ಕಾರ್ಯಗಳನ್ನು ಮಾಡುವುದು ಅಥವಾ ಯಾವುದೇ ಕಟ್ಟಡದಲ್ಲಿ ಅಥವಾ ಭೂಮಿಯಲ್ಲಿ ಯಾವುದೇ ಮಹತ್ವದ ಬದಲಾವಣೆಯನ್ನು ಮಾಡುವುದು ಮತ್ತು ಇದು ಪುನರಾಭಿವೃದ್ಧಿಯನ್ನು ಒಳಗೊಳ್ಳುತ್ತದೆ;

(ಟ) "ಇಂಜಿನಿಯರಿಂಗ್ ಕಾರ್ಯಗಳು" ಎಂದರೆ, ರಸ್ತೆಯ ಪ್ರದೇಶಕ್ಕೆ ಅನುಕೂಲ ಮಾಡಿಕೊಡುವ ಸಾಧನಗಳ ರಚನೆ ಅಥವಾ ನಿರ್ಮಾಣ;

(ಠ) "ಸರ್ಕಾರ" ಎಂದರೆ ರಾಜ್ಯ ಸರ್ಕಾರ;

(ಡ) "ಭೂಮಿ" ಎಂಬುದು ಭೂಮಿಯಿಂದ ಮತ್ತು ಭೂಮಿಗೆ ಲಗತ್ತಾಗಿರುವ ವಸ್ತುಗಳಿಂದ ಅಥವಾ ಭೂಮಿಗೆ ಲಗತ್ತಾಗಿರುವ ಯಾವುದೇ ವಸ್ತುವಿಗೆ ಖಾಯಂ ಆಗಿ ಹತ್ತಿಕೊಂಡಿರುವ ವಸ್ತುಗಳಿಂದ ಉಂಟಾಗುವ ಪ್ರಯೋಜನಗಳನ್ನು ಒಳಗೊಳ್ಳುತ್ತದೆ;

(ಢ) "ಸ್ಥಳೀಯ ಪ್ರಾಧಿಕಾರ" ಎಂದರೆ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ರಚಿತವಾದ ಅಥವಾ ಮುಂದುವರಿಸಲಾದ, ಬೆಂಗಳೂರು ನಗರ ಪೌರ ನಿಗಮ, ತಾಲೂಕು ಅಭಿವೃದ್ಧಿ ಮಂಡಲಿ, ಪುರಸಭೆ, ಟೌನ್ ಪಂಚಾಯಿತಿ ಅಥವಾ ಗ್ರಾಮ ಪಂಚಾಯಿತಿ;

(ಣ) "ಪ್ರವೇಶ ಸಾಧನಗಳು" ಎಂಬುದು ವಾಹನಗಳಿಗಾಗಿ ಅಥವಾ ಪಾದಚಾರಿಗಳಿಗಾಗಿ ಇರುವ ಖಾಸಗಿಯಾದ ಅಥವಾ ಸಾರ್ವಜನಿಕವಾದ, ಯಾವುವೇ ಪ್ರವೇಶ ಸಾಧನಗಳನ್ನು ಒಳಗೊಳ್ಳುತ್ತದೆ ಹಾಗೂ ರಸ್ತೆಯನ್ನು ಒಳಗೊಳ್ಳುತ್ತದೆ;

(ತ) "ವಿನಿಯಮ" ಎಂದರೆ, ಈ ಅಧಿನಿಯಮದ ಮೇರೆಗೆ ಪ್ರಾಧಿಕಾರವು ರಚಿಸಿದ ವಿನಿಯಮಗಳು;

(ಥ) "ಬೀದಿ" ಎಂಬುದು ಭಾಟಾ ಮಾರ್ಗವಾಗಿರುವ ಅಥವಾ ಆಗಿರದಿರುವ, ಯಾವುದೇ ಹೆದ್ದಾರಿಯನ್ನು ಮತ್ತು ಯಾವುದೇ ಒಡ್ಡುದಾರಿಯನ್ನು, ಸೇತುವೆಯನ್ನು ಮೇಲುಗಾಲುವೆಯನ್ನು, ಕಮಾನನ್ನು, ರಸ್ತೆಯನ್ನು, ಗಲ್ಲಿಯನ್ನು, ಕಾಲುದಾರಿಯನ್ನು, ಚೌಕವನ್ನು, ಅಂಗಳವನ್ನು, ಓಣಿಯನ್ನು ಅಥವಾ ಹಾದಿಯನ್ನು ಒಳಗೊಳ್ಳುತ್ತದೆ;

(ದ) ಯಾವುದೇ ಕಟ್ಟಡದ ಸಂಬಂಧದಲ್ಲಿ "ನಿರ್ಮಿಸು" ಎಂಬುದು ಕೆಳಕಂಡವುಗಳನ್ನು ಒಳಗೊಳ್ಳುತ್ತದೆ.

i. ಯಾವುದೇ ಕಟ್ಟಡದಲ್ಲಿ ಮಾಡಲಾಗುವ ಮಹತ್ವದ ಬದಲಾವಣೆ ಅಥವಾ ವಿಸ್ತರಣೆ;
ii. ಮೂಲತಃ ಮನುಷ್ಯರ ವಾಸಕ್ಕಾಗಿ ಕಟ್ಟದಿದ್ದ ಯಾವುದೇ ಕಟ್ಟಡವನ್ನು ಮನುಷ್ಯರ ವಾಸ ಯೋಗ್ಯವಾದ ಸ್ಥಳವನ್ನಾಗಿ ಮಾಡಲು ರಚನಾ ಬದಲಾವಣೆಗಳನ್ನು ಮಾಡಿ ಅದನ್ನು ಪರಿವರ್ತಿಸುವುದು;
iii. ಮನುಷ್ಯರ ವಾಸಕ್ಕಾಗಿ ಮೂಲತಃ ಒಂದು ಘಟಕವಾಗಿ ಕಟ್ಟಿದ್ದ ಕಟ್ಟಡವನ್ನು ಒಂದಕ್ಕಿಂತ ಹೆಚ್ಚು ಘಟಕಗಳನ್ನಾಗಿ ಪರಿವರ್ತಿಸುವುದು;
iv. ಮನುಷ್ಯರ ವಾಸಕ್ಕಾಗಿ ಕಟ್ಟಲಾಗಿರುವ ಎರಡು ಅಥವಾ ಹೆಚ್ಚು ಘಟಕಗಳನ್ನು ಅಂಥ ಹೆಚ್ಚು ಸಂಖ್ಯೆಯ ಘಟಕಗಳನ್ನಾಗಿ ಪರಿವರ್ತಿಸುವುದು;
v. ಕಟ್ಟಡದ ಚರಂಡಿ ವ್ಯವಸ್ಥೆಗೆ ಅಥವಾ ನೈರ್ಮಲ್ಯ ವ್ಯವಸ್ಥೆಗೆ ಬಾಧಕವಾಗುವಂತೆ ಅಥವಾ ಅದರ ಸುರಕ್ಷೆಗೆ ಮುಖ್ಯವಾಗಿ ಬಾಧಕವಾಗುವಂತೆ ಕಟ್ಟಡದಲ್ಲಿ ಬದಲಾವಣೆಯನ್ನು ಮಾಡುವುದು;
vi. ಯಾವುದೇ ಕಟ್ಟಡಕ್ಕೆ ಯಾವುದೇ ಕೋಣೆಗಳನ್ನು. "ಕಟ್ಟಡಗಳನ್ನು" ಮನೆಗಳನ್ನು ಅಥವಾ ಇತರ ರಚನೆಗಳನ್ನು ಸೇರಿಸುವುದು; ಮತ್ತು
vii. ಗೋಡೆಯ ಮಾಲೀಕನಿಗೆ ಸೇರಿರದಿರುವ ಯಾವುದೇ ಬೀದಿಗೆ ಅಥವಾ ಭೂಮಿಗೆ ಲಗತ್ತಾಗಿರುವ ಗೋಡೆಯಲ್ಲಿ ಅಂಥ ಬೀದಿಯ ಅಥವಾ ಭೂಮಿಯ ಕಡೆಗೆ ತೆರೆಯುವಂತೆ ಬಾಗಿಲನ್ನು ಇಡುವುದು.

(ಧ) ಇಲ್ಲಿ ಉಪಯೋಗಿಸಲಾಗಿರುವ, ಆದರೆ ಪರಿಭಾಷಿತವಾಗದಿರುವ ಎಲ್ಲ ಪದಗಳಿಗೆ ಮತ್ತು ಪದಾವಳಿಗಳಿಗೆ, ಬೆಂಗಳೂರು ನಗರ ಪೌರ ನಿಗಮ ಅಧಿನಿಯಮ, 1949ರಲ್ಲಿ ಅವುಗಳಿಗೆ ಅನುಕ್ರಮವಾಗಿ ಕೊಟ್ಟಿರುವ ಅರ್ಥಗಳು ಇರತಕ್ಕದ್ದು.

## ಅಧ್ಯಾಯ – II

## ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

3. ಪ್ರಾಧಿಕಾರದ ರಚನೆ ಮತ್ತು ನಿಗಮನ :– (1) ಈ ಅಧಿನಿಯಮವು ಪ್ರಾರಂಭವಾದ ದಿನಾಂಕದ ಅನಂತರ, ಆದಷ್ಟು ಬೇಗನೆ, ಬೆಂಗಳೂರು ಮಹಾ ನಗರ ಪ್ರದೇಶಕ್ಕಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಎಂದು ಕರೆಯಲಾಗುವ ಒಂದು ಪ್ರಾಧಿಕಾರವನ್ನು ಅದಿಸೂಚನೆಯ ಮೂಲಕ ಸರ್ಕಾರವು, ರಚಿಸತಕ್ಕದ್ದು.

(2) ಪ್ರಾಧಿಕಾರವು ಮೇಲೆ ಹೇಳಿದ ಹೆಸರಿನ ಮತ್ತು ನಿರಂತರ ಉತ್ತರಾಧಿಕಾರವನ್ನು ಹಾಗೂ ಸಾಮಾನ್ಯ ಮುದ್ರೆಯನ್ನು ಹೊಂದಿರುವ ನಿಗಮಿತ ನಿಕಾಯವಾಗಿರತಕ್ಕದು ಮತ್ತು ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಚರ ಮತ್ತು ಸ್ಥಿರಾಸ್ತಿಗಳೆರಡನ್ನು ಅರ್ಜಿಸುವ, ಹೊಂದುವ ಮತ್ತು ವಿಲೇ ಮಾಡುವ ಹಾಗೂ ಕರಾರು ಮಾಡಿಕೊಳ್ಳುವ ಅಧಿಕಾರವನ್ನು ಅದು ಹೊಂದಿರತಕ್ಕದ್ದು ಮತ್ತು ಅದು ಸದರಿ ಹೆಸರಿನಲ್ಲಿ ದಾವೆಯನ್ನು ಹೂಡತಕ್ಕದ್ದು ಅಥವಾ ದಾವೆಗೆ ಗುರಿಯಾಗತಕ್ಕದ್ದು.

(3) ಪ್ರಾಧಿಕಾರವು ಈ ಕೆಳಕಂಡ ಸದಸ್ಯರನ್ನು ಹೊಂದಿರತಕ್ಕದು, ಎಂದರೆ :–

(ಕ) ಅಧ್ಯಕ್ಷ;

(ಖ) ಲೆಕ್ಕಗಳಲ್ಲಿ ಮತ್ತು ಲೆಕ್ಕ ಪರಿಶೋಧನೆಯಲ್ಲಿ ಅರ್ಹತೆಗಳುಳ್ಳ ಆರ್ಥಿಕ ಸದಸ್ಯನೆಂದು ಕರೆಯಲಾಗುವ ಒಬ್ಬ ವ್ಯಕ್ತಿ;

(ಗ) ಕರ್ನಾಟಕ ಇಂಜಿನಿಯರ್ ಸೇವೆಯಲ್ಲಿ ಅಧಿಕಾರಿಯಾಗಿದ್ದು ಚೀಫ್ ಇಂಜಿನಿಯರನ ದರ್ಜೆಗೆ ಕಡಿಮೆಯಿಲ್ಲದ ಅಧಿಕಾರಿಯಾಗಿರುವ ಒಬ್ಬ ಇಂಜಿನಿಯರ್;

(ಘ) ನಗರ ಯೋಜನೆಯಲ್ಲಿ ಅನುಭವವಿರುವ ವ್ಯಕ್ತಿಯಾಗಿರುವ, ಒಬ್ಬ ನಹಗರ ಯೋಜಕ;

(ಙ) ವಾಸ್ತುಶಿಲ್ಪದಲ್ಲಿ ಅನುಭವವಿರುವ ಒಬ್ಬ ವ್ಯಕ್ತಿ;

(ಚ) ಕರ್ನಾಟಕ ಆರೋಗ್ಯ ಮತ್ತು ಕುಟುಂಬ ಯೋಜನಾ ಸೇವೆಯಲ್ಲಿದ್ದು ಜಂಟಿ ನಿರ್ದೇಶಕರ ದರ್ಜೆಗೆ ಕಡಿಮೆಯಿಲ್ಲದ ಒಬ್ಬ ಅಧಿಕಾರಿ;

(ಛ) ಕರ್ನಾಟಕ ರಾಜ್ಯ ವಿಧಾನ ಮಂಡಲದ ಸದಸ್ಯರಾಗಿರುವ ಇಬ್ಬರು ವ್ಯಕ್ತಿಗಳು

(ಜ) ಇತರ ಇಬ್ಬರು;

(ಝ) ಬೆಂಗಳೂರು ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಲಿಯ ಒಬ್ಬ ಪ್ರತಿನಿಧಿ;

(ಞ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯ ಒಬ್ಬ ಪ್ರತಿನಿಧಿ;

(ಟ) ಕರ್ನಾಟಕ ರಸ್ತೆ ಸಾರಿಗೆ ನಿಗಮದ ಒಬ್ಬ ಪ್ರತಿನಿಧಿ;

(ಠ) ಬೆಂಗಳೂರು ನಗರ ನಿಗಮದ ಕೌನ್ಸಿಲರುಗಳು ನಿಯಮಿಸಲಾದ ರೀತಿಯಲ್ಲಿ ತಮ್ಮೊಳಗೆ ಚುನಾಯಿಸಿದ ಇಬ್ಬರು ವ್ಯಕ್ತಿಗಳು;

ಪರಂತು, ನಿಗಮದ ರದ್ದಿಯಾತಿಯ ಅವಧಿಯಲ್ಲಿ ಅಥವಾ ಯಾವನೇ ಆಡಳಿತಾಧಿಕಾರಿಯನ್ನು ನೇಮಕ ಮಾಡಿರುವಲ್ಲಿ ನಿಗಮದ ಅಧಿಕಾರಿಗಳ ಪೈಕಿ ಇಬ್ಬರು ವ್ಯಕ್ತಿಗಳನ್ನು ಆಡಳಿತಾಧಿಕಾರಿಯು ನಾಮನಿರ್ದೇಶನ ಮಾಡತಕ್ಕದ್ದು.

(4) (3)ನೇ ಉಪ–ಪ್ರಕರಣದ (ಕ) ದಿಂದ (ಜ) ದ ವರೆಗಿನ (ಎರಡೂ ಸೇರಿ) ಖಂಡಗಳಲ್ಲಿ ಉಲ್ಲೇಖಿಸಲಾದ ವ್ಯಕ್ತಿಗಳನ್ನು ಸರ್ಕಾರವು ನೇಮಿಸತಕ್ಕದ್ದು ಮತ್ತು ಅದರ

(ಟ) ಖಂಡಗಳಲ್ಲಿ ಉಲ್ಲೇಖಿತವಾದ ವ್ಯಕ್ತಿಗಳನ್ನು ಸಂಬಂಧಪಟ್ಟ ನಿಕಾಯಗಳನ್ನು ನಾಮನಿರ್ದೇಶನ ಮಾಡತಕ್ಕದ್ದು;

(ಝ) (ಞ) ಮತ್ತು

ಪರಂತು, ಪ್ರಾಧಿಕಾರದ ಎಲ್ಲ ಪ್ರಥಮ ಸದಸ್ಯರನ್ನು ಸರ್ಕಾರವು ನೇಮಿಸತಕ್ಕದ್ದು.

(5) ಅಧ್ಯಕ್ಷನು, ಇಂಜಿನಿಯರ್ ಸದಸ್ಯನು, ಆರ್ಥಿಕ ಸದಸ್ಯನು ಮತ್ತು ನಗರ ಯೋಜಕ ಸದಸ್ಯನು ಪೂರ್ಣಕಾಲಿಕ ಸದಸ್ಯರಾಗಿರತಕ್ಕದ್ದು ಮತ್ತು ಇತರ ಸದಸ್ಯರು ಅಂಶಕಾಲಿಕ ಸದಸ್ಯರಾಗಿರತಕ್ಕದ್ದು.

(6) (ನೇಮಿತರಾದ ಅಥವಾ ಚುನಾಯಿತರಾದ) ಅಧ್ಯಕ್ಷನ ಮತ್ತು ಇತರ ಸದಸ್ಯರ ಹೆಸರುಗಳನ್ನು ಸರ್ಕಾರವು ಅಧಿಸೂಚನೆಯ ಮೂಲಕ ಪ್ರಕಟಿಸತಕ್ಕದ್ದು.

**4. ಸದಸ್ಯ ಪದಕ್ಕೆ ಅನರ್ಹತೆ :–** (1) ಯಾವನೇ ವ್ಯಕ್ತಿಯು –

(ಕ) ನೈತಿಕ ಅಧಃಪತನವನ್ನೊಳಗೊಂಡಿದೆಯೆಂದು ಸರ್ಕಾರವು ಅಭಿಪ್ರಾಯಪಡುವ ಯಾವುದೇ ಅಪರಾಧಕ್ಕಾಗಿ ಅಪರಾಧಿಯೆಂದು ನಿರ್ಣೀತನಾಗಿ ಕಾರಾವಾಸ ಶಿಕ್ಷೆಗೆ ಗುರಿಯಾಗಿದ್ದರೆ; ಅಥವಾ

(ಖ) ಅಸ್ವಸ್ಥ ಮನಸ್ಕನಾಗಿದ್ದರೆ ಮತ್ತು ಹಾಗೆಂದು ಸಕ್ಷಮ ನ್ಯಾಯಾಲಯದಿಂದ ಘೋಷಿತನಾಗಿದ್ದರೆ; ಅಥವಾ

(ಗ) ಅವಿಮೋಚಿತ ದಿವಾಳಿಯಾಗಿದ್ದರೆ; ಅಥವಾ

(ಘ) ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಸೇವೆಯಿಂದ ಅಥವಾ ಕೇಂದ್ರ ಸರ್ಕಾರದ ರಾಜ್ಯ ಸರ್ಕಾರದ ಒಡೆತನದಲ್ಲಿರುವ ಅಥವಾ ಅವುಗಳಿಂದ ನಿಯಂತ್ರಿತವಾಗಿರುವ ನಿಗಮದ ಸೇವೆಯಿಂದ ತೆಗೆದುಹಾಕಲ್ಪಟ್ಟಿದರೆ ಆಥವಾ ವಜಾ ಆಗಿದ್ದರೆ; ಅಥವಾ

(ಙ) ಪ್ರಾಧಿಕಾರದ ಆದೇಶದ ಮೇರೆಗೆ ಮಾಡಲಾದ ಯಾವುದೇ ಕಾಮಗಾರಿಯಲ್ಲಿ ಅಥವಾ ಆ ಪ್ರಾಧಿಕಾರದೊಡನೆ ಆಥವಾ ಅದರ ಅಧೀನದಲ್ಲಿ ಅಥವಾ ಅದು ಅಥವಾ ಅದರ ಪರವಾಗಿ ಮಾಡಿಕೊಂಡ ಯಾವುದೇ ಕರಾರಿನಲ್ಲಿ ಅಥವಾ ನಿಯೋಜನೆಯಲ್ಲಿ, ಪ್ರತ್ಯಕ್ಷವಾಗಿ ಅಥವಾ ಅಪ್ರತ್ಯಕ್ಷವಾಗಿ, ಸ್ವತಃ ಅಥವಾ ತನ್ನ ಪಾಲುದಾರನ ಮುಖಾಂತರ ಯಾವುದೇ ಹಿಸ್ಸೆಯನ್ನು ಅಥವಾ ಹಿತಾಸಕ್ತಿಯನ್ನು ಹೊಂದಿದ್ದರೆ; ಅಥವಾ

(ಚ) ಚುನಾಯಿತ ಸದಸ್ಯನಾಗಿದ್ದು ನಿಗಮದ ಕೌನ್ಸಿಲರನಾಗಿರುವುದು ಮುಕ್ತಾಯವಾದರೆ; ಅಥವಾ

(ಛ) ವೇತನ ಪಡೆಯುವ ನ್ಯಾಯವಾದಿಯಾಗಿ ಪ್ರಾಧಿಕಾರದ ಪರವಾಗಿ ನಿಯೋಜಿತನಾಗಿದ್ದರೆ, ಅಥವಾ ಪ್ರಾಧಿಕಾರದ ವಿರುದ್ಧವಾಗಿ ನ್ಯಾಯವಾದಿಯ ನಿಯೋಜನೆಯನ್ನು ಒಪ್ಪಿಕೊಂಡಿದ್ದರೆ,

– ಅವನು ಸದಸ್ಯನಾಗಿ ನೇಮಿತನಾಗತಕ್ಕುದಲ್ಲ ಅಥವಾ ಮುಂದುವರಿಯಕ್ಕುದಲ್ಲ.

(2) ಪ್ರಾಧಿಕಾರದ ವ್ಯವಹಾರಗಳಿಗೆ ಸಂಬಂಧಿಸಿದ ಯಾವುದೇ ಜಾಹಿರಾತನ್ನು ಯಾವ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆಯೋ ಆ ವೃತ್ತ ಪತ್ರಿಕೆಯಲ್ಲಿ ಹಿಸ್ಸೆಯನ್ನು ಅಥವಾ ಹಿತಾಸಕ್ತಿಯನ್ನು ಹೊಂದಿದ್ದಾನೆಂಬ ಕಾರಣ ಮಾತ್ರದಿಂದ. (1)ನೇ ಉಪಪ್ರಕರಣದ (ಜ) ಖಂಡದ ಮೇರೆಗೆ ಯಾವನೇ ವ್ಯಕ್ತಿಯು ಅನರ್ಹನಾಗತಕ್ಕುದ್ದಲ್ಲ ಅಥವಾ ಸದರಿ ಖಂಡದ ಅರ್ಥ ವ್ಯಾಪ್ತಿಯಲ್ಲಿ ಯಾವುದೇ ಕರಾರಿನಲ್ಲಿ ಅಥವಾ ನಿಯೋಜನೆಯಲ್ಲಿ ಯಾವುದೇ ಹಿಸ್ಸೆಯನ್ನು ಅಥವಾ ಹಿತಾಸಕ್ತಿಯನ್ನು ಅವನು ಹೊಂದಿರುವುದಾಗಿ ಭಾವಿಸತಕ್ಕುದಲ್ಲ.

**5. ಸದಸ್ಯರ ಪದಾವಧಿ ಮತ್ತು ಸೇವಾ ಷರತ್ತುಗಳು :–** (1) ಸರಕಾರದ ಇಷ್ಟಕ್ಕೆ ಮತ್ತು 6ನೇ ಪ್ರಕರಣದ ಉಪ ಬಂಧಗಳಿಗೆ ಒಳಪಟ್ಟು, ಪ್ರಾಧಿಕಾರದ ಅಧ್ಯಕ್ಷನು ಮತ್ತು ಇತರ ಸದಸ್ಯರು ತಾವು ಅಧಿಕಾರವನ್ನು ವಹಿಸಿಕೊಂಡ ದಿನಾಂಕದಿಂದ ಮೂರು ವರ್ಷದ ಅವಧಿಯವರೆಗೆ ಆ ಪದದಲ್ಲಿ ಇರತಕ್ಕದ್ದು ಮತ್ತು ನಿಯಮಿಸಬಹುದಾದಂಥ ಷರತ್ತುಗಳ ಮೇರೆಗೆ ಅವರು ಪುನರ್ನೇಮಕ್ಕೆ ಅರ್ಹರಾಗಿರತಕ್ಕದ್ದು;

ಪರಂತು, ನಿಗಮದ ಪ್ರತಿನಿಧಿಯ ಪದಾವಧಿಯು, ಅವನು ಕೌನ್ಸಿಲರನಾಗಿರುವುದು ಮುಕ್ತಾಯವಾದಾಗ ಅಥವಾ ನಿಗಮವು ರದ್ದಾದಾಗ ಕೊನೆಗೊಳ್ಳತಕ್ಕದ್ದು.

(2) ಸದಸ್ಯರ ಇತರ ಸೇವಾ ಷರತ್ತುಗಳು ನಿಯಮಿಸಬಹುದಾದಂಥವುಗಳಾಗಿರತಕ್ಕದ್ದು.

(3) ಪದನಿಮಿತ್ತ ಸದಸ್ಯನಲ್ಲದ ಇತರ ಯಾವನೇ ಸದಸ್ಯನು ತಾನೆ ಬರೆದು ಸಹಿ ಮಾಡಿ ಸರ್ಕಾರಕ್ಕೆ ಕಳುಹಿಸುವ ಮೂಲಕ ತನ್ನ ಪದಕ್ಕೆ ರಾಜೀನಾಮೆಯನ್ನು ಕೊಡಬಹುದು. ಆದರೆ ಸರ್ಕಾರವು ಅವನ ರಾಜೀನಾಮೆಯನ್ನು ಅಂಗೀಕರಿಸುವವರೆಗೆ ಅವನು ಪದದಲ್ಲಿ ಮುಂದುವರಿಯತಕ್ಕದ್ದು.

(4) ಸದಸ್ಯನು ರಾಜೀನಾಮೆಯಕೊಟ್ಟಿದ್ದರಿಂದಾಗಿ ಅಥವಾ ಅನ್ಯಥಾ ಸಂಭವಿಸಿದ ಯಾವುದೇ ಸಾಂದರ್ಭಿಕ ಖಾಲಿಸ್ಥಾನವನ್ನು ಹೊಸ ನೇಮಕದ ಅಥವಾ ಚುನಾವಣೆಯ ಮೂಲಕ ಭರ್ತಿ ಮಾಡಬಹುದು ಮತ್ತು ಹಾಗೆ ನೇಮಿತನಾದ ಅಥವಾ ಚುನಾಯಿತನಾದ ವ್ಯಕ್ತಿಯು, ಯಾವ ಸದಸ್ಯನ ಸ್ಥಳದಲ್ಲಿ ಅವನು ನೇಮಿತನಾಗಿರುವನೋ ಅಥವಾ ಚುನಾಯಿತನಾಗಿರುವನೋ ಆ ಸದಸ್ಯನು ಆ ಪದದಲ್ಲಿ ಇರಬಹುದಾಗಿದ್ದ ಉಳಿದ ಅವಧಿಯವರೆಗೆ, ಆ ಪದದಲ್ಲಿ ಇರತಕ್ಕದ್ದು.

(5) ಪ್ರಾಧಿಕಾರದ ರಚನೆಯಲ್ಲಿ ಅಥವಾ ಪುನರ್ರಚನೆಯಲ್ಲಿ ಯಾವುದೇ ಖಾಲಿ ಸ್ಥಾನವು ಅಥವಾ ನ್ಯೂನತೆಯು ಇದೆಯೆಂಬ ಕಾರಣ ಮಾತ್ರದಿಂದ ಪ್ರಾಧಿಕಾರದ ಯಾವುದೇ ಕಾರ್ಯವು ಅಥವಾ ವ್ಯವಹರಣೆಯು ಅಸಿಂಧುವಾಗಿರತಕ್ಕುದಲ್ಲ.

**6. ಸದಸ್ಯನನ್ನು ತೆಗೆದುಹಾಕುವುದು :–** ಯಾವನೇ ಸದಸ್ಯನನ್ನು ಕೆಳಕಂಡ ಸಂದರ್ಭಗಳಲ್ಲಿ ಸರ್ಕಾರವು ತೆಗೆದುಹಾಕತಕ್ಕದ್ದು.

(ಕ) 4ನೇ ಪ್ರಕರಣದಲ್ಲಿ ನಮೂದಿಸಲಾಗಿರುವ ಅನರ್ಹತೆಗಳ ಪೈಕಿ ಯಾವುದಕ್ಕಾದರೂ ಅವನು ಒಳಪಟ್ಟರೆ;

ಪರಂತು, ಆ ಪ್ರಕರಣದ (ಙ) ಖಂಡದಲ್ಲಿ ನಮೂದಿಸಲಾಗಿರುವ ಅನರ್ಹತೆಗೆ ಒಳಪಡುವನೆಂಬ ಕಾರಣದಿಂದ ಯಾವನೆ ಸದಸ್ಯನನ್ನು, ತನ್ನ ಮನವಿಯನ್ನು ಸಲ್ಲಿಸಲು ಅವನಿಗೆ ಅವಕಾಶವನ್ನು ಕೊಟ್ಟ ಹೊರತು ತೆಗೆದುಹಾಕತಕ್ಕುದಲ್ಲ; ಅಥವಾ

(ಖ) ಕಾರ್ಯವನ್ನು ನಿರ್ವಹಿಸಲು ಅವನು ಇಂಕಾರ ಮಾಡಿದರೆ ಅಥವಾ ಕಾರ್ಯ ನಿರ್ವಹಿಸಲು ಅಸಮರ್ಥನಾದರೆ; ಅಥವಾ

(ಗ) ಗೈರುಹಾಜರಿಗಾಗಿ ಪ್ರಾಧಿಕಾರದಿಂದ ಅನುಮತಿ ಪಡೆದುಕೊಳ್ಳದೆ, ಅವನು ಒಂದಾದ ಮೇಲೊಂದು ಬರುವ ಪ್ರಾಧಿಕಾರದ ಮೂರು ಸಭೆಗಳಿಗೆ ಗೈರುಹಾಜರಾದರೆ; ಅಥವಾ

(ಘ) ಅವನ್ನು ಆ ಪದದಲ್ಲಿ ಮುಂದುವರಿಸಿದರೆ ಸಾರ್ವಜನಿಕ ಹಿತಾಸಕ್ತಿಗೆ ಧಕ್ಕೆಯುಂಟಾಗುವಂತೆ ತನ್ನ ಸ್ಥಾನವನ್ನು ಅವನು ದುರುಪಯೋಗಪಡಿಸಿಕೊಂಡಿದ್ದಾನೆಂದು ಸರ್ಕಾರವು ಅಭಿಪ್ರಾಯಪಟ್ಟರೆ:

ಪರಂತು, ತನ್ನ ಮನವಿಯನ್ನು ಸಲ್ಲಿಸಲು ಯಾವನೇ ಸದಸ್ಯನಿಗೆ ಅವಕಾಶವನ್ನು ಕೊಟ್ಟು ಹೊರತು, ಅವನನ್ನು ಈ ಖಂಡದ ಮೇರೆಗೆ ತೆಗೆದುಹಾಕತಕ್ಕದ್ದಲ್ಲ.

7. **ಪುನರ್ನೇಮಕಕ್ಕೆ ಪಾತ್ರತೆ :–** ತಾನು ಸದಸ್ಯನಾಗಿರುವುದು ಮುಕ್ತಾಯಗೊಂಡ ಯಾವನೇ ವ್ಯಕ್ತಿಯು, 4ನೇ ಪ್ರಕರಣದ ಮೇರೆಗೆ ಅನರ್ಹನಾಗಿದ್ದ ಹೊರತು, ಸದಸ್ಯನಾಗಿ ಪುನರ್ನೇಮಕಕ್ಕೆ ಪಾತ್ರನಾಗಿರತಕ್ಕದ್ದು.

8. **ಪ್ರಾಧಿಕಾರದ ಸಭೆಗಳು :–** (1) ಪ್ರಾಧಿಕಾರದ ಸಭೆಗಳನ್ನು ಅಧ್ಯಕ್ಷನು ಕರೆಯತಕ್ಕದ್ದು ಮತ್ತು ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯೊಳಗಿನ ಯಾವುದೇ ಸ್ಥಳದಲ್ಲಿ ಅವುಗಳನ್ನು ನಡೆಸತಕ್ಕದ್ದು.

(2) ವಿನಿಮಯಗಳ ಮೂಲಕ ಉಪಬಂಧಿಸಬಹುದಾದಂಥ ಕಾಲಗಳಲ್ಲಿ ಪ್ರಾಧಿಕಾರವು ಸಭೆ ಸೇರತಕ್ಕದ್ದು ಮತ್ತು ತನ್ನ ಸಭೆಗಳಲ್ಲಿನ ಕಾರ್ಯಕಲಾಪಗಳ ಸಂಬಂಧದಲ್ಲಿ (ಸಭೆಗಳಲ್ಲಿನ ಕೋರಂ ಸೇರಿದಂತೆ) ಅಂಥ ಪ್ರಕ್ರಿಯೆಯ ನಿಯಮಗಳನ್ನು ಅನುಸರಿಸತಕ್ಕದ್ದು.

(4) ಪ್ರಾಧಿಕಾರದ ಯಾವುದೇ ಸಭೆಯ ಮುಂದೆ ಬರುವ ಎಲ್ಲ ಪ್ರಶ್ನೆಗಳನ್ನು, ಸಭೆಯಲ್ಲಿ ಹಾಜರಿದ್ದ ಮತದಾನ ಮಾಡುವ ಸದಸ್ಯರ ಬಹುಮತದ ಮೂಲಕ ತೀರ್ಮಾನಿಸತಕ್ಕದ್ದು ಮತ್ತು ಸಮಾನವಾಗಿ ಮತಗಳು ಬಂದಲ್ಲಿ ಅಧ್ಯಕ್ಷನು ಅಥವಾ ಅವನ ಗೈರು ಹಾಜರಿಯಲ್ಲಿ ಅಧ್ಯಕ್ಷತೆ ವಹಿಸುವ ವ್ಯಕ್ತಿಯು, ಎರಡನೇಯ ಅಥವಾ ನಿರ್ಣಾಯಕವಾದ ಮತವನ್ನು ಹೊಂದಿರತಕ್ಕದ್ದು ಮತ್ತು ಅದನ್ನು ಚಲಾಯಿಸತಕ್ಕದ್ದು.

(5) ಪ್ರಾಧಿಕಾರದ ಅಥವಾ ಅದರ ಯಾವುದೇ ಸಮಿತಿಯ ಸಭೆಯಲ್ಲಿ ಯಾವನೇ ಸದಸ್ಯನು, ಯಾವ ವಿಷಯದಲ್ಲಿ ಪ್ರತ್ಯಕ್ಷವಾಗಿ ಅಥವಾ ಅಪ್ರತ್ಯಕ್ಷವಾಗಿ ಸ್ವತಃ ಅಥವಾ ತನ್ನ ಪಾಲುದಾರನ ಮೂಲಕ ಅವನು ಯಾವುದೇ ಹಿಸ್ಸೆಯನ್ನು ಅಥವಾ ಹಿತಾಸಕ್ತಿಯನ್ನು ಹೊಂದಿರುವನೋ ಆ ಯಾವುದೇ ವಿಷಯಕ್ಕೆ ಸಂಬಂಧಿಸಿದ ಚರ್ಚೆಯಲ್ಲಿ ಭಾಗವಹಿಸತಕ್ಕುದಲ್ಲ ಅಥವಾ ಆ ವಿಷಯದ ಬಗ್ಗೆ ಮತವನ್ನು ಕೊಡತಕ್ಕುದಲ್ಲ.

9. **ಸಮಿತಿಗಳ ನೇಮಕ :–** (1) ಅಧ್ಯಕ್ಷರನ್ನು ಮತ್ತು ತಾನು ಸೂಕ್ತವೆಂದು ಆಲೋಚಿಸುವಂಥ ಇತರ ಸದಸ್ಯರನ್ನು ಒಳಗೊಂಡ ಸಮಿತಿಗಳನ್ನು ಪ್ರಾಧಿಕಾರವು ಕಾಲ ಕಾಲಕ್ಕೆ ನೇಮಿಸಬಹುದು ಮತ್ತು ಯಾವ ವ್ಯಕ್ತಿಯ ಅಥವಾ ವ್ಯಕ್ತಿಗಳ ಸಹಾಯವನ್ನು ಅಥವಾ ಸಲಹೆಯನ್ನು ತಾನು ಅಪೇಕ್ಷಿಸಬಹುದೋ ಅಂಥ ಯಾವನೇ ವ್ಯಕ್ತಿಯನ್ನು ಅಥವಾ ವ್ಯಕ್ತಿಗಳನ್ನು, ಸರ್ಕಾರದ ಅನುಮೋದನೆಯನ್ನು ಪಡೆದು ನಿಯಮಿತಸಬಹುದಾದಂಥ

ರೀತಿಯಲ್ಲಿ ಮತ್ತು ಅಂಥ ಅವಧಿಯವರೆಗೆ ಅಂಥ ಸಮಿತಿಗಳಲ್ಲಿ ಜೊತೆಗೆ ಸೇರಿಸಿಕೊಳ್ಳಬಹುದು ಮತ್ತು ಈ ಅಧಿನಿಯಮದ ಉದ್ದೇಶಗಳಿಗೆ ಸಂಬಂಧಪಟ್ಟ ಯಾವುದೇ ವಿಷಯವನ್ನು ವಿಚಾರಣೆಗೆ ಮತ್ತು ವರದಿಗಾಗಿ ಅಂಥ ಸಮಿತಿಗಳಿಗೆ ಕಳಿಸಬಹುದು.

(2) (1) ನೇ ಉಪಪ್ರಕರಣದ ಮೇರೆಗೆ ನೇಮಿತವಾದ ಪ್ರತಿಯೊಂದು ಸಮಿತಿಯು ಪ್ರಾಧಿಕಾರವು ಕಾಲಕಾಲಕ್ಕೆ ಅದಕ್ಕೆ ಕೊಡಬಹುದಾದ ಯಾವುದೇ ಸೂಚನೆಗಳಿಗೆ ಅನುಗುಣವಾಗಿ ಕೆಲಸಮಾಡತಕ್ಕದು ಮತ್ತು ಹಾಗೆ ನೇಮಿತವಾದ ಯಾವುದೇ ಸಮಿತಿಯ ರಚನೆಯನ್ನು ಪ್ರಾಧಿಕಾರವು ಯಾವುದೇ ಕಾಲದಲ್ಲಿ ಬದಲಾಯಿಸಬಹುದು. ಅಥವಾ ಅಂಥ ಯವುದೇ ನೇಮಕವನ್ನು ರದ್ದುಗೊಳಸಿಬಹುದು. ಅಧ್ಯಕ್ಷನು ಅಂಥ ಪ್ರತಿಯೊಂದು ಸಮಿತಿಯ ಅಧ್ಯಕ್ಷನಾಗಿರತಕ್ಕದ್ದು.

**10. ವಿವಿಧ ಪ್ರಾಧಿಕಾರಗಳ ಅಧಿಕಾರಗಳು** – (1) ಅಧ್ಯಕ್ಷನು ಪ್ರಾಧಿಕಾರದ ಪರವಾಗಿ ಯಾವುದೇ ಅಂದಾಜನ್ನು ಮಂಜೂರು ಮಾಡಬಹುದು, ಟೆಂಡರುಗಳನ್ನು ಕರೆಯಬಹುದು ಅಥವಾ ಒಂದು ಲಕ್ಷ ರೂಪಾಯಿಗಳಿಗೆ ಮೀರದ ಮೌಲ್ಯದ ಅಥವಾ ಮೊತ್ತದ ಯಾವುದೇ ಕರಾರನ್ನು ಅಥವಾ ಒಪ್ಪಂದವನ್ನು ಅಂಥ ಕರಾರು ಅಥವಾ ಒಪ್ಪಂದವು ತನ್ನ ಪರವಾಗಿದ್ದರೆ ತನ್ನನ್ನು ಯಾವ ರೀತಿಯಲ್ಲಿ ಮತ್ತು ನಮೂನೆಯಲ್ಲಿ ಬದ್ಧಗೊಳಿಸುತ್ತಿತ್ತೋ ಅಂಥ ರೀತಿಯಲ್ಲಿ ಮತ್ತು ನಮೂನೆಯಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿಗೆ ಅನುಸಾರವಾಗಿ ಮಾಡಿಕೊಳ್ಳಬಹುದು; ಮತ್ತು ಅಂಥ ಪ್ರತಿಯೊಂದು ಕರಾರನ್ನು ಅಥವಾ ಒಪ್ಪಂದವನ್ನು ಪ್ರಾಧಿಕಾರದ ನಿಕಟತಮ ಸಭೆಯಲ್ಲಿ ಅದಕ್ಕೆ ವರದಿ ಮಾಡತಕ್ಕದ್ದು.

(2) ಪ್ರಾಧಿಕಾರವು ಯಾವುದೇ ಅಂದಾಜನ್ನು ಮಂಜೂರು ಮಾಡಬಹುದು ಟೆಂಡರುಗಳನ್ನು ಕರೆಯಬಹುದು, ಅಥವಾ ಒಂದು ಲಕ್ಷ ರೂಪಾಯಿಗಳಿಗೆ ಮೀರಿದ ಆದರೆ ಐದು ಲಕ್ಷ ರೂಪಾಯಿಗಳಿಗೆ ಮೀರದ ಮೌಲ್ಯದ ಯಾವುದೇ ಕರಾರನ್ನು ಅಥವಾ ಒಪ್ಪಂದವನ್ನು ಮಾಡಿಕೊಳ್ಳಬಹುದು; ಮತ್ತು ಯಾವುದೇ ಅಂದಾಜಿನ, ಕರಾರಿನ ಅಥವಾ ಒಪ್ಪಂದದ ಮೌಲ್ಯವು ಐದು ಲಕ್ಷ ರೂಪಾಯಿಗಳನ್ನು ಮೀರಿದರೆ, ಸರ್ಕಾರದ ಪೂರ್ವ ಮಂಜೂರಾತಿಯಿಲ್ಲದೆ, ಅದನ್ನು ಮಾಡಿಕೊಳ್ಳತಕ್ಕುದಲ್ಲ.

(3) (1)ನೇ ಉಪ–ಪ್ರಕರಣದಲ್ಲಿ ಉಲ್ಲೇಖಿಸಲಾದ ಕರಾರವಲ್ಲದ ಅಥವಾ ಒಪ್ಪಂದವಲ್ಲದ, ಪ್ರಾಧಿಕಾರದ ಪರವಾದ ಪ್ರತಿಯೊಂದು ಕರಾರು ಅಥವಾ ಒಪ್ಪಂದವು ಲಿಖಿತದಲ್ಲಿ ಇತರಕ್ಕದ್ದು ಮತ್ತು ಅಧ್ಯಕ್ಷನು ಅದಕ್ಕೆ ಸಹಿ ಮಾಡತಕ್ಕದ್ದು ಮತ್ತು ಪ್ರಾಧಿಕಾರದ ಸಾಮಾನ್ಯ ಮೊಹರನ್ನು ಹಾಕತಕ್ಕದು.

(4) ಪ್ರಾಧಿಕಾರದ ಸಾಮಾನ್ಯ ಮೊಹರು ಅಧ್ಯಕ್ಷನ ಅಭಿರಕ್ಷೆಯಲ್ಲಿರತಕ್ಕದ್ದು ಮತ್ತು ಅವನು ಯಾವುದೇ ಕರಾರಿಗೆ ಅಥವಾ ಇತರ ಲಿಖಿತಕ್ಕೆ ಅವನು ಸ್ವತಃ ಮೊಹರು ಹಾಕತಕ್ಕದ್ದು.

(5) ಯಾವುದೇ ಟೆಂಡರನ್ನು ಅಂಗೀಕರಿಸುವುದು ನಿಯಮಿಸಬಹುದಾದಂಥ ನಿಯಮಗಳಿಗೆ ಒಳಪಟ್ಟಿರತಕ್ಕದ್ದು.

(6) ಈ ಪ್ರಕರಣದಲ್ಲಿ ಮತ್ತು ಅದರ ಮೇರೆಗೆ ಮಾಡಲಾದ ನಿಯಮಗಳಲ್ಲಿ ಉಪಬಂಧಿಸಿದಂತೆ ಮಾಡಿರದ ಅಥವಾ ನಿರ್ವಹಿಸಿರದ ಕರಾರು ಶೂನ್ಯವಾಗತಕ್ಕದ್ದು ಮತ್ತು ಅದು ಪ್ರಾಧಿಕಾರದ ಮೇಲೆ ಬಂಧನಕಾರಿಯಾಗತಕ್ಕುದಲ್ಲ.

**11. ತಾನು ಮಾಡುವ ಅಥವಾ ತನ್ನ ವಿರುದ್ಧವಾಗಿ ಮಾಡಲಾಗುವ ಕ್ಲೇಮುಗಳ ಬಗ್ಗೆ ಪ್ರಾಧಿಕಾರವು ರಾಜಿಯನ್ನು ಮಾಡಿಕೊಳ್ಳಬಹುದು :–** ಈ ಅಧಿನಿಯಮದ ಮೇರೆಗೆ ತಾನು ಮಾಡಿಕೊಂಡ ಯಾವುದೇ ಕರಾರಿನಿಂದ ಉದ್ಭವಿಸಿದ ಯಾವುದೇ ಕ್ಲೇಮಿನ ಅಥವಾ ಮಾಗಣಿಯ ಬಗ್ಗೆ ಅಥವಾ ತಾನು ಕೈಗೊಂಡ ಅಥವಾ ತನ್ನ ವಿರುದ್ಧ ಕೈಗೊಳ್ಳಲಾದ ಯಾವುದೇ ಕ್ರಮದ ಬಗ್ಗೆ ಅಥವಾ ತಾನು ಹೂಡಿದ ಅಥವಾ ತನ್ನ ವಿರುದ್ಧವಾಗಿ ಹೂಡಲಾದ ಯಾವುದೇ ದಾವೆಯ ಬಗ್ಗೆ, ತಾನು ಸಾಕೆಂದು ಭಾವಿಸುವಷ್ಟು ಹಣದ ಮೊತ್ತಕ್ಕೆ ಅಥವಾ ಇತರ ನಷ್ಟ ಪರಿಹಾರಕ್ಕೆ ಪ್ರಾಧಿಕಾರವು ಬಗೆಹರಿಸಿಕೊಳ್ಳಬಹುದು ಅಥವಾ ರಾಜಿ ಮಾಡಿಕೊಳ್ಳಬಹುದು;

ಪರಂತು, ಐವತ್ತು ಸಾವಿರ ರೂಪಾಯಿಗಳವರೆಗೆ ಮೀರುವ ಅಂಥ ಯಾವುದೇ ಕ್ಲೇಮಿನ ಅಥವಾ ಮಾಗಣಿಯ ಬಗ್ಗೆ ಸರ್ಕಾರದ ಪೂರ್ವಾನುಮೋದನೆಯಿದ್ದ ಹೊರತು, ಹಾಗೆ ಬಗೆಹರಿಸಿಕೊಳ್ಳತಕ್ಕುದಲ್ಲ ಅಥವಾ ರಾಜಿ ಮಾಡಿಕೊಳ್ಳತಕ್ಕುದಲ್ಲ.

**12. ಅಧ್ಯಕ್ಷನ ಕರ್ತವ್ಯಗಳು :–** ಅಧ್ಯಕ್ಷನು

(ಕ) ಕಾಯಿಲೆಯಿಂದ ಅಥವಾ ಇತರ ಸಮಂಜಸ ಕಾರಣಗಳಿಂದಾಗಿ ಪ್ರತಿಬಂಧಿತನಾದ ಹೊರತು, ಪ್ರಾಧಿಕಾರದ ಪ್ರತಿ ಸಭೆಯಲ್ಲೂ ಹಾಜರಿರತಕ್ಕದ್ದು;

(ಖ) ಪ್ರಾಧಿಕಾರದ ಗೊತ್ತುವಳಿಗಳನ್ನು ಕಾರ್ಯಗೊಳಿಸತಕ್ಕು;

(ಗ) ಪ್ರಾಧಿಕಾರದ ಪತ್ರ ವ್ಯವಹಾರಗಳನ್ನು ಇಡತಕ್ಕದ್ದು ಮತ್ತು ನಡೆಸತಕ್ಕದ್ದು

(ಘ) ಸರ್ಕಾರವು ನಿರ್ದೇಶಿಸಬಹುದಾದಂಥ ಯೋಜನೆಗಳನ್ನು ಮತ್ತು ಕಾಮಗಾರಿಗಳನ್ನು ಕಾರ್ಯಗತಗೊಳಿಸತಕ್ಕದ್ದು ಹಾಗೂ ನಿರ್ವಹಿಸತಕ್ಕದ್ದು ಮತ್ತು ಅದಕ್ಕೆ ತಗಲಬಹುದಾದ ಅವಶ್ಯಕ ವೆಚ್ಚವನ್ನು ವಹಿಸತಕ್ಕದ್ದು;

(ಙ) ಪ್ರಾಧಿಕಾರದ ನಿರ್ವಹಣಾ ಆಡಳಿತದ ವಿಷಯಗಳಲ್ಲಿ ಮತ್ತು ಲೆಕ್ಕಪತ್ರಗಳಿಗೆ ಹಾಗೂ ದಾಖಲೆಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ, ಪ್ರಾಧಿಕಾರದ ಎಲ್ಲ ಅಧಿಕಾರಿಗಳ ಮತ್ತು ನೌಕರರ ಕಾರ್ಯಗಳ ಮತ್ತು ವ್ಯವಹರಣೆಗಳ ಮೇಲ್ವಿಚಾರಣೆಯನ್ನು ಮಾಡತಕ್ಕದ್ದು ಮತ್ತು ಅವುಗಳನ್ನು ನಿಯಂತ್ರಿಸತಕ್ಕದ್ದು ಮತ್ತು 54ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದಷ್ಟರ ಮಟ್ಟಿಗೆ ಅಂಥ ಅಧಿಕಾರಿಗಳ ಮತ್ತು ನೌಕರರ ಸೇವೆಗೆ ಸಂಬಂಧಿಸಿದ, ಮತ್ತು ಅವರ ವೇತನಕ್ಕೆ, ವಿಶೇಷ ಹಕ್ಕುಗಳಿಗೆ ಹಾಗೂ ಭತ್ಯೆಗಳಿಗೆ ಸಂಬಂಧಿಸಿದ ಎಲ್ಲ ಪ್ರಶ್ನೆಗಳನ್ನು ವಿಲೆ ಮಾಡತಕ್ಕದ್ದು ; ಮತ್ತು

(ಚ) ಪ್ರಾಧಿಕಾರದ ವ್ಯವಹರಣೆಯ ನಡವಳಿಕೆಗಳು ಒಂದು ಪ್ರತಿಯನ್ನು ಮತ್ತು ಸರ್ಕಾರವು ಕಾಲಕಾಲಕ್ಕೆ ಕೇಳಬಹುದಾದ ಯಾವುದೇ ವಿವರಪಟ್ಟಿಕೆಯನ್ನು ಅಥವಾ ಇತರ ಮಾಹಿತಿಯನ್ನು ಸರ್ಕಾರಕ್ಕೆ ಒದಗಿಸತಕ್ಕದ್ದು.

**13. ಹಂಗಾಮಿ ಅಧ್ಯಕ್ಷನ ನೇಮಕ :–** ಅಧ್ಯಕ್ಷನ ಗೈರುಹಾಜರಿಯಲ್ಲಿ, ಅಧ್ಯಕ್ಷನಾಗಿ ಕಾರ್ಯನಿರ್ವಹಿಸಲು ಒಬ್ಬ ವ್ಯಕ್ತಿಯನ್ನು ಸರ್ಕಾರವು ನೇಮಿಸಬಹುದು, ಮತ್ತು ಹಾಗೆ ನೇಮಿತವಾದ ವ್ಯಕ್ತಿಯು ಅಧ್ಯಕ್ಷನ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅವನು ಕರ್ತವ್ಯಗಳನ್ನು ನೇರವೇರಿಸತಕ್ಕದು ಮತ್ತು ಈ ಅಧಿನಿಯಮದ ಮೇರೆಗೆ ಅಧ್ಯಕ್ಷನಿಗೆ ಪ್ರದತ್ತವಾಗಿರುವ ಅಥವಾ ವಿದಿಸಲಾಗಿರುವ ಹೊಣೆಗಳಿಗೆ, ನಿರ್ಬಂಧಗಳಿಗೆ ಮತ್ತು ಷರತ್ತುಗಳಿಗೆ ಅವನು ಒಳಪಟ್ಟಿರತಕ್ಕದ್ದು.

**14**. **ಪ್ರಾಧಿಕಾರದ ಉದ್ದೇಶಗಳು :–** ಬೆಂಗಳೂರು ಮಹಾನಗರ ಪ್ರದೇಶದ ಅಭಿವೃದ್ಧಿಗೆ ಉತ್ತೇಜನ ಕೊಡುವುದ ಮತ್ತು ಅದನ್ನು ಸಾಧಿಸುವುದು ಪ್ರಾಧಿಕಾರದ ಉದ್ದೇಶಗಳಾಗಿರತಕ್ಕದ್ದು ಮತ್ತು ಆ ಉದ್ದೇಶಕ್ಕಾಗಿ, ತನ್ನ ಅಧಿಕಾರ ವ್ಯಾಪ್ತಿಯೊಳಗಿನ ಅಥವಾ ಹೊರಗಿನ ಪ್ರದೇಶಗಳಲ್ಲಿ ಇರುವ ಚರ ಮತ್ತು ಸ್ಥಿರ ಸ್ವತ್ತನ್ನು ಅರ್ಜಿಸಲು, ಹೊಂದಲು, ನಿರ್ವಹಿಸಲು ಮತ್ತು ವಿಲೇ ಮಾಡಲು, ಕಟ್ಟಡದ, ಇಂಜಿನಿಯರಿಂಗ್‍ನ ಮತ್ತು ಇತರ ಕೆಲಸಗಳನ್ನು ಕಾರ್ಯಗತಗೊಳಿಸಲು ಮತ್ತು ಸಾಮಾನ್ಯವಾಗಿ ಅಂಥ ಅಭಿವೃದ್ಧಿಯ ಉದ್ದೇಶಕ್ಕಾಗಿ ಹಾಗೂ ಅದಕ್ಕೆ ಅನುಷಂಗಿಕವಾದ ಉದ್ದೇಶಗಳಿಗಾಗಿ ಅವಶ್ಯಕವಾದ ಅಥವಾ ಯುಕ್ತವಾದ ಎಲ್ಲ ಕಾರ್ಯಗಳನ್ನು ಮಾಡಲು ಪ್ರಾಧಿಕಾರವು ಅಧಿಕಾರವನ್ನು ಹೊಂದಿರುತಕ್ಕದ್ದು.

## ಅಧ್ಯಾಯ – I I I

## ಅಭಿವೃದ್ಧಿ ಯೋಜನೆಗಳು

**15. ಕಾಮಗಾರಿಗಳನ್ನು ಕೈಗೊಳ್ಳಲು ಮತ್ತು ಅಭಿವೃದ್ಧಿ ಇತ್ಯಾದಿಗಳಿಗಾಗಿ ವೆಚ್ಚವನ್ನು ವಹಿಸಲು ಪ್ರಾಧಿಕಾರಕ್ಕೆ ಇರುವ ಅಧಿಕಾರ :–** (1) ಪ್ರಾಧಿಕಾರವು,

(ಕ) ಬೆಂಗಳೂರು ಮಹಾನಗರ ಪ್ರದೇಶದ ಅಭಿವೃದ್ಧಿಗಾಗಿ (ಇದರಲ್ಲಿ ಇನ್ನು ಮುಂದೆ ಅಭಿವೃದ್ಧಿ ಯೋಜನೆ ಎಂದು ಉಲ್ಲೇಖಿಸಲಾಗುವ) ವಿವರವಾದ ಯೋಜನೆಗಳನ್ನು ರೂಪಿಸಿಕೊಳ್ಳಬಹುದು, ಮತ್ತು

(ಖ) ಬೆಂಗಳೂರು ಮಹಾನಗರ ಪ್ರದೇಶದ ಅಭಿವೃದ್ಧಿಗಾಗಿ, ಸರ್ಕಾರದ ಪೂರ್ವಾನುಮೋದನೆಯನ್ನು ಪಡೆದು ಯಾವುದೇ ಕಾಮಗಾರಿಗಳನ್ನು ಕಾಲಕಾಲಕ್ಕೆ ಕೈಕೊಳ್ಳಬಹುದು ಮತ್ತು ಅವುಗಳಿಗಾಗಿ ಹಾಗೂ ಅಭಿವೃದ್ಧಿ ಯೋಜನೆಗಳನ್ನು ರೂಪಿಸುವುದಕ್ಕಾಗಿ ಮತ್ತು ಕಾರ್ಯಗತಗೊಳಿಸುವುದಕ್ಕಾಘಿ ಸಹ ವೆಚ್ಚವನ್ನು ವಹಿಸಬಹುದು.

(2) ಪ್ರಾಧಿಕಾರವು

(i) ತನ್ನ ಸಂಪನ್ಮೂಲಗಳು ಸಾಕಷ್ಟಿವೆಯೆಂದು ತನಗೆ ಮನದಟ್ಟಾದರೆ ತಾನಾಗಿಯೇ; ಅಥವಾ

(iii) ಯಾವುದೇ ಯೋಜನೆಯನ್ನು ರೂಪಿಸಲು ಮತ್ತು ಕಾರ್ಯಗತಗೊಳಿಸಲು ಅವಶ್ಯವಿರುವ ಹಣವನ್ನು ಸ್ಥಳೀಯ ಪ್ರಾಧಿಕಾರವು ಪ್ರಾಧಿಕಾರದ ವಶಕ್ಕೆ ಒಪ್ಪಿಸಿದರೆ, ಆ ಸ್ಥಳೀಯ ಪ್ರಾಧಿಕಾರದ ಶಿಫಾರಸಿನ ಮೇಲೆ; ಅಥವಾ

(iii) ಅನ್ಯಥಾ,

ಯಾವುದೇ ಹೊಸ ಅಥವಾ ಹೆಚ್ಚಿನ ಅಭಿವೃದ್ಧಿ ಯೋಜನೆಗಳನ್ನು ಕಾಲಕಾಲಕ್ಕೆ ಕೈಕೊಳ್ಳಬಹುದು ಮತ್ತು ಕಾರ್ಯಗತಗೊಳಿಸಬಹುದು.

(3) ಈ ಅಧಿನಿಯಮದಟಜಿಟು ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ ಸರ್ಕಾರವು ತಾನು ಅವಶ್ಯಕವೆಂದು ಭಾವಿಸುವಂಥ ಯಾವುದೇ ಅಭಿವೃದ್ಧಿ ಯೋಜನೆಯನ್ನು ಅಥವಾ ಕಾಮಗಾರಿಯನ್ನು ಪ್ರಾಧಿಕಾರವು ಕೈಕೊಳ್ಳುವಂತೆ ಮತ್ತು ಸರ್ಕಾರವು ನಿರ್ದಿಷ್ಟಪಡಿಸಬಹುದಾದ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು ನಿರ್ವಹಿಸುವಂತೆ ಅದನ್ನು ಅಗತ್ಯಪಡಿಸಬಹುದು.

**16. ಅಭಿವೃದ್ಧಿ ಯೋಜನೆಯಲ್ಲಿ ಒದಗಿಸಬೇಕಾದ ವಿವರಗಳು :–** 15ನೇ ಪ್ರಕರಣದ ಮೇರೆಗಿನ ಪ್ರತಿಯೊಂದು ಅಭಿವೃದ್ಧಿ ಯೋಜನೆಯು :–

(1) ಯೋಜನೆಯಲ್ಲಿ ಅಡಕವಾದ ಪ್ರದೇಶದ ಪರಿಮಿತಿಯೊಳಗೆ, ಕೆಳಕಂಡವುಗಳ ಬಗೆಗೆ ಅವಕಾಶವನ್ನು ಕಲ್ಪಿಸತಕ್ಕದ್ದು.

(ಕ) ಪ್ರಾಧಿಕಾರದ ಅಭಿಪ್ರಾಯದಲ್ಲಿ ಯೋಜನೆಯನ್ನು ನಿರ್ವಹಿಸುವುದಕ್ಕಾಗಿ ಅವಶ್ಯವಾಗುವ ಅಥವಾ ಅದರಿಂದ ಬಾಧಿತವಾಗುವ ಯಾವುದೇ ಭೂಮಿಯನ್ನು ಅರ್ಜಿಸುವುದು;

(ಖ) ಕಟ್ಟಡಗಳ ರಚನೆಯು ಮತ್ತು ಪುನಾರಚನೆಯು ಹಾಗೂ ಬೀದಿಗಳ ರಚನೆಯು ಮತ್ತು ಬದಲಾವಣೆಯೂ ಸೇರಿದಂತೆ ಎಲ್ಲ ಅಥವಾ ಯಾವುದೇ ಭೂಮಿಯನ್ನು ಗುರುತು ಹಾಕುವುದು ಮತ್ತು ಪುನಃ ಗುರುತು ಹಾಕುವುದು;

(ಗ) ಒಳಚರಂಡಿ ವ್ಯವಸ್ಥೆ, ನೀರು ಸರಬರಾಜು ಮತ್ತು ವಿದ್ಯುಚ್ಛಕ್ತಿ;

(2) ಮೇಲೆ ಹೇಳಿದ ಪರಿಮಿತಿಯೊಳಗೆ, ಕೆಳಕಂಡವುಗಳ ಬಗೆಗೆ ಅವಕಾಶವನ್ನು ಕಲ್ಪಿಸಬಹುದು;

(ಕ) ಒಳಚರಂಡಿ ವ್ಯವಸ್ಥೆಯನ್ನು ಹೆಚ್ಚು ಉತ್ತಮಗೊಳಿಸಲು ಪ್ರಾಧಿಕಾರವು ಯುಕ್ತವೆಂದು ಭಾವಿಸುವ ಯಾವುದೇ ಭೂಮಿಯನ್ನು ಎತ್ತರಿಸುವುದು;

(ಖ) ಯೋಜನೆಯಲ್ಲಿ ಅಡಕವಾದ ಪ್ರದೇಶದಲ್ಲಿ ಅಥವಾ ಅದಕ್ಕೆ ಹೊಂದಿಕೊಂಡಿರುವ ಯಾವುದೇ ಪ್ರದೇಶದಲ್ಲಿ ಉತ್ತಮ ವಾಯುಸಂಚಾರಕ್ಕಾಗಿ ಖಾಲಿ ಜಾಗವನ್ನು ಬಿಡುವುದು;

(ಗ) ಅಗತ್ಯವಿರುವ ನೈರ್ಮಲ್ಯ ವ್ಯವಸ್ಥೆ;

(ಘ) ಮಾರುಕಟ್ಟೆಗಳ ಸ್ಥಾಪನೆ ಅಥವಾ ರಚನೆ ಮತ್ತು ಇತರ ಸಾರ್ವಜನಿಕ ಅಗತ್ಯಗಳು ಹಾಗೂ ಅನುಕೂಲತೆಗಳು; ಮತ್ತು

(3) ಮೇಲೆ ಹೇಳಿದ ಪರಿಮಿತಿಯೊಳಗೆ ಮತ್ತು ಹೊರಗೆ ಮನೆಗಳನ್ನು ಕಟ್ಟುವುದಕ್ಕಾಗಿ ಏರ್ಪಾಡನ್ನು ಮಾಡಬಹುದು.

**17. ಯೋಜನೆಯು ಪೂರ್ಣಗೊಂಡ ಮೇಲಿನ ಪ್ರತಿಕ್ರಿಯೆ :–** (1) ಅಭಿವೃದ್ಧಿ ಯೋಜನೆಯನ್ನು ತಯಾರಿಸಿದಾಗ, ಯೋಜನೆಯನ್ನು ತಯಾರು ಮಾಡಿರುವ ಸಂಗತಿಯನ್ನು ಮತ್ತು ಅದರಲ್ಲಿ ಅಡಕವಾಗಿರುವ ಪ್ರದೇಶದ ಪರಿಮಿತಿಗಳನ್ನು ನಿರೂಪಿಸಿ, ಮತ್ತು ಯೋಜನೆಯ ವಿವರಗಳನ್ನು, ಅದರಲ್ಲಿ ಅಡಕವಾಗಿರುವ ಪ್ರದೇಶದ ನಕ್ಷೆಯನ್ನು, ಸ್ವಾಧೀನಪಡಿಸಿಕೊಳ್ಳಬೇಕೆಂದು ಉದ್ದೇಶಿಸಲಾಗಿರುವ ಭೂಮಿಯನ್ನು ಮತ್ತು ಯಾವ ಭೂಮಿಯ ಬಗ್ಗೆ ಅಭಿವೃದ್ಧಿ ತೆರಿಗೆಯನ್ನು ವಿಧಿಸಬಹುದಾಗಿದೆಯೋ ಆ ಭೂಮಿಯನ್ನು ನಿರ್ದಿಷ್ಟಪಡಿಸುವ ವಿವರಣ ಪತ್ರವನ್ನು ಯಾವ ಸ್ಥಳದಲ್ಲಿ ಎಲ್ಲ ಯುಕ್ತ ಕಾಲದಲ್ಲಿ ನೋಡಬಹುದೋ ಆ ಸ್ಥಳವನ್ನು ಹೆಸರಿಸಿ ಪ್ರಾಧಿಕಾರವು ಅಧಿಸೂಚನೆಯನ್ನು ತಯಾರಿಸತಕ್ಕದ್ದು.

(2) ಸದರಿ ಅಧಿಸೂಚನೆಯ ಪ್ರತಿಯನ್ನು ನಿಗಮಕ್ಕೆ ಕಳುಹಿಸತಕ್ಕದ್ದು ಮತುತ ಅದು ತಲುಪಿದ ಮೂವತ್ತು ದಿನಗಳೊಳಗೆ, ಆ ಯೋಜನೆಗೆ ಸಂಬಂಧಿಸಿದಂತೆ ನಿಗಮವು ತಾನು ಸೂಕ್ತವೆಂದು ಆಲೋಚಿಸಬಹುದಾದ ಯಾವುದೇ ಮನವಿಯನ್ನು, ಇದರಲ್ಲಿ ಇನ್ನು ಮುಂದೆ ಉಪಬಂಧಿಸಿರುವಂತೆ ಸರ್ಕಾರಕ್ಕೆ ಕಳುಹಿಸಿಕೊಡುವುದಕ್ಕಾಗಿ, ಪ್ರಾಧಿಕಾರಕ್ಕೆ ಕಳುಹಿಸಿ ಕೊಡತಕ್ಕದ್ದು.

(3) ಸದರಿ ಅಧಿಸೂಚನೆಯ ಪ್ರತಿಯು, ಸರ್ಕಾರಿ ರಾಜಪತ್ರದ ಒಂದಾದ ಮೇಲೊಂದು ಬರುವ ಮೂರು ಸಂಚಿಕೆಗಳಲ್ಲಿ ಪ್ರಕಟಿತವಾಗುವಂತೆ ಪ್ರಾಧಿಕಾರವು ಮಾಡತಕ್ಕದ್ದು ಮತ್ತು ಅದನ್ನು ತನ್ನ ಸ್ವಂತ ಕಚೇರಿಯ, ಡೆಪ್ಯೂಟಿ ಕಮೀಷನರ್ ಕಚೇರಿಯ, ನಿಗಮದ ಕಚೇರಿಯ ಎದ್ದು ಕಾಣುವ ಭಾಗದಲ್ಲಿ ಮತ್ತು ಪ್ರಾಧಿಕಾರವು ಅವಶ್ಯವೆಂದು ಪರ್ಯಾಲೋಚಿಸಬಹುದಾದಂಥ ಇತರ ಸ್ಥಳಗಳಲ್ಲಿ ಅಂಟಿಸುವಂತೆ ಮಾಡತಕ್ಕದ್ದು.

(4) (2)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ನಿಗಮದಿಂದ ಯಾವ ಮನವಿಯೂ ಬರದಿದ್ದರೆ, ನಿಗಮವು ಆ ಯೋಜನೆಗೆ ಸಹಮತಿಸಿರುವುದೆಂದು ಭಾವಿಸತಕ್ಕದ್ದು.

(5) ಯೋಜನೆಯನ್ನು ಕಾರ್ಯಗತ ಮಾಡುವಲ್ಲಿ ಯಾವುದನ್ನು ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಲಾಗಿದೆಯೋ ಅಥವಾ ಯಾವುದರ ಬಗ್ಗೆ ಅಭಿವೃದ್ಧಿ ತೆರಿಗೆಯನ್ನು ವಸೂಲು ಮಾಡಲು ಪ್ರಾಧಿಕಾರವು ಉದ್ದೇಶಿಸಿದೆಯೋ ಅಂಥ ಯಾವುದೇ ಕಟ್ಟಡದ ಅಥವಾ ಭೂಮಿಯ ಮೇಲೆ ಸ್ವತ್ತು ತೆರಿಗೆಯನ್ನು ಅಥವಾ ಭೂ ಕಂದಾಯವನ್ನು ಸಂದಾಯ ಮಾಡಲು ಪ್ರಥಮತಃ ಹೊಣೆಗಾರನಾಗಿರುವ ಯಾವ ವ್ಯಕ್ತಿಯ ಹೆಸರು ಸ್ಥಳೀಯ ಪ್ರಾಧಿಕಾರದ ಕರನಿರ್ಧಾರಣ ಪಟ್ಟಿಯಲ್ಲಿ ಅಥವಾ ಭೂ ಕಂದಾಯದ ರಿಜಿಸ್ಟರಿನಲ್ಲಿ ಕಂಡುಬರುತ್ತದೆಯೋ ಆ ಪ್ರತಿಯೊಬ್ಬ ವ್ಯಕ್ತಿಗೆ ಅಂಥ ಅಧಿಸೂಚನೆಯು ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿತವಾದ ದಿನಾಂಕದ ನಿಕಟ ತರುವಾಯದ ಮೂವತ್ತು ದಿನಗಳೊಳಗೆ ಪ್ರಾಧಿಕಾರವು ನೋಟೀಸನ್ನು ಕೊಡತಕ್ಕದ್ದು ಮತ್ತು ಆ ಕಟ್ಟಡವನ್ನು ಅಥವಾ ಭೂಮಿಯನ್ನು ಏಕೆ ಸ್ವಾಧೀನ ಪಡಿಸಿಕೊಳ್ಳಬಾರದೆಂಬ ಬಗ್ಗೆ. ಅಭಿವೃದ್ಧಿ ತೆರಿಗೆಯನ್ನು ಏಕೆ ವಸೂಲು ಮಾಡಕೂಡದೆಂಬ ಬಗ್ಗೆ. ಈ ನೋಟೀಸು ತಲುಪಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಕಾರಣ ತೋರಿಸಿದಂತೆ ಅಂಥ ವ್ಯಕ್ತಿಯನ್ನು ಅಗತ್ಯಪಡಿಸತಕ್ಕದ್ದು.

(6) ಅಧ್ಯಕ್ಷನು ಅಥವಾ ಅವನ ಆದೇಶದ ಮೇರೆಗೆ ಯಾರಾದರೂ ನೋಟೀಸಿಗೆ ಸಹಿ ಮಾಡತಕ್ಕದ್ದು, ಮತ್ತು ಅದನ್ನು

(ಕ) ಅವನಿಗೆ ಖುದ್ದಾಗಿ ಕೊಡುವ ಮೂಲಕ ಅಥವಾ ಅಂಥ ವ್ಯಕ್ತಿಯು ಗೈರು ಹಾಜರಾಗದಿದ್ದರೆ, ಅಥವಾ ಸಿಕ್ಕದಿದ್ದರೆ, ಅವನ ಏಜೆಂಟನಿಗೆ, ಅಥವಾ ಯಾವ ಏಜೆಂಟನೂ ಸಿಕ್ಕದಿದ್ದರೆ ಅದನ್ನು ಆ ಭೂಮಿಯ ಅಥವಾ ಕಟ್ಟಡದ ಮೇಲೆ ಇಡುವುದರ ಮೂಲಕ ; ಅಥವಾ

(ಖ) ಅಂಥ ವ್ಯಕ್ತಿಯು ಮಾಮೂಲಾಗಿ ವಾಸಿಸುತ್ತಿದ್ದ ಅಥವಾ ವ್ಯವಹಾರ ನಡೆಸುತ್ತಿದ್ದ ಅಥವಾ ವಾಸಿಸುತ್ತಿದ್ದನೆಂದು ಅಥವಾ ವ್ಯವಹಾರ ನಡೆಸುತ್ತಿದ್ದನೆಮದು ಕೊನೆಯದಾಗಿ ತಿಳಿದು ಬಂದ ಸ್ಥಳದಲ್ಲಿ ಅದನ್ನು ಇಡುವ ಮೂಲಕ ; ಅಥವಾ

(ಗ) ಅಂಥ ವ್ಯಕ್ತಿಯ ಮಾಮೂಲಾಗಿ ವಾಸಿಸುತ್ತಿದ್ದ ಅಥವಾ ವ್ಯವಹಾರ ನಡೆಸುತ್ತಿದ್ದ ಅಥವಾ ವಾಸಿಸುತ್ತಿದ್ದಾನೆಂದು ಅಥವಾ ವ್ಯವಹರಿಸುತ್ತಿದ್ದನೆಂದು ಕೊನೆಯದಾಗಿ ತಿಳಿದು ಬಂದ ಸ್ಥಳದ ವಿಳಾಸಕ್ಕೆ ನೋಂದಾಯಿತ ಅಂಚೆಯ ಮೂಲಕ ಜಾರಿಮಾಡತಕ್ಕದ್ದು.

**18. ಯೋಜನೆಯ ಮಂಜೂರಾತಿ :–** (1) 17ನೇ ಪ್ರಕರಣದಲ್ಲಿ ಉಪಬಂದಿಸಿರುವಂತೆ ಯೋಜನೆಯನ್ನು ಪ್ರಕಟಿಸಿದ ಅನಂತರ ಮತ್ತು ನೋಟೀಸುಗಳನ್ನು ಜಾರಿ ಮಾಡಿದ ಅನಂತರ ಮತ್ತು ಆ ಬಗ್ಗೆ ಮನವಿಗಳು ಯಾವುದಾದರೂ ಇದ್ದರೆ, ಅವುಗಳನ್ನು ಪರಿಶೀಲಿಸಿದ ಅನಂತರ, ಪ್ರಾಧಿಕಾರವು ತಾನು ಸೂಕ್ತವೆಂದು ಆಲೋಚಿಸುವಂಥ ಮಾರ್ಪಾಡುಗಳನ್ನು ಅದರಲ್ಲಿ ಮಾಡಿ

(ಕ) ಅದರಲ್ಲಿ ಮಾಡಿರುವ ಯಾವುದೇ ಮಾರ್ಪಾಡುಗಳ ಕಾರಣಗಳನ್ನು ಒಳಗೊಂಡು, ಆ ಯೋಜನೆಯ ಪೂರ್ಣ ವಿವರಗಳನ್ನುಳ್ಳ ವಿವರಣೆಯನ್ನು;

(ಖ) ಪೂರ್ಣ ನಕ್ಷೆಗಳನ್ನು ಮತ್ತು ಯೋಜನೆಯನ್ನು ಕಾರ್ಯಗತಗೊಳಿಸುವ ಬಗೆಗಿನ ಖರ್ಚಿನ ಅಂದಾಜನ್ನು;

(ಗ) ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಲಾಗಿರುವ ಭೂಮಿಯನ್ನು ನಿರ್ದಿಷ್ಟಪಡಿಸುವ ವಿವರ ಪತ್ರವನ್ನು;

(ಘ) 17ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಬಂದ ಯಾವುದೇ ಮನವಿಯನ್ನು;

(ಙ) ಆ ಭೂಮಿಗೆ ಸಂಬಂಧಪಟ್ಟಂತೆ 17ನೇ ಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಪ್ರಕಟಿಸಿದ ದಿನಾಂಕದಂದು ಮುನಿಸಿಪಲ್ ಕರ ನಿರ್ಧಾರಣಾ ಪುಸ್ತಕದಲ್ಲಿ ನಮೂದಿಸಲಾಗಿರುವಂತೆ ಕರಾಧರ ಮೌಲ್ಯವನ್ನು ಅಥವಾ (ಗ) ಖಂಡದ ಮೇರೆಗಿನ ವಿವರ ಪತ್ರದಲ್ಲಿ ನಿರ್ದಿಷ್ಟಪಡಿಸಿರುವ ಎಲ್ಲ ಭೂಮಿಗಳ ಭೂ ಕಂದಾಯವನ್ನು ತೋರಿಸುವ ಅನುಸೂಚಿಯನ್ನು ; ಮತ್ತು

(ಚ) ನಿಯಮಿಸಬಹುದಾದಂಥ ಇತರ ವಿವರಗಳು ಯಾವುದಾದರೂ ಇದ್ದರೆ ಅವುಗಳನ್ನು ಒದಗಿಸಿ ಯೋಜನೆಯನ್ನು ಸರ್ಕಾರಕ್ಕೆ ಮಂಜೂರಾತಿಗಾಗಿ ಸಲ್ಲಿಸತಕ್ಕದ್ದು.

(2) ಯಾವುದೇ ಅಭಿವೃದ್ಧಿ ಯೋಜನೆಯು ಗೃಹನಿರ್ಮಾಣಕ್ಕಾಗಿ ಉಪಬಂಧವನ್ನು ಕಲ್ಪಿಸಿರುವಲ್ಲಿ, ಗೃಹಗಳ ನಿರ್ಮಾಣಕ್ಕಾಗಿ ನಕ್ಷೆಯನ್ನು ಮತ್ತು ಅಂದಾಜುಗಳನ್ನು ಸಹ ಪ್ರಾಧಿಕಾರವು ಸರ್ಕಾರಕ್ಕೆ ಒಪ್ಪಿಸತಕ್ಕದ್ದು.

(3) ಅದಕ್ಕೆ ಒಪ್ಪಿಸಲಾದ ಪ್ರಸ್ತಾಪವನ್ನು ಪರ್ಯಾಲೋಚಿಸಿದ ಅನಂತರ ಸರ್ಕಾರವು ಆ ಯೋಜನೆಗೆ ಆದೇಶದ ಮೂಲಕ ಮಂಜೂರಾತಿಯನ್ನು ಕೊಡಬಹುದು.

**19. ಮಂಜೂರಾತಿಯಾದ ಮೇಲೆ, ಸ್ವಾಧೀನಪಡಿಸಿಕೊಳ್ಳಬೇಕಾದ ಭೂಮಿಯ ವಿವರಗಳನ್ನು ಕೊಡುವ ಘೋಷಣೆಯನ್ನು ಪ್ರಕಟಿಸತಕ್ಕದ್ದು :–** (1) ಯೋಜನೆಯು ಮಂಜೂರಾದ ಮೇಲೆ, ಅಂಥ ಮಂಜೂರಾತಿಯ ಸಂಗತಿಯನ್ನು ಆ ಯೋಜನೆಯ ಉದ್ದೇಶಗಳಿಗಾಗಿ ಪ್ರಾಧಿಕಾರವು ಸ್ವಾಧೀನಪಡಿಸಿಕೊಳ್ಳಬೇಕೆಂದು ಉದ್ದೇಶಿಸಿದ ಭೂಮಿಯು ಸಾರ್ವಜನಿಕ ಉದ್ದೇಶಕ್ಕಾಗಿ ಅಗತ್ಯವಾಗಿದೆ ಎಂಬುದನ್ನು ವಿವರಿಸಿರುವ ಘೋಷಣೆಯನ್ನು ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸತಕ್ಕದ್ದು.

(2) ಸ್ವಾಧೀನಪಡಿಸಿಕೊಳ್ಳಬೇಕೆಂದು ಉದ್ದೇಶಿಸಲಾಗಿರುವ ಭೂಮಿಯು ಇರುವ ಸ್ಥಳದ ಪರಿಮಿತಿಗಳನ್ನು, ಅದು ಯಾವ ಉದ್ದೇಶಕ್ಕಾಗಿ ಅವಶ್ಯವಾಗಿದೆ ಎಂಬುದನ್ನು ಆದರೆ ಅಂದಾಜು ವಿಸ್ತೀರ್ಣವನ್ನು ಹಾಗೂ ಭೂಮಿಯ ನಕ್ಷೆಯನ್ನು ಪರಿಶೀಲಿಸಬಹುದಾದ ಸ್ಥಳವನ್ನು ಘೋಷಣೆಯಲ್ಲಿ ವಿವರಿಸತಕ್ಕದ್ದು.

(3) ಆ ಭೂಮಿಯ ಸಾರ್ವಜನಿಕ ಉದ್ದೇಶಕ್ಕಾಗಿ ಅಗತ್ಯವಾಗಿದೆ ಎಂಬ ಬಗ್ಗೆ ಸದರಿ ಘೋಷಣೆಯು ನಿರ್ಣಾಯಕ ಸಾಕ್ಷ್ಯವಾಗಿರತಕ್ಕದ್ದು ಮತ್ತು ಸದರೀ ಘೋಷಣೆಯು ಪ್ರಕಟವಾದ ಮೇಲೆ, ಯೋಜನೆಯನ್ನು ಕಾರ್ಯಗತಗೊಳಿಸಲು ಪ್ರಾಧಿಕಾರವು ಉದ್ಯುಕ್ತವಾಗತಕ್ಕದ್ದು.

(4) ಯೋಜನೆಯ ಯಾವುದೇ ಭಾಗದಲ್ಲಿ ಮೇಲ್ಪಾಟನ್ನು ಮಾಡಲು ಸಾಧ್ಯವಿದೆಯೆಂದು ಯಾವುದೇ ಕಾಲದಲ್ಲಿ ಪ್ರಾಧಿಕಾರಕ್ಕೆ ಕಂಡುಬಂದರೆ, ಸದರೀ ಉದ್ದೇಶಕ್ಕಾಗಿ ಪ್ರಾಧಿಕಾರವು ಯೋಜನೆಯನ್ನು ವ್ಯತ್ಯಾಸಗೊಳಿಸಬಹುದು ಮತ್ತು ವ್ಯತ್ಯಾಸಗೊಳಿಸಲಾಗಿರುವ ಯೋಜನೆಯನ್ನು (5) ಮತ್ತು (6)ನೇ ಉಪಪ್ರಕರಣಗಳ ಉಪಬಂಧಗಳಿಗೊಳಪಟ್ಟು ಯೋಜನೆಯನ್ನು ಕಾರ್ಯಗತಗೊಳಿಸಲು ಕೂಡಲೇ ಉದ್ಯುಕ್ತವಾಗತಕ್ಕದ್ದು.

(5) ಹಾಗೆ ವ್ಯತ್ಯಾಸಗೊಳಿಸಲಾದ ಯೋಜನೆಯನ್ನು ಕಾರ್ಯಗತಗೊಳಿಸುವ ಅಂದಾಜು ಖರ್ಚು, ಮಂಜೂರಾದ ಯೋಜನೆಯನ್ನು ಕಾರ್ಯಗತಗೊಳಿಸಲು ಬೇಕಾಗುವ ಅಂದಾಜು ಖರ್ಚಿಗಿಂತ ಶೇಕಡಾ 5 ರಷ್ಟು ಹೆಚ್ಚಾದರೆ, ಹಾಗೆ ವ್ಯತ್ಯಾಸಗೊಳಿಸಲಾದ ಯೋಜನೆಯನ್ನು ಸರ್ಕಾರದ ಪೂರ್ವ ಮಂಜೂರಾತಿಯಿಲ್ಲದೆ ಕಾರ್ಯಗತಗೊಳಿಸಲು ಪ್ರಾಧಿಕಾರವು ಉದ್ಯುಕ್ತವಾಗತಕ್ಕುದಲ್ಲ.

(6) 18ನೇ ಪ್ರಕರಣದ (1)ನೇ ಉಪಪ್ರಕರಣದ (ಗ) ಖಂಡದಲ್ಲಿ ಉಲ್ಲೇಖಿಸಲಾದ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದುದಲ್ಲದ ಇತರ ಯಾವುದೇ ಭೂಮಿಯನ್ನು ಒಪ್ಪಂದದ ಮೂಲಕವಲ್ಲದೆ ಅನ್ಯಥಾ ಸ್ವಾಧೀನಪಡಿಸಿಕೊಳ್ಳುವುದನ್ನು ಹಾಗೆ ವ್ಯತ್ಯಾಸಗೊಳಿಸಲಾದ ಯೋಜನೆಯು ಒಳಗೊಂಡರೆ, 17ನೇ ಮತ್ತು 18ನೇ ಪ್ರಕರಣದ (1)ನೇ ಉಪಪ್ರಕರಣದ ಉಪಬಂಧಗಳು ವ್ಯತ್ಯಾಸಗೊಳಿಸಲಾದ ಭಾಗವು ಯೋಜನೆಯೇ ಆಗಿದ್ದರೆ ಹೇಗೋ ಹಾಗೆ ಅದೇ ರೀತಿಯಲ್ಲಿ ಹಾಗೆ ವ್ಯತ್ಯಾಸಗೊಳಿಸಲಾದ ಭಾಗಕ್ಕೂ ಅನ್ವಯಿಸತಕ್ಕದ್ದು.

**20. ಪುರೋಭಿವೃದ್ಧಿ ತೆರಿಗೆಯನ್ನು ವಿಧಿಸುವುದು :–** (1) ಯಾವುದೇ ಅಭಿವೃದ್ಧಿ ಯೋಜನೆಯನ್ನು ಕಾರ್ಯಗತಗೊಳಿಸುವುದರ ಪರಿಣಾಮವಾಗಿ, ಯೋಜನೆಯನ್ನು ಕಾರ್ಯಗತಗೊಳಿಸುವುದಕ್ಕೆ ಅಗತ್ಯವಿರದ, ಆದರೆ ಯೋಜನೆಯಲ್ಲಿ ಅಡಕವಾಗಿರುವ ಪ್ರದೇಶದಲ್ಲಿನ ಯಾವುದೇ ಭೂಮಿಯ ಮಾರುಕಟ್ಟೆ ಮೌಲ್ಯವು ಹೆಚ್ಚಿದೆಯೆಂದು ಅಥವಾ ಹೆಚ್ಚಾಗುವುದೆಂದು ಪ್ರಾಧಿಕಾರವು ಅಭಿಪ್ರಾಯ ಪಟ್ಟಲ್ಲಿ, ಅಂಥ ಯೋಜನೆಯನ್ನು ಕಾರ್ಯಗತಗೊಳಿಸುವುದರಿಂದಾಗಿ ಭೂಮಿಯ ಮೌಲ್ಯವು ಹೆಚ್ಚಿದ ಬಗ್ಗೆ ಆ ಭೂಮಿಯ ಒಡೆಯನಿಗೆ ಅಥವಾ ಅದರಲ್ಲಿ ಹಿತಾಸಕ್ತಿ ಇರುವ ಯಾವನೇ ವ್ಯಕ್ತಿಗೆ ಪುರೋಭಿವೃದ್ಧಿ ತೆರಿಗೆಯನ್ನು ವಿಧಿಸಲು ಪ್ರಾಧಿಕಾರವು ಹಕ್ಕುಳ್ಳದ್ದಾಗಿರತಕ್ಕದ್ದು.

(2) ಮೌಲ್ಯದಲ್ಲಿನ ಅಂಥ ಹೆಚ್ಚಳವು, ಯೋಜನೆಯನ್ನು ಪೂರ್ಣವಾಗಿ ಕಾರ್ಯಗೊಳಿಸಿದ ಬಳಿಕ, ಆ ಭೂಮಿಯ ಮೇಲೆ ಕಟ್ಟಡಗಳು ಇಲ್ಲದಿರುತ್ತಿದ್ದರೆ ಹೇಗೋ ಹಾಗೆ, ಅಂದಾಜು ಮಾಡಲಾದ ಆ ಭೂಮಿಯ ಮೌಲ್ಯವು ಯೋಜನೆಯನ್ನು ಕಾರ್ಯಗತಗೊಳಿಸುವ ಮುಂಚೆ ಅದೇ ರೀತಿಯಲ್ಲಿ ಅಂದಾಜು ಮಾಡಲಾದ ಭೂಮಿಯ ಮೌಲ್ಯಕ್ಕಿಂತ ಎಷ್ಟು ಹೆಚ್ಚಾಗುವುದೋ ಅಷ್ಟು ಮೊಬಲಗು ಆಗಿರತಕ್ಕದು ಮತ್ತು ಪುರೋಭಿವೃದ್ಧಿ ತೆರಿಗೆಯು ಅಂಥ ಮೌಲ್ಯದಲ್ಲಿ ಆದ ಹೆಚ್ಚಳದ ಮೂರನೆಯ ಒಂದರಷ್ಟಾಗಿರತಕ್ಕದ್ದು.

**21. ಪ್ರಾಧಿಕಾರವು ಪುರೋಭಿವೃದ್ಧಿ ತೆರಿಗೆಯನ್ನು ನಿರ್ಧರಿಸುವುದು :–** (1) ಪುರೋಭಿವೃದ್ಧಿ ತೆರಿಗೆಯ ಮೊತ್ತವನ್ನು ನಿರ್ಧರಿಸಲು ಸಾಧ್ಯವಾಗುವಷ್ಟರ ಮಟ್ಟಿಗೆ ಅಭಿವೃದ್ಧಿ ಯೋಜನೆಯು ಸಾಕಷ್ಟು ಮುಂದುವರಿದಿದೆಯೆಂದು ಪ್ರಾಧಿಕಾರಕ್ಕೆ ಕಂಡುಬಂದಾಗ ಅಂಥ ತೆರಿಗೆಯನ್ನು ನಿರ್ಧರಿಸುವ ಉದ್ದೇಶಕ್ಕಾಗಿ, ಯೋಜನೆಯನ್ನು ಕಾರ್ಯಗತಗೊಳಿಸುವುದು ಪೂರ್ತಿಯಾಗಿದೆ ಎಂದು ಭಾವಿಸತಕ್ಕದೆಂದು, ಆ ಬಗ್ಗೆ ಪ್ರಾಧಿಕಾರವು ನಿರ್ಣಯವನ್ನು ಮಾಡುವ ಮೂಲಕ ಘೋಷಿಸತಕ್ಕದ್ದು ಮತ್ತು ಅಂಥ ಭೂಮಿಯ ಸಂಬಂಧದಲ್ಲಿ 20ನೇ ಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾಗಿರುವ ಪುರೋಭಿವೃದ್ಧಿ ತೆರಿಗೆಯ ಮೊತ್ತವನ್ನು ಆ ಪ್ರಾಧಿಕಾರವು ನಿರ್ಧರಿಸಲು ಉದ್ದೇಶಿಸಿದೆ ಎಂಬ ಬಗ್ಗೆ ತೆರಿಗೆಯನ್ನು ನಿರ್ಧರಿಸಬೇಕಾದ ಭೂಮಿಯ ಸಂಬಂಧವಾಗಿ 17ನೇ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ ಯಾರಿಗೆ ಭೂಮಿಯ ಸಂಬಂಧವಾಗಿ ನೋಟೀಸನ್ನು ಕೊಡಲಾಗಿದೆಯೋ ಸಂಧರ್ಭಾನುಸಾರ ಅಂಥ ವ್ಯಕ್ತಿಯ ಪ್ರತಿಯೊಬ್ಬ ವ್ಯಕ್ತಿಗೆ ಅಥವಾ ಅಂಥ ಹಿತಾಸಕ್ತಿಯಲ್ಲಿನ ಉತ್ತರಾಧಿಕಾರಿಗೆ ಲಿಖಿತ ನೋಟೀಸನ್ನು ಕೊಡತಕ್ಕದ್ದು.

(2) ಅಹವಾಲನ್ನು ಹೇಳಿಕೊಳ್ಳಲು ಸಂಬಂಧಪಟ್ಟ ಪ್ರತಿಯೊಬ್ಬ ವ್ಯಕ್ತಿಗೆ ಅವಕಾಶವನ್ನು ಕೊಟ್ಟ ಅನಂತರ ಅವನು ಸಂದಾಯ ಮಾಡಬೇಕಾದ ಪುರೋಭಿವೃದ್ಧಿ ತೆರಿಗೆಯ ಮೊತ್ತವನ್ನು ಪ್ರಾಧಿಕಾರವು ನಿರ್ಧರಿಸತಕ್ಕದ್ದು ಮತ್ತು ಅಂಥ ತೆರಿಗೆಯ ನಿರ್ಧರಣೆಯ ಬಗೆಗಿನ ಲಿಖಿತ ನೋಟೀಸು ತಲುಪಿದ ದಿನಾಂಕದಿಂದ ಮೂರು ತಿಂಗಳೊಳಗೆ ಅಂಥ ತೆರಿಗೆ ನಿರ್ಧರಣೆಯನ್ನು ತಾನು ಒಪ್ಪಿಕೊಂಡಿರುವನೇ ಅಥವಾ ಇಲ್ಲವೇ ಎಂಬುದನ್ನು ಅಂಥ ವ್ಯಕ್ತಿಯ ಲಿಖಿತ ರೂಪದಲ್ಲಿ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು.

(3) ಪ್ರಾಧಿಕಾರ ಮಾಡಲು ಉದ್ದೇಶಿಸಿದ ತೆರಿಗೆ ನಿರ್ಧರಣೆಯನ್ನು ಸಂಬಂಧಪಟ್ಟ ವ್ಯಕ್ತಿಯು (2)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಒಪ್ಪಿಕೊಂಡಾಗ, ಅಂಥ ತೆರಿಗೆ ನಿರ್ಧರಣೆಯು ಅಂತಿಮವಾದುದಾಗಿರತಕ್ಕದ್ದು.

(4) ಪ್ರಾಧಿಕಾರವು ಮಾಡಿದ ತೆರಿಗೆ ನಿರ್ಧರಣೆಯನ್ನು ಸಂಬಂಧಪಟ್ಟ ವ್ಯಕ್ತಿಯು (2)ನೇ ಉಪಪ್ರಕರಣದಲ್ಲಿ ಅಗತ್ಯಪಡಿಸಲಾದಂತೆ ಮತ್ತು ಅದರಲ್ಲಿ ನಿರ್ದಿಷ್ಟಪಡಿಸಲಾದ ಅವಧಿಯೊಳಗೆ ಒಪ್ಪಿಕೊಳ್ಳದಿದ್ದರೆ ಅಥವಾ ಪ್ರಾಧಿಕಾರಕ್ಕೆ ಮಾಹಿತಿಯನ್ನು ಕೊಡಲು ವಿಫಲನಾದರೆ, ಅಂಥ ವ್ಯಕ್ತಿಯು ಸಂದಾಯ ಮಾಡಬೇಕಾದ ಪುರೋಭಿವೃದ್ಧಿ ತೆರಿಗೆಯನ್ನು ನಿರ್ಧರಿಸುವುದಕ್ಕಾಗಿ ಪ್ರಾಧಿಕಾರವು ಜಿಲ್ಲಾ ನ್ಯಾಯಾಲಯಕ್ಕೆ ಆ ವಿಷಯವನ್ನು ಒಪ್ಪಿಸತಕ್ಕದ್ದು.

**22. ಪುರೋಭಿವೃದ್ಧಿ ತೆರಿಗೆಯನ್ನು ಸಂದಾಯ ಮಾಡುವ ರೀತಿ :–** 21ನೇ ಪ್ರಕರಣದ ಮೇರೆಗೆ ನಿರ್ಧರಿಸಲಾದ ಪುರೋಭಿವೃದ್ಧಿ ತೆರಿಗೆಯನ್ನು ಪ್ರಾಧಿಕಾರವು ನಿರ್ದಿಷ್ಟಪಡಿಸಬಹುದಾದಂಥ ಕಾಲದೊಳಗೆ ಮತ್ತು ಹತ್ತಕ್ಕೆ ಮೀರದಷ್ಟು ಕಂತುಗಳಲ್ಲಿ ನಿಯಮಿಸಬಹುದಾದಂಥ ದರದ ಬಡ್ಡಿಯ ಜೊತೆಗೆ ಸಂದಾಯ ಮಾಡತಕ್ಕದ್ದು.

**23. ಪುರೋಭಿವೃದ್ಧಿ ತೆರಿಗೆಯ ವಸೂಲಿ :–** ಪುರೋಭಿವೃದ್ಧಿ ತೆರಿಗೆಯನ್ನು ಸಂದಾಯ ಮಾಡಲು ಹೊಣೆಗಾರನಾಗಿರುವ ಯಾವನೇ ವ್ಯಕ್ತಿಯು ಪ್ರಾಧಿಕಾರವು ನಿರ್ದಿಷ್ಟಪಡಿಸಿದ ಕಾಲದೊಳಗೆ, ಅದನ್ನು ಸಂದಾಯ ಮಾಡಲು ವಿಫಲನಾದಲ್ಲಿ ಅಥವಾ ಒಂದಾದ ಮೇಲೊಂದು ಬರುವ ಎರಡು ಕಂತುಗಳನ್ನು ಅಥವಾ ಯಾವುವೇ ಮೂರು ಕಂತುಗಳನ್ನು ಸಂದಾಯ ಮಾಡಲು ತಪ್ಪಿದಲ್ಲಿ, ಬೆಂಗಳೂರು ನಗರ ಪೌರ ನಿಗಮ ಅಧಿನಿಯಮ, 1949ರಲ್ಲಿ ತೆರಿಗೆ ವಸೂಲಿಯ ಬಗ್ಗೆ ಉಪಬಂಧಿಸಿದ ರೀತಿಯಲ್ಲಿ ಸದರಿ ವ್ಯಕ್ತಿಯಿಂದ ಅಥವಾ ಆ ಭೂಮಿಯಲ್ಲಿನ ಹಿತಾಸಕ್ತಿಗೆ ಅವನ ಅಧಿಕಾರಿಯಾಗಿರುವವನಿಂದ ಬರಬೇಕಾಗಿರುವ ಪೂರ್ತಿ ಮೊತ್ತವನ್ನು, ಬಡ್ಡಿಯ ಸಹಿತವಾಗಿ ವಸೂಲು ಮಾಡಲು ಪ್ರಾಧಿಕಾರವು ಹಕ್ಕುಳ್ಳದ್ದಾಗಿರತಕ್ಕದ್ದು, ಮತ್ತು ಸದರಿ ಹಣವು ಹಾಗೆ ವಸೂಲಾಗದಿದ್ದರೆ, ಹಾಗೆ ಮಾಡಬೇಕೆಂಬ ತನ್ನ ಉದ್ದೇಶ ಬಗ್ಗೆ ಅಧ್ಯಕ್ಷನು ಸಾರ್ವಜನಿಕ ನೋಟೀಸನ್ನು ಕೊಟ್ಟ ಅನಂತರ ಮತ್ತು ಅಂಥ ನೋಟೀಸಿನ ಪ್ರಕಟಣೆಯ ಅನಂತರದ ಒಂದು ತಿಂಗಳಿಗೆ ಕಡಿಮೆಯಾಗಿರದ ಕಾಲದಲ್ಲಿ ಆ ಭೂಮಿಯನ್ನು ಅಥವಾ ಅಂಥ ಭೂಮಿಯಲ್ಲಿ ಸದರಿ ವ್ಯಕ್ತಿಗೆ ಅಥವಾ ಹಿತಾಸಕ್ತಿಯಲ್ಲಿನ ಅವನ ಉತ್ತರಾಧಿಕಾರಿಗೆ ಇರುವ ಹಿತಾಸಕ್ತಿಯನ್ನು ಬಹಿರಂಗ ಹರಾಜಿನ ಮೂಲಕ ಮಾರಬಹುದು ಮತ್ತು ಮಾರಾಟದ ಉತ್ಪತ್ತಿಯಲ್ಲಿ ಸದರಿ ಹಣವನ್ನು ಹಾಗೂ ಮಾರಾಟದ ವೆಚ್ಚಗಳನ್ನು ಮುರಿದುಕೊಳ್ಳಬಹುದು, ಮತ್ತು ಆ ಬಾಕಿಯನ್ನು (ಯಾವುದಾದರೂ ಉಳಿದರೆ) ತಪ್ಪಿದವನಿಗೆ ಸಂದಾಯ ಮಾಡತಕ್ಕದ್ದು.

**24. ಸಂದಾಯ ಇತ್ಯಾದಿಗಳು ಮುಂದೆ ಸ್ವಾಧೀನಪಡಿಸಿಕೊಳ್ಳುವುದಕ್ಕೆ ಪ್ರತಿಷೇಧಕವಾಗತಕ್ಕುದಲ್ಲ :–** 21ನೇ ಪ್ರಕರಣ (3)ನೇ ಉಪಪ್ರಕರಣದ ಮೇರೆಗೆ ಪುರೋಭಿವೃದ್ಧಿ ತೆರಿಗೆಯ ಹೊಣೆಗಾರಿಕೆಯನ್ನು ಒಪ್ಪಿಕೊಳ್ಳುವುದು,

ಅಥವಾ 22ನೇ ಪ್ರಕರಣದ ಮೇರೆಗೆ ನಿರ್ಧರಿಸಲಾದ ಸದರಿ ತೆರಿಗೆಯ ಸಂದಾಯವು, ಈ ಅಧಿನಿಯಮದ ಉದ್ದೇಶಗಳಿಗಾಗಿ ಹಾಗೆ ಸ್ವಾಧೀನಪಡಿಸಿಕೊಳ್ಳುವುದು ಅವಶ್ಯವಾಗಿದ್ದರೆ, ಸಂಬಂಧಪಟ್ಟ ಭೂಮಿಯನ್ನು ತರುವಾಯ ಸ್ವಾಧೀನಪಡಿಸಿಕೊಳ್ಳುವುದಕ್ಕೆ ಪ್ರತಿಷೇಧಕವಾಗತಕ್ಕುದಲ್ಲ.

**25. ಹೆಚ್ಚಿನ ಅಭಿವೃದ್ಧಿಗಾಗಿ ಕಾಮಗಾರಿಗಳನ್ನು ಕೈಕೊಳ್ಳಲು ಪ್ರಾಧಿಕಾರಕ್ಕಿರುವ ಅಧಿಕಾರ :–** (1) ಈ ಅಧಿನಿಯಮದ ಯಾವುದೇ ಇತರ ಉಪಬಂಧದಲ್ಲಿ ಏನೇ ಇದ್ದರೂ, ಬೆಂಗಳೂರು ಮಹಾನಗರ ಪ್ರದೇಶದೊಳಗಿರುವ ಯಾವುದೇ ಪ್ರದೇಶದ ಹೆಚ್ಚಿನ ಅಭಿವೃದ್ಧಿಗಾಗಿ ಪ್ರಾದಿಕಾಋವು ಅವಶ್ಯವೆಂದು ಅಥವಾ ಅಪೇಕ್ಷಣೀಯವೆಂದು ಪರ್ಯಾಲೋಚಿಸಬಹುದಾದಂಥ ಕಾಮಗಾರಿಗಳನ್ನು ಸರ್ಕಾರದ ಪೂರ್ವ ಮಂಜೂರಾತಿಯನ್ನು ಪಡೆದು ಪ್ರಾಧಿಕಾರವು ಕೈಕೊಳ್ಳಬಹುದು:

ಪರಂತು, ಅಂಥ ಪ್ರದೇಶವು ಬೆಂಗಳೂರು ನಗರದ ಪರಿಮಿತಿಯೊಳಗಿದ್ದರೆ ನಿಗಮದೊಡನೆ ಸಮಾಲೋಚಿಸತಕ್ಕದ್ದು.

(2) ಅಂಥ ಕಾಮಗಾರಿಗಳನ್ನು ಕಾರ್ಯಗತಗೊಳಿಸಲು ತಗಲಿದ ಅಥವಾ ಖರ್ಚು ಮಾಡಬೇಕೆಂದು ಉದ್ದೇಶಿಸಲದ ವೆಚ್ಚವನ್ನು ಅಥವಾ ಪ್ರಾಧಿಕಾರವು ನಿರ್ಧರಿಸಬಹುದಾದಂಥ ಮತ್ತು ಸರ್ಕಾರವು ಅನುಮೋದಿಸಬಹುದಾದಂಥ ಅದರ ಭಾಗವನ್ನು, ಅಂಥ ಕಾಮಗಾರಿಗಳಿಂದ ಲಾಭ ಪಡೆಯುವ ಸೊತ್ತುಗಳ ಒಡೆಯರಿಗೆ ಪ್ರಾಧಿಕಾರವು ನಿರ್ಧರಿಸಬಹುದಾದಂಥ ಪ್ರಮಾಣಕ್ಕನುಸಾರವಾಗಿ ವಿಧಿಸಿ, ಅವರಿಂದ ವಸೂಲು ಮಾಡಬಹುದು. ಸದರಿ ಮೊತ್ತವನ್ನು ಈ ಅಧಿನಿಯಮದ ಉಪಬಂಧಗಳ ಮೇರೆಗೆ ಪ್ರಾಧಿಕಾರಕ್ಕೆ ಬರಬೇಕಾದ ಇತರ ಯಾವುದೇ ಮೊತ್ತದಂತೆ ವಸೂಲು ಮಾಡಬಹುದು.

**26. ವಸೂಲಾದ ಪುರೋಭಿವೃದ್ಧಿ ತೆರಿಗೆಯನ್ನು ಕೆಲವು ಸಂದರ್ಭಗಳಲ್ಲಿ ನಿಗಮದ ನಿಧಿಗಳಿಗೆ ಜಮೆ ಮಾಡುವುದು :–** ಯಾವುದೇ ಭೂಮಿಯ ಮೌಲ್ಯದಲ್ಲಿ ಆದ ಹೆಚ್ಚಳವು ನಿಗಮದ ಶಿಫಾರಸಿನ ಮೇರೆಗೆ ಮಾಡಲಾದ ಅಭಿವೃದ್ಧಿ ಯೋಜನೆಯಿಂದ ಆಗಿದ್ದಲ್ಲಿ ಮತ್ತು ಇದಕ್ಕಾಗಿ ಅಂಥ ಯೋಜನೆಗಳನ್ನು ರೂಈಪಿಸಲು ಮತ್ತು ಕಾರ್ಯಗತಗೊಳಿಸಲು ಅವಶ್ಯವಾದ ಹಣವನ್ನು ನಿಗಮವು ಪ್ರಾಧಿಕಾರದ ವಶಕ್ಕೆ ಒಪ್ಪಿಸಿದ್ದಲ್ಲಿ, ಅಂಥ ಭೂಮಿಯ ಒಡೆಯರಿಂದ ಪ್ರಾಧಿಕಾರವು ವಸೂಲು ಮಾಡಿದ ಪುರೋಭಿವೃದ್ಧಿ ತೆರಿಗೆಯನ್ನು ಪ್ರಾಧಿಕಾರವು ನಿಗಮದ ಪೌರನಿಧಿಗೆ ಜಮೆ ಮಾಡತಕ್ಕದ್ದು.

**27. ಪ್ರಾಧಿಕಾರವು ಯೋಜನೆಯನ್ನು ಐದು ವರ್ಷಗಳೊಳಗೆ ಕಾರ್ಯಗತಗೊಳಿಸತಕ್ಕದ್ದು :–** 19ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಘೋಷಣೆಯನ್ನು ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ ಐದು ವರ್ಷಗಳ ಅವಧಿಯೊಳಗೆ ಯೋಜನೆಯನ್ನು ಬಹುಮಟ್ಟಿಗೆ ಕಾರ್ಯಗತಗೊಳಿಸಲು ಪ್ರಾಧಿಕಾರವು ವಿಫಲವಾದಲ್ಲಿ ಯೋಜನೆಯು ರದ್ದು ಹೊಂದತಕ್ಕದ್ದು ಮತುತ 36ನೇ ಪ್ರಕರಣದ ಉಪಬಂಧಗಳು ನಿಷ್ಕ್ರಿಯವಾಗತಕ್ಕದ್ದು.

**28. ನಿಗಮದಲ್ಲಿ ನಿಹಿತವಾದ ಮತ್ತು ಬೀದಿಯ ನಿರ್ಮಾಣಕ್ಕಾಗಿ ಪ್ರಾಧಿಕಾರಕ್ಕೆ ಅಗತ್ಯವಿರುವ ಭೂಮಿಯನ್ನು ತಾತ್ಕಾಲಿಕವಾಗಿ ಪ್ರಾಧಿಕಾರದಲ್ಲಿ ನಿಹಿತಗೊಳಿಸತಕ್ಕದ್ದು :–** ಯಾವುದೇ ಅಭಿವೃದ್ಧಿ ಯೋಜನೆಯ ಮೇರೆಗೆ ನಿಗಮದಲ್ಲಿ ನಿಹಿತವಾದ ಈಗಿರುವ ಸಾರ್ವಜನಿಕ ಬೀದಿಯನ್ನು ಅಥವಾ ಇತರ ಭೂಮಿಯನ್ನು ಇಡಿಯಾಗಿ ಅಥವಾ ಅದರ ಯಾವುದೇ ಭಾಗವನ್ನು ಪ್ರಾಧಿಕಾರವು ನಿರ್ಮಿಸಬೇಕಾದ, ವ್ಯತ್ಯಾಸಗೊಳಿಸಬೇಕಾದ, ಅಗಲ

ಮಾಡಬೇಕಾದ, ಎತ್ತರಿಸಬೇಕಾದ, ಪುನರ್ವ್ಯವಸ್ಥೆಗೊಳಿಸಬೇಕಾದ ಅಥವಾ ಪುನಾರಚಿಸಬೇಕಾದ ಬೀದಿಯ ಯಾವುದೇ ಭಾಗದ ನಿವೇಶನದಲ್ಲಿ ಸೇರಿಸಿದ್ದಾಗ (ಇದರಲ್ಲಿ ಇನ್ನು ಮುಂದೆ "ಅಗತ್ಯವಾದ ಭಾಗ" ವೆಂದು ಕರೆಯಲಾಗುವ) ಈಗಿರುವ ಅಂಥ ಬೀದಿಯ ಅಥವಾ ಇತರ ಭೂಮಿಯು ಸಂದರ್ಭಾನುಸಾರ, ಪೂರ್ಣವಾಗಿ ಅಥವಾ ಭಾಗಶಃ ಮೇಲೆ ಹೇಳಿದಂತೆ ಮಾಡಬೇಕಾದ ಬೀದಿಯ ಭಾಗವಾಗಿ ಅಗತ್ಯವಾಗಿದೆಯೆಂದು ಪ್ರಾಧಿಕಾರವು ನಿಗಮಕ್ಕೆ ನೋಟೀಸನ್ನು ಕೊಡತಕ್ಕದ್ದು ಮತ್ತು ಅಗತ್ಯವಿರುವ ಭಾಗವು ತದನಂತರ, 30ನೇ ಪ್ರಕರಣದ (1)ನೇ ಉಪ ಪ್ರಕರಣದ ಉಪಬಂಧಗಳಿಗೊಳಪಟ್ಟು ಪ್ರಾಧಿಕಾರದಲ್ಲಿ ನಿಹಿತವಾಗತಕ್ಕದ್ದು;

ಪರಂತು, ಈ ಪ್ರಕರಣದಲ್ಲಿರುವುದು ಯಾವುದೂ, ಬೆಂಗಳೂರು ನಗರ ಪೌರ ನಿಗಮ ಅಧಿನಿಯಮ, 1949ರ ಮೇರೆಗೆ ನಿಗಮದ ಯಾವುದೇ ಚರಂಡಿಯ ಅಥವಾ ನೀರಿನ ಕಾಮಗಾರಿಯಲ್ಲಿ ಅಥವಾ ಅವುಗಳ ಮೇಲೆ ನಿಗಮಕ್ಕೆ ಇರುವ ಹಕ್ಕುಗಳಿಗೆ ಅಥವಾ ಅಧಿಕಾರಗಳಿಗೆ ಬಾಧಕವಾಗುವುದೆಂದು ಭಾವಿಸತಕ್ಕುದಲ್ಲ.

**29. ಮೈಸೂರು ಅಧಿನಿಯಮ 1949ರ 69ರ ಮೇರೆಗೆ ಪ್ರಾಧಿಕಾರವು ಮತ್ತು ಅಧ್ಯಕ್ಷನು ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು :–** (1) ಈ ಅಧಿನಿಯಮವು ಅನ್ವಯವಾಗುವ ಯಾವುದೇ ಪ್ರದೇಶದಲ್ಲಿ ಅಥವಾ ಅದರ ಭಾಗದಲ್ಲಿ ಸರ್ಕಾರವು ಅಧಿಸೂಚನೆಯ ಮೂಲಕ, ಮತ್ತು ಅದರಲ್ಲಿ ನಿರ್ದಿಷ್ಟಡಿಸಬಹುದುದಾದಂಥ ದಿನಾಂಕದಿಂದ ಮತ್ತು ಅಂಥ ಅವಧಿಯವರೆಗೆ ಹಾಗೂ ಅಧಿಸೂಚನೆಯು ನಿರ್ದಿಷ್ಟಪಡಿಸಬಹುದಾದಂಥ ಯಾವುದೇ ನಿರ್ಬಂಧಗಳು ಮತ್ತು ಮಾರ್ಪಾಡುಗಳು ಯಾವುದಾದರೂ ಇದ್ದರೆ, ಅವುಗಳಿಗೆ ಒಳಪಟ್ಟು ಕೆಳಕಂಡಂತೆ ಘೋಷಿಸಬಹುದು.

(i) ನಿಗಮದ ಅಥವಾ ಅದರ ಸ್ಥಾಯಿ ಸಮಿತಿಯ ಅಧಿಕಾರಗಳನ್ನು ಬೆಂಗಳೂರು ನಗರ ಪೌರನಿಗಮ ಅಧಿನಿಯಮ, 1949ರ ಮೇರೆಗೆ ಪ್ರಾಧಿಕಾರವು ಚಲಾಯಿಸತಕ್ಕದ್ದು ಮತ್ತು ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು, ಮತ್ತು

(ii) ನಿಗಮದ ಕಮೀಷನರನ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ಸದರಿ ಅಧಿನಿಯಮದ ಮೇರೆಗೆ ಅಧ್ಯಕ್ಷನು ಚಲಾಯಿಸತಕ್ಕದ್ದು ಮತ್ತು ಪ್ರಕಾರ್ಯಗಳನ್ನು ನೇರವೇರಿಸತಕ್ಕದ್ದು.

ಪರಂತು, ಅಂಥ ಪ್ರದೇಶವು ಅಥವಾ ಅದರ ಭಾಗವು ಬೆಂಗಳೂರು ನಗರದ ಪರಿಮಿತಿಯೊಳಗೆ ಇದ್ದರೆ, ಅಂಥ ಘೋಷಣೆಯನ್ನು ಮಾಡುವ ಮುಂಚೆ ನಿಗಮದೊಡನೆ ಸಮಾಲೋಚಿಸತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಘೋಷಣೆಯನ್ನು ಮಾಡಿದ ಮೇಲೆ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ, ನಿಗಮವು ಅದರ ಯಾವುದೇ ಸ್ಥಾಯಿ ಸಮಿತಿಯು ಅಥವಾ ನಿಗಮದ ಕಮೀಷನರನು ಅಂಥ ಘೋಷಣೆಯ ಮೂಲಕ, ಸಂದರ್ಭಾನುಸಾರ, ಪ್ರಾಧಿಕಾರಕ್ಕೆ ಅಥವಾ ಅಧ್ಯಕ್ಷನಿಗೆ ಪ್ರದತ್ತವಾದ ಅಥವಾ ವಿಧಿಸಲಾದ ಅಧಿಕಾರಗಳನ್ನು ಅಥವಾ ಪ್ರಕಾರ್ಯಗಳನ್ನು ಚಲಾಯಿಸಲು ಅಥವಾ ನೆರವೇರಿಸಲು ಸಕ್ಷಮವಾಗಿರತಕ್ಕುದಲ್ಲ.

(3) ಪ್ರಾಧಿಕಾರವು ಅಥವಾ ಅಧ್ಯಕ್ಷನು, (1)ನೇ ಉಪಪ್ರಕರಣದ ಮೇರೆಗೆ ತಾನು ನಿರ್ವಹಿಸಬಹುದಾದ ಯಾವುವೇ ಪ್ರಕಾರ್ಯಗಳನ್ನು ಪ್ರಾಧಿಕಾರದ ಯಾವನೇ ಅಧಿಕಾರಿಗೆ ಅಥವಾ ನೌಕರನಿಗೆ ಪ್ರತ್ಯಾಯೋಜಿಸಬಹುದು.

(4) (3)ನೇ ಉಪಪ್ರಕರಣದ ಮೇರೆಗೆ ಪ್ರತ್ಯಾಯೋಜಿಸಲಾದ ಯಾವುವೇ ಅಧಿಕಾರಗಳನ್ನು ಚಲಾಯಿಸುವುದು ಅಥವಾ ಪ್ರಕಾರ್ಯಗಳನ್ನು ನೆರವೇರಿಸುವುದು ಸಂದರ್ಭಾನುಸಾರ, ಪ್ರಾಧಿಕಾರವು ಅಥವಾ ಅಧ್ಯಕ್ಷನು ವಿಧಿಸಬಹುದಾದಂಥ ಪರಿಮಿತಿಗಳಿಗೆ, ಷರತ್ತುಗಳಿಗೆ ಮತ್ತು ನಿಯಂತ್ರಣಕ್ಕೆ ಒಳಪಟ್ಟಿರತಕ್ಕದ್ದು.

**30. ಬೀದಿಗಳು ಪೂರ್ಣಗೊಂಡ ಬಳಿಕ ಅವು ನಿಗಮದಲ್ಲಿ ನಿಹಿತವಾಗತಕ್ಕದ್ದು ಮತ್ತು ಅದು ಅವುಗಳನ್ನು ಸುಸ್ಥಿತಿಯಲ್ಲಿ ಇಡತಕ್ಕದ್ದು :–** (1) ನಿಗಮದೊಡನೆ ಸಮಾಲೋಚಿಸಿದ ಅನಂತರ ಮತ್ತು ಪ್ರಾಧಿಕಾರದಿಂದ ರಚಿತವಾದ ಯಾವುದೇ ಬೀದಿಯನ್ನು ಸರ್ಕಾರವು ಮಂಜೂರು ಮಾಡಿದ ಯಾವುದೇ ಯೋಜನೆಯ ನಕ್ಷೆಗಳಲ್ಲಿ ತೋರಲಾದ ರೀತಿಯಲ್ಲಿ ಕ್ರಮಬದ್ಧವಾಗಿ ಮಟ್ಟ ಮಾಡಲಾಗಿದೆಯೆಂದು, ಅದಕ್ಕೆ ನೆಲಗಟ್ಟು ಮಾಡಲಾಗಿದೆಯೆಂದು, ಜಲ್ಲಿ ಹಾಕಲಾಗಿದೆಯೆಂದು, ಚಪ್ಪಡಿಯನ್ನು ಹಾಸಲಾಗಿದೆಯೆಂದು ಘಟಾರವನ್ನು ಮತ್ತು ಚರಂಡಿಯನ್ನು ಮತ್ತು ಗ್ರಾಮಸಾರ ಚರಂಡಿಯನ್ನು ಮಾಡಲಾಗಿದೆಯೆಂದು ಮತ್ತು ಅದರ ಅಭಿಪ್ರಾಯದಂತೆ ಬೀದಿಯನ್ನು ಬೆಳಗಿಸುವುದಕ್ಕಾಗಿ ಅವಶ್ಯವಿರುವ ಹಾಗೂ ಪ್ರಾಧಿಕಾರವು ಒದಗಿಸಬೇಕಾದಂಥ, ದೀಪಗಳನ್ನು, ದೀಪದ ಕಂಬಗಳನ್ನು ಮತ್ತು ಇತರ ಉಪಕರಣಗಳನ್ನು ಹಾಗೆ ಒದಗಿಸಲಾಗಿದೆಯೆಂದು ಮನದಟ್ಟಾದ ಅನಂತರ ಅಂಥ ಬೀದಿಯನ್ನು ಸಾರ್ವಜನಿಕ ಬೀದಿಯೆಂದು ಸರ್ಕಾರ ಘೋಷಿಸತಕ್ಕದ್ದು, ಮತ್ತು ಆಮೇಲೆ, ಅಂಥ ಬೀದಿಯ ನಿಗಮದಲ್ಲಿ ಸಂದರ್ಭಾನುಸಾರ ನಿಹಿತವಾಗತಕ್ಕದ್ದು ಅಥವಾ ಪುನರ್ನಿಹಿತವಾಗತಕ್ಕದ್ದು ಮತ್ತು ತದನಂತರ, ಅಂಥ ಬೀದಿಯನ್ನು ನಿಗಮವು ಸುಸ್ಥಿತಿಯಲ್ಲಿಡತಕ್ಕದ್ದು ದುರಸ್ತಿ ಮಾಡತಕ್ಕದ್ದು, ಅದಕ್ಕೆ ದೀಪದ ವ್ಯವಸ್ಥೆ ಮಾಡತಕ್ಕದ್ದು ಹಾಗೂ ಅದನ್ನು ಸ್ವಚ್ಛವಾಗಿಡತಕ್ಕದ್ದು.

(2) ಸರ್ಕಾರದಿಂದ ಮಂಜೂರು ಮಾಡಲಾದ ಯಾವುದೇ ಅಭಿವೃದ್ಧಿ ಯೋಜನೆಯ ಭಾಗವಾಗಿ ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯಲ್ಲಿರುವ ಪ್ರದೇಶದ ಯಾವುದೇ ಭಾಗದಲ್ಲಿ ವಾಯು ಸಂಚಾರಕ್ಕಾಗಿ ಕಾದಿಡಲಾಗಿದೆಯೆಂದು ಸರ್ಕಾರವು ಅಧಿಸೂಚಿಸಬಹುದಾದಂಥ ಉದ್ಯಾನಗಳನ್ನು ಮತ್ತು ಆಟ ಮೈದಾನಗಳನ್ನು ಒಳಗೊಂಡ ಯಾವುದೇ ಬಯಲು ಪ್ರದೇಶವನ್ನು ಅದು ಪೂರ್ಣಗೊಂಡ ಮೇಲೆ ನಿಗಮದ ವೆಚ್ಚದಿಂದ ಸುಸ್ಥಿತಿಯಲ್ಲಿಡುವುದಕ್ಕಾಗಿ ನಿಗಮಕ್ಕೆ ವರ್ಗಾಯಿಸತಕ್ಕದ್ದು ಮತ್ತು ತದನಂತರ ಅದು ನಿಗಮದಲ್ಲಿ ನಿಹಿತವಾಗತಕ್ಕದ್ದು.

(3) ಈ ಪ್ರಕರಣದ ಉಪಬಂಧಗಳ ಪೈಕಿ ಯಾವುದೇ ಉಪಬಂಧದ ಬಗ್ಗೆ ಪ್ರಾಧಿಕಾರದ ಮತ್ತು ನಿಗಮದ ನಡುವೆ ಉದ್ಭವಿಸುವ ಯಾವುದೇ ವಿವಾದವನ್ನು ಸರ್ಕಾರವು ನಿರ್ಧರಿಸತಕ್ಕದ್ದು ಮತ್ತು ಅದರ ತೀರ್ಮಾನವು ಅಂತಿಮವಾಗಿರತಕ್ಕದ್ದು.

**31. ಕೆಲವು ಸಂದರ್ಭಗಳಲ್ಲಿ ಪ್ರಾಧಿಕಾರವು ನಿವೇಶನಗಳನ್ನು ಮಾರತಕ್ಕುದಲ್ಲ ಅಥವಾ ಅನ್ಯಥಾ ವಿಲೆ ಮಾಡತಕ್ಕುದಲ್ಲ :–** 30ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಎಲ್ಲ ಮೇಲ್ಭಾಟುಗಳನ್ನು ಅಂದಾಜಿನಲ್ಲಿ ಅವಕಾಶ ಕಲ್ಪಿಸಿರುವಂತೆ ಬಹುಮಟ್ಟಿಗೆ ಮಾಡುವವರೆಗೆ ವ್ಯಕ್ತಿಗಳ ವಸತಿ ಸೌಕರ್ಯಕ್ಕೋಸ್ಕರ ಕಟ್ಟಡಗಳನ್ನು ಕಟ್ಟುವ ಉದ್ದೇಶಕ್ಕಾಗಿ ಪ್ರಾಧಿಕಾರವು ಯಾವುದೇ ನಿವೇಶನಗಳನ್ನು ಮಾರತಕ್ಕುದಲ್ಲ ಅಥವಾ ಅನ್ಯಥಾ ವಿಲೇ ಮಾಡತಕ್ಕುದಲ್ಲ.

**32. ಹೊಸ ಬಡಾವಣೆಗಳ ಅಥವಾ ಲೇಔಟುಗಳ ನಿರ್ಮಾಣ ಅಥವಾ ಹೊಸ ಖಾಸಗಿ ಬೀದಿಗಳ ರಚನೆ :–** (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುವೇ ಕಾನೂನಿನಲ್ಲಿ ತದ್ವಿರುದ್ಧವಾಗಿ ಏನೇ ಇದ್ದರೂ, ಪ್ರಾಧಿಕಾರದ ವ್ಯಕ್ತ

ಮಂಜೂರಾತಿಯನ್ನು ಲಿಖಿತ ರೂಪದಲ್ಲಿ ಪಡೆಯದ ಹೊರತು ಮತ್ತು ಪ್ರಾಧಿಕಾರವು ನಿರ್ದಿಷ್ಟ ಪಡಿಸಬಹುದಾದಂಥ ಷರತ್ತುಗಳಿಗನುಸಾರವಾಗಿ ಹೊರತು, ಕಟ್ಟಡಗಳನ್ನು ಕಟ್ಟು ಉದ್ದೇಶಕ್ಕಾಗಿ ಯಾವನೇ ವ್ಯಕ್ತಿಯು ಯಾವುದೇ ಬಡಾವಣೆಯನ್ನು ಅಥವಾ ಲೇಔಟನ್ನು ನಿರ್ಮಿಸತಕ್ಕುದಲ್ಲ ಅಥವಾ ನಿರ್ಮಿಸಲು ಪ್ರಯತ್ನಿಸತಕ್ಕುದಲ್ಲ.

ಪರಂತು, ಅಂಥ ಯಾವುದೇ ಬಡಾವಣೆಯು ಅಥವಾ ಲೇಔಟು ನಿಗಮದ ಸ್ಥಳೀಯ ಪರಿಮಿತಿಯೊಳಗೆ ಇರುವಲ್ಲಿ, ಅಂಥ ಬಡಾವಣೆಯನ್ನು ಅಥವಾ ಲೇಔಟನ್ನು ನಿರ್ಮಾಣ ಮಾಡುವುದಕ್ಕೆ ನಿಗಮದ ಸಹಮತಿಯಿಲ್ಲದೆ, ಪ್ರಾಧಿಕಾರವು ಮಂಜೂರಾತಿಯನ್ನು ಕೊಡತಕ್ಕುದಲ್ಲ.

ಮತ್ತು ಪರಂತು, ಬಡಾವಣೆಯ ಅಥವಾ ಲೇಔಟಿನ ನಿರ್ಮಾಣದ ಬಗೆ ಅಥವಾ ಅದಕ್ಕೆ ಸಂಬಂಧಿಸಿದ ಷರತ್ತುಗಳ ಬಗ್ಗೆ ನಿಗಮದ ಪ್ರಾಧಿಕಾರದ ನಡುವೆ ಒಮ್ಮತವಿರದಿದ್ದಲ್ಲಿ ಆ ವಿಷಯವನ್ನು ಸರ್ಕಾರಕ್ಕೆ ಒಪ್ಪಿಸತಕ್ಕದ್ದು, ಮತ್ತು ಅದರ ಬಗ್ಗೆ ಸರ್ಕಾರದ ತೀರ್ಮಾನವು ಅಂತಿಮವಾದುದಾಗಿರತಕ್ಕದ್ದು.

(2) ಬಡಾವಣೆಯನ್ನು ಅಥವಾ ಲೇಔಟನ್ನು ನಿರ್ಮಿಸಲು ಅಥವಾ ಹೊಸ ಖಾಸಗಿ ಬೀದಿಯನ್ನು ರಚಿಸಲು ಉದ್ದೇಶಿಸಿರುವ, ಯಾವನೇ ವ್ಯಕ್ತಿಯು ಈ ಕೆಳಕಂಡ ವಿವರಗಳನ್ನು ತೋರಿಸುವ ನಕ್ಷೆಗಳ ಮತ್ತು ಒಳರಚನೆಗಳ ಜೊತೆಗೆ ಲಿಖಿತ ಅರ್ಜಿಯನ್ನು ಅಧ್ಯಕ್ಷರಿಗೆ ಕಳುಹಿಸತಕ್ಕದ್ದು.

(ಕ) ಬೀದಿಗಳಲ್ಲಿ, ಭೂಮಿಗಳಲ್ಲಿ ಅಥವಾ ಬಯಲು ಪ್ರದೇಶಗಳಲ್ಲಿ ನಿವೇಶನಗಳನ್ನು ರೂಪಿಸುವುದು.

(ಖ) ಬೀದಿಯ ಉದ್ದೇಶಿತ ಮಟ್ಟ, ದಿಕ್ಕು ಮತ್ತು ಅಗಲ,

(ಗ) ಬೀದಿಯ ಸಮರೇಖಣ ಮತ್ತು ಕಟ್ಟಡದ ಸಾಲು ಮತ್ತು ಬೀದಿಗೆ ಲಗತ್ತಾಗಿರುವ ಉದ್ದೇಶಿತ ನಿವೇಶನಗಳು.

(ಘ) ಬೀದಿಗಳನ್ನು ಮಟ್ಟ ಮಾಡುವ, ಅವುಗಳಿಗೆ ನೆಲಗಟ್ಟು ಮಾಡುವ, ಜಲ್ಲಿ ಹಾಕುವ, ಚಪ್ಪಡಿ ಹಾಸುವ, ಘಟಾರ ಮಾಡುವ, ಒಳಚರಂಡಿಯನ್ನು ಮಾಡುವ, ರಕ್ಷಿಸುವ ಮತ್ತು ಬೆಳಕಿನ ವ್ಯವಸ್ಥೆ ಮಾಡುವ ಬಗ್ಗೆ ಹಾಗೂ ಕುಡಿಯುವ ನೀರನ್ನು ಸಾಕಷ್ಟು ಸರಬರಾಜು ಮಾಡುವ ಬಗ್ಗೆ ಮಾಡಬೇಕಾದ ಏರ್ಪಾಟು.

(3) ಬೀದಿಗಳ ಮಟ್ಟ ಮತ್ತು ಅಗಲ ಮತ್ತು ಅವುಗಳಿಗೆಲಗತ್ತಾಗಿರುವ ಕಟ್ಟಡಗಳ ಎತ್ತರ ಇವುಗಳಿಗೆ ಸಂಬಂಧಪಟ್ಟಂತೆ ಈ ಅಧಿನಿಯಮದ ಉಪಬಂಧಗಳು ಮತ್ತು ಅದರ ಮೇರೆಗೆ ಮಾಡಲಾದ ಯಾವುದೇ ನಿಯಮಗಳು ಅಥವಾ ಉಪವಿಧಿಗಳು, (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾಗಿರುವ ಬೀದಿಗಳ ವಿಷಯದಲ್ಲೂ ಅನ್ವಯಿಸತಕ್ಕದ್ದು ಮತುತ ಆ ಉಪಪ್ರಕರಣದಲ್ಲಿ ಉಲ್ಲೇಖಿಸಲಾಗಿರುವ ಎಲ್ಲ ವಿವರಗಳು ಪ್ರಾಧಿಕಾರದ ಅನುಮೋದನೆಗೆ ಒಳಪಟ್ಟಿರತಕ್ಕದ್ದು.

(4) (2)ನೇ ಉಪಪ್ರಕರಣದ ಮೇರೆಗಿನ ಯಾವುದೇ ಅರ್ಜಿಯು ಬಂದ ಅನಂತರ ಆರು ತಿಂಗಳೊಳಗೆ, ತಾನು ಸೂಕ್ತವೆಂದು ಆಲೋಚಿಸುವಂಥ ಷರತ್ತುಗಳ ಮೇರೆಗೆ ಬಡಾವಣೆಯನ್ನು ಅಥವಾ ಲೇಔಟನ್ನು ನಿರ್ಮಿಸಲು ಅಥವಾ ಬೀದಿಯನ್ನು ರಚಿಸಲು ಪ್ರಾಧಿಕಾರವು ಮಂಜೂರಾತಿಯನ್ನು ಕೊಡತಕ್ಕದ್ದು ಅಥವಾ ಅದನ್ನು ಪುರಸ್ಕರಿಸತಕ್ಕುದಲ್ಲ ಅಥವಾ ಆ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಕೇಳತಕ್ಕದ್ದು.

(5) ಅರ್ಜಿಯನ್ನು ಮಂಜೂರು ಮಾಡುವ ಮುಂಚೆ, ರಸ್ತೆಗಳನ್ನು, ಪಕ್ಕದ ಚರಂಡಿಗಳನ್ನು, ಅಡಿಗಾಲುವೆಗಳನ್ನು, ಒಳ ಚರಂಡಿಗಳನ್ನು ಮತ್ತು ನೀರು ಸರಬರಾಜನ್ನು ಬೆಳಕಿನ ವ್ಯವಸ್ಥೆಯನ್ನು ಮಾಡಲು ತಗಲುವ ವೆಚ್ಚವನ್ನು ಭರಿಸಲು ಅವಶ್ಯವಿರುವ ಹಣವನ್ನು ಮತ್ತು ಪ್ರಾಧಿಕಾರವು ಅರ್ಜಿದಾರನು ಮಾಡಬೇಕೆಂದು ಕೇಳಬಹುದಾದಂಥ ಇತರ ಉದ್ದೇಶಗಳ ಬಗೆಗಿನ ವೆಚ್ಚವನ್ನು, ಠೇವಣಿಯಿಡುವಂತೆ ಅರ್ಜಿದಾರನನ್ನು ಅಗತ್ಯಪಡಿಸಬಹುದು : ಪರಂತು, ಅರ್ಜಿದಾರನು ತಾನು ನಿರ್ಮಿಸಿದ ರಸ್ತೆಗಳ, ಚರಂಡಿಗಳ, ನೀರು ಸರಬರಾಜಿನ ದೊಡ್ಡ ಕೊಳವೆಗಳನ್ನು ಮತ್ತು ಖಿಲ್ಲಾ ಜಾಗಗಳ ಒಡೆತನವನ್ನು, ಆ ಬಗ್ಗೆ ಯಾವುದೇ ನಷ್ಟ ಪರಿಹಾರವನ್ನು ಕೇಳದೇ, ಖಾಯಂ ಆಗಿ ಪ್ರಾಧಿಕಾರಕ್ಕೆ ವರ್ಗಾಯಿಸುವುದಕ್ಕೆ ಸಹ ಒಪ್ಪಿಗೆಯನ್ನು ಕೊಡತಕ್ಕದ್ದು.

(6) ಕೆಳಕಂಡ ಸಂದರ್ಭಗಳಲ್ಲಿ ಇಂಥ ಮಂಜೂರಾತಿಯನ್ನು ಇನಕಾರ ಮಾಡಬಹುದು :–

(i) ಉದ್ದೇಶಿತವಾದ ಬೀದಿಯು, ಬೀದಿಯ ಮೇಲ್ಪಾಟಿನ ಬಗೆಗಿನ ಯಾವುದೇ ಸಾಮಾನ್ಯ ಯೋಜನೆಯನ್ನು ಅಥವಾ ಅಭಿವೃದ್ಧಿಯ ಅಥವಾ ವಿಕಾಸದ ಇತರ ಯೋಜನೆಗಳನ್ನು ಕಾರ್ಯಗತಗೊಳಿಸುವ ಬಗ್ಗೆ ಮಾಡಲಾಗಿರುವ ಅಥವಾ ಮಾಡುವ ಸಂಭವವಿದೆಯೆಂದು ಪ್ರಾಧಿಕಾರವು ಅಭಿಪ್ರಾಯ ಪಡುವ ಯಾವುದೇ ಏರ್ಪಾಡುಗಳಿಗೆ ಅಡ್ಡಿಯುಂಟು ಮಾಡುವುದಾದರೆ; ಅಥವಾ

(ii) ಉದ್ದೇಶಿತವಾದ ಬೀದಿಯು, ಈ ಅಧಿನಿಯಮದ ಉಪಬಂಧಗಳಿಗೆ, ಮತ್ತು (3)ನೇ ಉಪಪ್ರಕರಣದಲ್ಲಿ ಉಲ್ಲೇಖಿತವಾಗಿರುವ ನಿಯಮಗಳಿಗೆ ಮತ್ತು ಉಪವಿಧಿಗಳಿಗೆ ಅನುಸಾರವಾಗಿ ಇರದಿದ್ದರೆ; ಅಥವಾ

(iii) ಉದ್ದೇಶಿತವಾದ ಬೀದಿಯು, ಈಗಾಗಲೇ ಬಳಕೆಯಲ್ಲಿರುವ ಬೀದಿಯ ಒಂದು ತುದಿಗೆ ಸೇರುವಂತೆ ರೂಪಿತವಾಗಿರದಿದ್ದರೆ; ಅಥವಾ

(iv) ಲೇಔಟು ಪ್ರಾಧಿಕಾರದ ಈಗಿರುವ ಅಥವಾ ಉದ್ದೇಶಿತವಾದ ಯಾವುದೇ ವಿಕಾಸಕ್ಕೆ ಅಥವಾ ಅಭಿವೃದ್ಧಿ ಯೋಜನೆಗಳಿಗೆ ಹೊಂದಿಕೆಯಾಗುವುದಿಲ್ಲೆಂದು ಪ್ರಾಧಿಕಾರವು ಅಭಿಪ್ರಾಯಪಟ್ಟರೆ.

(7) ಪ್ರಾಧಿಕಾರದ ಮಂಜೂರಾತಿಯಿಲ್ಲದೆ ಅಥವಾ ಅದು ವಿಧಿಸಿದ ಷರತ್ತುಗಳಿಗೆ ಅನುಸಾರವಾಗಿಯಲ್ಲದೆ ಬೇರೆ ರೀತಿಯಲ್ಲಿ ಯಾವ ವ್ಯಕ್ತಿಯೂ ಲೇಔಟನ್ನು ನಿರ್ಮಿಸತಕ್ಕುದಲ್ಲ ಅಥವಾ ಯಾವುದೇ ಹೊಸ ಖಾಸಗೀ ಬೀದಿಯನ್ನು ರಚಿಸತಕ್ಕುದಲ್ಲ. ಅರ್ಜಿದಾರನು ಹೆಚ್ಚಿನ ಮಾಹಿತಿಯನ್ನು ಒದಗಿಸಬೇಕೆಂದು ಪ್ರಾಧಿಕಾರವು ಅಗತ್ಯಪಡಿಸಿದರೆ ಅಂಥ ಮಾಹಿತಿಯು ಬಂದ ಅನಂತರ ಪ್ರಾಧಿಕಾರವು ಆದೇಶವನ್ನು ಮಾಡುವವರೆಗೆ, ಆ ಲೇಔಟನ್ನು ನಿರ್ಮಿಸಲು ಅಥವಾ ಬೀದಿಯನ್ನು ರಚಿಸಲು ಅವನು ಯಾವ ಕ್ರಮವನ್ನು ಕೈಕೊಳ್ಳತಕ್ಕುದಲ್ಲ.

ಪರಂತು, ಸದರಿ ಅರ್ಜಿಯನ್ನು ಅಂತಿಮವಾಗಿ ತೀರ್ಮಾನಿಸಲು ತಾನು ಅವಶ್ಯವೆಂದು ಪರ್ಯಾಲೋಚಿಸುವ ಎಲ್ಲ ಮಾಹಿತಿಯನ್ನು ಪಡೆದ ಅನಂತರ, ಪ್ರಾಧಿಕಾರವು ಅಂಥ ಆದೇಶಗಳನ್ನು ಮಾಡುವುದನ್ನು ಯಾವ ಸಂದರ್ಭದಲ್ಲೂ ಆರು ತಿಂಗಳುಗಳಿಗಿಂತ ಹೆಚ್ಚಿಗೆ ವಿಳಂಬ ಮಾಡತಕ್ಕುದಲ್ಲ.

(8) (2)ನೇ ಉಪ–ಪ್ರಕರಣದ ಮೇರೆಗೆ ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ ಅಥವಾ (7)ನೇ ಉಪ–ಪ್ರಕರಣದ ಮೇರೆಗೆ ಕೇಳಲಾದ ಎಲ್ಲಾ ಮಾಹಿತಿಗಳನ್ನು ಪಡೆದ ದಿನಾಂಕದಿಂದ ಆರು ತಿಂಗಳೊಳಗಾಗಿ ಪ್ರಾಧಿಕಾರವು ಮಂಜೂರಾತಿಯನ್ನು ಇನಕಾರ ಮಾಡದಿದ್ದರೆ, ಅಂತ ಮಂಜೂರಾತಿ ಕೊಟ್ಟಿರುವುದಾಗಿ

ಭಾವಿಸತಕ್ಕದ್ದು ಮತ್ತು ಅರ್ಜಿದಾರನು ಬಡಾವಣೆಯನ್ನು ಅಥವಾ ಲೇಔಟನ್ನು ರೂಪಿಸಲು ಅಥವಾ ಬೀದಿಯನ್ನು ರಚಿಸಲು ಉದ್ಯುಕ್ತನಾಗಬಹುದು. ಆದರೆ ಅದು ಈ ಅಧಿನಿಯಮದ ಯಾವುದೇ ಉಪ ಬಂಧಗಳನ್ನು ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳನ್ನು ಅಥವಾ ಉಪವಿಧಿಗಳನ್ನು ಉಲ್ಲಂಘಿಸುವಂತಿರತಕ್ಕುದಲ್ಲ.

(9) (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಯಾವುದೇ ಬಡಾವಣೆಯನ್ನು ಅಥವಾ ಲೇಔಟನ್ನು ರೂಪಿಸುವ ಅಥವಾ ರೂಪಿಸಲು ಪ್ರಯತ್ನಿಸುವ, ಅಥವಾ ಈ ಪ್ರಕರಣದ ಮೇರೆಗೆ ಪ್ರಾಧಿಕಾರದ ಆದೇಶವಿಲ್ಲದೆ ಅಥವಾ ಆದೇಶಾನುಸಾರವಾಗಿ ಅಲ್ಲದೇ ಯಾವುದೇ ಬೀದಿಯನ್ನು ರಚಿಸುವ ಯಾವನೇ ವ್ಯಕ್ತಿಯು, ಅವನು ಅಪರಾಧಿಯೆಂದು ನಿರ್ಣೀತನಾದ ಮೇಲೆ ಹತ್ತು ಸಾವಿರ ರೂಪಾಯಿಗಳ ವರೆಗಿನ ಜುಲ್ಮಾನೆಗೆ ಗುರಿಯಾಗತಕ್ಕದ್ದು.

**33. ಬಡಾವಣೆಯನ್ನು, ಲೇಔಟನ್ನು ಅಥವಾ ಬೀದಿಯನ್ನು ವ್ಯತ್ಯಾಸಗೊಳಿಸುವುದು ಅಥವಾ ನಾಶಪಡಿಸುವುದು :–** (1) 32ನೇ ಪ್ರಕರಣದ ಮೇರೆಗೆ ಪ್ರಾಧಿಕಾರದ ಆದೇಶವಿಲ್ಲದೆ, ಅಥವಾ ಆದೇಶಕ್ಕೆ ಅನುಸಾರವಾಗಿಯಲ್ಲದೆ ಯಾವನೇ ವ್ಯಕ್ತಿಯು ಸದರಿ ಪ್ರಕರಣದಲ್ಲಿ ಉಲ್ಲೇಖಿಸಲಾದ ಬಡಾವಣೆಯನ್ನು ಅಥವಾ ಲೇಔಟನ್ನು ರೂಪಿಸಿದರೆ ಅಥವಾ ಯಾವುದೇ ಬೀದಿಯನ್ನು ರಚಿಸಿದರೆ ಅಥವಾ ಯಾವುದೇ ಕಟ್ಟಡವನ್ನು ನಿರ್ಮಿಸಿದರೆ, ಅಧ್ಯಕ್ಷನು, ಈ ಅಧಿನಿಯಮದ ಮೇರೆಗೆ ಅಪರಾಧಿಯ ಮೇಲೆ ವ್ಯವಹರಣೆ ನಡೆಸಲಿ ಅಥವಾ ನಡೆಸದಿರಲಿ, ನೋಟಿಸಿನ ಮೂಲಕ.

(ಕ) ಅಂಥ ಬಡಾವಣೆಯನ್ನು, ಲೇಔಟನ್ನು, ಅಥವಾ ಬೀದಿಯನ್ನು ಅಧ್ಯಕ್ಷನಿಗೆ ಸಮಾಧಾನವಾಗುವಂತೆ ಏಕೆ ವ್ಯತ್ಯಾಸಗೊಳಿಸತಕ್ಕುದಲ್ಲ ಅಥವಾ ಹಾಗೆ ವ್ಯತ್ಯಾಸಗೊಳಿಸುವುದು ಕಾರ್ಯಸಾಧ್ಯವಿಲ್ಲವೆಂದು ಅಧ್ಯಕ್ಷನು ಭಾವಿಸಿದರೆ, ಅಂಥ ಬಡಾವಣೆಯನ್ನು, ಲೇಔಟನ್ನು ಅಥವಾ ಬೀದಿಯನ್ನು ಏಕೆ ನಾಶ ಮಾಡತಕ್ಕುದಲ್ಲ ಎಂಬ ಬಗ್ಗೆ ತಾನು ಸಹಿ ಮಾಡಿದ ಲಿಖಿತ ಹೇಳಿಕೆಯ ಮೂಲಕ ಕಾರಣಗಳನ್ನು ತೋರಿಸಬೇಕೆಂದು ಮತ್ತು ಆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಂದು ಅಥವಾ ಅದಕ್ಕೆ ಮುಂಚಿತವಾಗಿ ಅದನ್ನು ಅಧ್ಯಕ್ಷನಿಗೆ ಕಳುಹಿಸಬೇಕೆಂದು ಅಪರಾಧಿಯನ್ನು ಅಗತ್ಯಪಡಿಸಬಹುದು; ಅಥವಾ

(ಖ) ನೋಟಿಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಂದು ಮತ್ತು ಅಂಥ ಕಾಲದಲ್ಲಿ ಮತ್ತು ಅಂಥ ಸ್ಥಳದಲ್ಲಿ ಅಪರಾಧಿಗಳು ಖುದ್ದಾಗಿಯಾಗಲಿ ಅಥವಾ ಕ್ರಮಬದ್ಧವಾಗಿ ಅಧಿಕೃತವಾದ ಏಜಂಟಿನ ಮೂಲಕವಾಗಿಯಾಗಲೀ ಅಧ್ಯಕ್ಷನ ಮುಂದೆ ಹಾಜರಾಗುವಂತೆ ಮತ್ತು ಮೇಲೆ ಹೇಳಿದಂತೆ ಕಾರಣಗಳನ್ನು ತೋರಿಸುವಂತೆ ಅಪರಾಧಿಗಳನ್ನು ಅಗತ್ಯಪಡಿಸಬಹುದು.

(2) ಯಾವ ವ್ಯಕ್ತಿಗೆ ಅಂಥ ನೋಟೀಸನ್ನು ಜಾರಿ ಮಾಡಲಾಗಿದೆಯೋ ಅವನು, ಅಂಥ ಬಡಾವಣೆಯನ್ನು, ಲೇಔಟನ್ನು ಅಥವಾ ಬೀದಿಯನ್ನು ಏಕೆ ಹಾಗೆ ವ್ಯತ್ಯಾಸಗೊಳಿಸತಕ್ಕುದಲ್ಲ ಅಥವಾ ನಾಶಗೊಳಿಸತಕ್ಕುದಲ್ಲವೆಂಬ ಬಗ್ಗೆ ಅಧ್ಯಕ್ಷನಿಗೆ ಮನದಟ್ಟಾಗುವಂತೆ ಕಾರಣವನ್ನು ತೋರಿಸಲು ತಪ್ಪಿದರೆ, ಅಂಥ ಬಡಾವಣೆಯನ್ನು, ಲೇಔಟನ್ನು ಅಥವಾ ಬೀದಿಯನ್ನು ವ್ಯತ್ಯಾಸಗೊಳಿಸಬೇಕೆಂದು ಅಥವಾ ನಾಶಗೊಳಿಸಬೇಕೆಂದು ನಿರ್ದೇಶಿಸಿ ಅಧ್ಯಕ್ಷನು ಆದೇಶವನ್ನು ಮಾಡಬಹುದು.

**34. ಕಾಮಗಾರಿಯನ್ನು ಮಾಡಬೇಕೆಂದು ಆದೇಶವನ್ನು ಮಾಡಲು ಅಥವಾ ಅದಕ್ಕೆ ತಪ್ಪಿದಲ್ಲಿ ತಾನೇ ಮಾಡಲು ಪ್ರಾಧಿಕಾರಕ್ಕಿರುವ ಅಧಿಕಾರ :–** (1) ಪ್ರಾಧಿಕಾರವು,

(ಕ) 32ನೇ ಪ್ರಕರಣದ ಮೇರೆಗೆ ಅನುಮತಿಗಾಗಿ ಅರ್ಜಿಯನ್ನು ಸಲ್ಲಿಸಿರುವ ಮತ್ತು ಬಡಾವಣೆಯನ್ನು ಅಥವಾ ಲೇಔಟನ್ನು ರೂಪಿಸುವುದಕ್ಕೆ ಅಥವಾ ಬೀದಿಯನ್ನು ರಚಿಸುವುದಕ್ಕೆ ಸಂಬಂಧಪಟ್ಟ ಕಾಮಗಾರಿಯನ್ನು ಮಾಡಲು ಸ್ಪಷ್ಟವಾಗಿ ಅನುಮತಿಯನ್ನು ಪಡೆದ ಯಾವನೇ ವ್ಯಕ್ತಿಯು ಅದನ್ನು ಹಾಗೆ ಮಾಡದಿದ್ದರೆ; ಅಥವಾ

(ಖ) ಯಾವುದೇ ಖಾಸಗಿ ಬೀದಿಯನ್ನು ಅಥವಾ ಅದರ ಭಾಗವನ್ನು ಪ್ರಾಧಿಕಾರಕ್ಕೆ ಸಮಾಧಾನವಾಗುವಂತೆ ಮಟ್ಟ ಮಾಡದಿದ್ದರೆ ಅದಕ್ಕೆ ನೆಲಗಟ್ಟು ಮಾಡದಿದ್ದರೆ, ಜಲ್ಲಿ ಹಾಕದಿದ್ದರೆ, ಚಪ್ಪಡಿ ಹಾಸದಿದ್ದರೆ, ಘಟಾರ ಮಾಡದಿದ್ದರೆ, ಒಳಚರಂಡಿಯನ್ನು ಮಾಡದಿದ್ದರೆ, ಚರಂಡಿಯನ್ನು ಮಾಡದಿದ್ದರೆ, ರಕ್ಷಿಸದಿದ್ದರೆ, ಅಥವಾ ಬೆಳಕಿನ ವ್ಯವಸ್ಥೆ ಮಾಡದಿದ್ದರೆ.

ಬಡಾವಣೆಯನ್ನು ಅಥವಾ ಲೇಔಟನ್ನು ರೂಪಿಸುವ ವ್ಯಕ್ತಿಗೆ ಅಥವಾ ಅಂಥ ಬೀದಿಯ ಅಥವಾ ಅದರ ಭಾಗದ ಒಡೆಯನಿಗೆ ಮತ್ತು ಅಂಥ ಬೀದಿಯ ಅಥವಾ ಅದರ ಭಾಗದ ಎದುರಿನಲ್ಲಿ ಇರುವ ಅಥವಾ ಅದಕ್ಕೆ ಲಗತ್ತಾಗಿರುವ ಕಟ್ಟಡಗಳ ಅಥವಾ ಭೂಮಿಗಳ ಒಡೆಯರಿಗೆ, ಮತ್ತು ಭೂಮಿಯ ಮತ್ತು ಅದರ ಮೇಲಿನ ಕಟ್ಟಡದ ಒಡೆಯರು ಬೇರೆ ಬೇರೆಯಾಗಿರುವ ಸಂದರ್ಭಗಳಲ್ಲಿ ಭೂಮಿಯ ಮತ್ತು ಕಟ್ಟಡದ ಒಡೆಯರಿಬ್ಬರಿಗೂ ನೋಟೀಸು ಕೊಡುವ ಮೂಲಕ ತಾನು ಅವಶ್ಯವೆಂದು ಅಭಿಪ್ರಾಯಪಡುವ ಯಾವುದೇ ಕಾಮಗಾರಿಯನ್ನು ಅಂಥ ನೋಟೀಸಿನಲ್ಲಿ ನಿರ್ದಿಷ್ಟ ಪಡಿಸಬಹುದಾದಂಥ ಕಾಲದೊಳಗೆ ಮಾಡಬೇಕೆಂದು ಅಗತ್ಯಪಡಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗಿನ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಕಾಲದೊಳಗೆ ಅಂಥ ಯಾವುದೇ ಕಾಮಗಾರಿಯನ್ನು ಮಾಡದಿದ್ದರೆ, ಪ್ರಾಧಿಕಾರವು, ತಾನು ಸೂಕ್ತವೆಂದು ಆಲೋಚಿಸಿದರೆ, ಅದನ್ನು ತಾನೇ ನಿರ್ವಹಿಸಬಹುದು ಅಥವಾ ನಿರ್ವಹಿಸುವಂತೆ ಮಾಡಬಹುದು ಮತ್ತು ತಗಲಿದ ವೆಚ್ಚಗಳನ್ನು (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ವ್ಯಕ್ತಿಗಳು ಅಥವಾ ಒಡೆಯರು ಪ್ರಾಧಿಕಾರವು ನಿರ್ಧರಿಸಬಹುದಾದಂಥ ಪ್ರಮಾಣಗಳಲ್ಲಿ ಸಂದಾಯ ಮಾಡತಕ್ಕದ್ದು. ಅಂಥ ವೆಚ್ಚಗಳನ್ನು ಅವು ಭೂ ಕಂದಾಯದ ಬಾಕಿಯಾಗಿದ್ದರೆ ಹೇಗೋ ಹಾಗೆ ಸಂಬಂಧಪಟ್ಟ ವ್ಯಕ್ತಿಗಳಿಂದ ವಸೂಲು ಮಾಡಬಹುದು.

## ಅಧ್ಯಾಯ – IV

## ಭೂಸ್ವಾಧೀನ

**35. ಒಪ್ಪಂದದ ಮೂಲಕ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಪ್ರಾಧಿಕಾರಕ್ಕೆ ಇರುವ ಅಧಿಕಾರ :–** ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಮತ್ತು ಸರ್ಕಾರದ ಪೂರ್ವಾನುಮೋದನೆಯನ್ನು ಪಡೆದು, ಈ ಅಧಿನಿಯಮದ ಉದ್ದೇಶಕ್ಕಾಗಿ ಯಾವುದೇ ಭೂಮಿಯನ್ನು, ಅದು ಬೆಂಗಳೂರು ಮಹಾನಗರ ಪ್ರದೇಶದೊಳಗಿರಲಿ ಅಥವಾ ಹೊರಗಿರಲಿ, ಅಥವಾ ಅದರಲ್ಲಿರುವ ಯಾವುದೇ ಹಿತಾಸಕ್ತಿಯನ್ನು ಖರೀದಿ ಮಾಡುವ ಬಗ್ಗೆ, ಅಂಥ ಭೂಮಿಯ ಅಥವಾ ಅದಲ್ಲಿರುವ ಹಿತಾಸಕ್ತಿಯುಳ್ಳ ಒಡೆಯನ ಕೂಡ ಪ್ರಾಧಿಕಾರವು ಒಪ್ಪಂದವನ್ನು ಮಾಡಕೊಳ್ಳಬಹುದು.

**36. ಒಪ್ಪಂದದ ಮೂಲಕವಲ್ಲದೆ ಇತರ ರೀತಿಯಲ್ಲಿ ಮಾಡಿಕೊಳ್ಳುವ ಭೂಸ್ವಾಧೀನಕ್ಕೆ ಅನ್ವಯವಾಗುವ ಉಪಬಂಧಗಳು :–** (1) ಬೆಂಗಳೂರು ಮಹಾನಗರ ಪ್ರದೇಶದೊಳಗಿನ ಅಥವಾ ಹೊರಗಿನ ಭೂಮಿಯನ್ನು ಒಪ್ಪಂದದ ಮೂಲಕವಲ್ಲದ ಇತರ ರೀತಿಯಲ್ಲಿ ಈ ಅಧಿನಿಯಮದ ಮೇರೆಗೆ ಸ್ವಾಧೀನಪಡಿಸಿಕೊಳ್ಳುವುದು ಭೂ ಸ್ವಾಧೀನ ಅಧಿನಿಯಮ, 1894 ಇದರ ಉಪಬಂಧಗಳಿಂದ ಅವು ಅನ್ವಯವಾಗುವ ಮಟ್ಟಿಗೆ ನಿಯಂತ್ರಿತವಾಗತಕ್ಕದ್ದು.

(2) ಭೂ ಸ್ವಾಧೀನ ಅಧಿನಿಯಮ, 1894ರ 50ನೇ ಪ್ರಕರಣದ (2)ನೇ ಉಪ ಪ್ರಕರಣದ ಉದ್ದೇಶಕ್ಕಾಗಿ, ಪ್ರಾಧಿಕಾರವನ್ನು ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರವೆಂದು ಭಾವಿಸತಕ್ಕದ್ದು.

(3) ಭೂಸ್ವಾಧೀನ ಅಧಿನಿಯಮ, 1894ರ ನೇ ಪ್ರಕರಣದ ಮೇರೆಗೆ ಭೂಮಿಯು ಸರ್ಕಾರದಲ್ಲಿ ನಿಹಿತವಾದ ಅನಂತರ, ಸ್ವಾಧೀನಪಡಿಸಿಕೊಂಡ ಖರ್ಚನ್ನು ಸಂದಾಯ ಮಾಡಿದ ಮೇಲೆ, ಮತ್ತು ಸ್ವಾಧೀನಪಡಿಸಿಕೊಳ್ಳುವುದಕ್ಕಾಗಿ ತಗಲಬಹುದಾದ ಯಾವುದೇ ಹೆಚ್ಚಿನ ಖರ್ಚುಗಳನನು ಸಂದಾಯ ಮಾಡಲು ಪ್ರಾಧಿಕಾರವು ಒಪ್ಪಿಕೊಂಡ ಮೇಲೆ, ಡೆಪ್ಯೂಟಿ ಕಮೀಷನರು ಭೂಮಿಯನ್ನು ಪ್ರಾಧಿಕಾರಕ್ಕೆ ವರ್ಗಾಯಿಸತಕ್ಕದ್ದು, ಮತ್ತು ತದನಂತರ ಭೂಮಿಯು ಪ್ರಾಧಿಕಾರದಲ್ಲಿ ನಿಹಿತವಾಗತಕ್ಕದ್ದು.

## ಅಧ್ಯಾಯ – V

## ಸ್ವತ್ತು ಮತ್ತು ಹಣಕಾಸು

**37. ಸರ್ಕಾರಕ್ಕೆ ಅಥವಾ ನಿಗಮ ಇತ್ಯಾದಿಗಳಿಗೆ ಸೇರಿದ ಭೂಮಿಯನ್ನು ಪ್ರಾಧಿಕಾರಕ್ಕೆ ವರ್ಗಾಯಿಸಲು ಸರ್ಕಾರಕ್ಕಿರುವ ಅಧಿಕಾರ :–** (1) ಈ ಅಧಿನಿಯಮದ ಉದ್ದೇಶಗಳಿಗಾಗಿ ಮತ್ತು ತಾನು ವಿಧಿಸಬಹುದಾದಂಥ ಪರಿಮಿತಿಗಳಿಗೆ, ಷರತ್ತುಗಳಿಗೆ ಹಾಗೂ ಇದರಲ್ಲಿ ಈ ಮುಂದೆ ಬರುವ ಉಪಬಂಧಗಳಿಗೆ ಒಳಪಟ್ಟು, ಸರ್ಕಾರಕ್ಕೆ ಅಥವಾ ನಿಗಮಕ್ಕೆ ಅಥವಾ ಸ್ಥಳೀಯ ಪ್ರಾಧಿಕಾರಕ್ಕೆ ಸೇರಿದ ಯಾವುದೇ ಭೂಮಿಯನ್ನು ಸರ್ಕಾರವು ಅಧಿಸೂಚನೆಯ ಮೂಲಕ, ಕಾಲಕಾಲಕ್ಕೆ ಪ್ರಾಧಿಕಾರಕ್ಕೆ ವರ್ಗಾಯಿಸಬಹುದು ಮತ್ತು ಅದರಲ್ಲಿ ನಿಹಿತಗೊಳಿಸಬಹುದು.

(2) ನಿಗಮಕ್ಕೆ ಅಥವಾ ಸ್ಥಳೀಯ ಪ್ರಾಧಿಕಾರಕ್ಕೆ ಸೇರಿದ ಯಾವ ಭೂಮಿಯನ್ನು ಆ ನಿಗಮದೊಡನೆ ಅಥವಾ ಸ್ಥಳೀಯ ಪ್ರಾಧಿಕಾರದೊಡನೆ ಸಮಾಲೋಚಿಸಿದ ಹೊರತು (1)ನೇ ಉಪ–ಪ್ರಕರಣದ ಮೇರೆಗೆ ಪ್ರಾಧಿಕಾರದಲ್ಲಿ ನಿಹಿತಗೊಳಿಸತಕ್ಕದ್ದಲ್ಲ.

(3) 1ನೇ ಉಪ–ಪ್ರಕರಣದ ಮೇರೆಗೆ ಪ್ರಾಧಿಕಾರದಲ್ಲಿ ನಿಹಿತಗೊಳಿಸಲಾದ ಯಾವುದೇ ಭೂಮಿಯ ಪ್ರಾಧಿಕಾರಕ್ಕೆ ಈ ಅಧಿನಿಯಮದ ಉದ್ದೇಶಕ್ಕಾಗಿ ಅಗತ್ಯವಿಲ್ಲವೆಂದು ಅಥವಾ ಪ್ರಾಧಿಕಾರದಲ್ಲಿ ನಿಹಿತವಾಗಿರುವ ಯಾವುದೇ ಇತರ ಭೂಮಿಯು ಸರ್ಕಾರಕ್ಕೆ ಅಥವಾ ನಿಗಮಕ್ಕೆ ಅಥವಾ ಸ್ಥಳೀಯ ಪ್ರಾಧಿಕಾರಕ್ಕೆ ಅಗತ್ಯವಿರುವುದೆಂದು ಸರಕಾರಕ್ಕೆ ಕಂಡುಬಂದಾಗಲೆಲ್ಲಾ, ಆ ಭೂಮಿಯು ಸಂದರ್ಭಾನುಸಾರ ಸರ್ಕಾರದಲ್ಲಿ ಅಥವಾ ನಿಗಮದಲ್ಲಿ ಅಥವಾ ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರದಲ್ಲಿ ಪುನರ್ನಿಹಿತವಾಗತಕ್ಕದ್ದೆಂದು ಅಥವಾ ಅದಕ್ಕೆ ವರ್ಗಾಯಿತವಾಗತಕ್ಕದೆಂದು ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದೇಶಿಸಬಹುದು.

**38. ಸ್ವತ್ತನ್ನು ಗೇಣಿಗೆ ಕೊಡಲು, ಮಾರಲು ಅಥವಾ ವರ್ಗಾಯಿಸಲು ಪ್ರಾಧಿಕಾರಕ್ಕಿರುವ ಅಧಿಕಾರ :–** (1) ನಿಯಮಿಸಬಹುದಾದಂಥ ನಿರ್ಬಂಧಗಳಿಗೆ, ಷರತ್ತುಗಳಿಗೆ ಮತ್ತು ಪರಿಮಿತಗಳಿಗೆ ಒಳಪಟ್ಟು, ತನಗೆ ಸೇರಿದ ಯಾವುದೇ ಚರ ಅಥವಾ ಸ್ಥಿರ ಸ್ವತ್ತನ್ನು ಗೇಣಿಗೆ ಕೊಡಲು, ಮಾರಲು, ಅಥವಾ ಅನ್ಯಥಾ ವರ್ಗಾಯಿಸಲು, ಮತ್ತು ತನ್ನಲ್ಲಿ ನಿಹಿತವಾದ ಅಥವಾ ತಾನು ಸ್ವಾಧೀನಪಡಿಸಿಕೊಂಡ ಯಾವುದೇ ಭೂಮಿಯನ್ನು ಬಯಲು ಜಾಗಗಳನ್ನಾಗಿ ರೂಪಿಸುವುದಕ್ಕಾಗಿ ಅಥವಾ ಕಟ್ಟಡವನ್ನು ಕಟ್ಟುವ ಉದ್ದೇಶಗಳಿಗಾಗಿ ಅಥವಾ ಇನ್ನಾವುದೇ ರೀತಿಯಲ್ಲಿ ಯಾವುದೇ ಅಭಿವೃದ್ಧಿ ಯೋಜನೆಯ ಉದ್ದೇಶಕ್ಕಾಗಿ ವಿನಿಯೋಗಿಸಿಕೊಳ್ಳಲು ಅಥವಾ ಬಳಸಿಕೊಳ್ಳಲು ಪ್ರಾಧಿಕಾರಕ್ಕೆ ಅಧಿಕಾರವಿರತಕ್ಕದು.

**39. ಸಾಲವನ್ನು ಪಡೆಯಲು ಪ್ರಾಧಿಕಾರಕ್ಕಿರುವ ಅಧಿಕಾರ :–** (1) ಸರ್ಕಾರದ ಪೂರ್ವ ಮಂಜೂರಾತಿಯನ್ನು ಪಡೆದು ಮತ್ತು ಈ ಬಗ್ಗೆ ನಿಯಮಿಸಬಹುದಾದಂತ ಷರತ್ತುಗಳಿಗೊಳಪಟ್ಟು, ಈ ಅಧಿನಿಯಮದ ಉದ್ದೇಶಕ್ಕಾಗಿ ಅಗತ್ಯವಾದ ಯಾವುದೇ ಮೊತ್ತವನ್ನು ಪ್ರಾಧಿಕಾರವು ಕಾಲಕಾಲಕ್ಕೆ ಸಾಲವಾಗಿ ಪಡೆಯಬಹುದು.

(2) ಡಿಬೆಂಚರುಗಳನ್ನು ಹೊರಡಿಸುವ ಮೂಲಕ ಸಾಲವನ್ನು ಪಡೆಯಲು ಮತ್ತು ಬ್ಯಾಂಕುಗಳೊಡನೆ ಹಣದ ವ್ಯವಸ್ಥೆಯನ್ನು ಮಾಡಿಕೊಳ್ಳಲು ಈ ಪ್ರಕರಣದ ಉದ್ದೇಶಕ್ಕಾಗಿ ಸರ್ಕಾರವು ರಚಿಸಿದ ನಿಯಮಗಳು ಪ್ರಾಧಿಕಾರಕ್ಕೆ ಅಧಿಕಾರವನ್ನು ಕೊಡಬಹುದು.

(3) ಪ್ರಾಧಿಕಾರವು ಹೊರಡಿಸುವ ಡಿಬೆಂಚರುಗಳು, ಸರ್ಕಾರದ ಮಂಜೂರಾತಿಯನ್ನು ಪಡೆದು ಪ್ರಾಧಿಕಾರವು ಕಾಲಕಾಲಕ್ಕೆ ನಿರ್ಧರಿಸಬಹದಾದಂಥ ನಮೂನೆಯಲ್ಲಿ ಇರತಕ್ಕದ್ದು.

(4) ಪ್ರತಿಯೊಂದು ಡಿಬೆಂಚರಿಗೂ ಪ್ರಾಧಿಕಾರದ ಅಧ್ಯಕ್ಷನು ಮತ್ತು ಇತರ ಒಬ್ಬ ಸದಸ್ಯನು ಸಹಿ ಮಾಡತಕ್ಕದು.

(5) ಈ ಪ್ರಕರಣದ ಮೇರೆಗೆ ಪಡೆದ ಸಾಲಗಳಿಗೆ ಮತ್ತು ಹೊರಡಿಸಿದ ಡಿಬೆಂಚರುಗಳಿಗೆ, ಆ ಅಸಲು ಹಣದ ಮರುಸಂದಾಯಕ್ಕೆ ಮತ್ತು ಸರಕಾರವು ನಿಗದಿಪಡಿಸಬಹುದಾದಂಥ ದರದಲ್ಲಿ ಬಡ್ಡಿಯನ್ನು ಸಂದಾಯ ಮಾಡುವುದಕ್ಕೆ ಸಂಬಂಧಿಸಿ, ಸರಕಾರವು ಖಾತರಿಯನ್ನು ಕೊಡಬಹುದು.

**40. ಅಭಿವೃದ್ಧಿ ನಿಧಿ ಮತ್ತು ಅಂಥ ನಿಧಿಗೆ ಜಮೆ ಮಾಡಬೇಕಾದ ಬಾಬ್ತುಗಳು :–**

(1) ಈ ಅಧಿನಿಯಮದ ಮೇರೆಗೆ ಪ್ರಾಧಿಕಾರದಲ್ಲಿ ನಿಹಿತವಾದ ಅಥವಾ ನಿಹಿತವಾಗಲಿರುವ ಅಥವಾ ಸ್ವಾಧೀನಪಡಿಸಿಕೊಂಡ ಎಲ್ಲ ಭೂಮಿಗಳ, ಕಟ್ಟಡಗಳ ಮತ್ತು ಇತರ ಸ್ವತ್ತಿನ ಬಾಡಿಗೆಗಳನ್ನು, ಲಾಭಗಳನ್ನು ಹಾಗೂ ಮಾರಾಟದ ಉತ್ಪತ್ತಿಗಳನ್ನು, "ಬೆಂಗಳೂರು ಅಭಿವೃದ್ಧಿ ನಿಧಿ" ಎಂದು ಪಡೆಯಲಾಗುವ ನಿಧಿಗೆ ಜಮೆ ಮಾಡತಕ್ಕದ್ದು.

(2) ಸದರಿ ನಿಧಿಗೆ ಈ ಕೆಳಕಂಡವುಗಳನ್ನು ಸಹ ಜಮೆ ಮಾಡತಕ್ಕದ್ದು.

(ಕ) 39ನೇ ಪ್ರಕರಣದ ಮೇರೆಗೆ ಸಾಲವಾಗಿ ಪಡೆಯಲಾದ ಯಾವುದೇ ಹಣ;

(ಖ) ಈ ಅಧಿನಿಯಮದ ಉದ್ದೇಶಕ್ಕಾಗಿ ಸರ್ಕಾರವು ಕಾಲಕಾಲಕ್ಕೆ ಪ್ರಾಧಿಕಾರದ ವಶಕ್ಕೆ ಕೊಡಬಹುದಾದಂಥ ಹಣ.

(ಗ) ಪ್ರಾಧಿಕಾರವು ಕೈಕೊಂಡ ಅಭಿವೃದ್ಧಿ ಯೋಜನೆಗಳ ಪರಿಣಾಮವಾಗಿ ಪುರಸಭೆಯ ಸಂಪನ್ಮೂಲಗಳಿಗೆ ಒದಗಿಬರುವ ಅಥವಾ ಒದಗಿಬರಬಹುದಾದ ಪರಿಹಾರವನ್ನು ಅಥವಾ ಹೆಚ್ಚಳವನ್ನು ಸರ್ಕಾರವು ಪರ್ಯಾಲೋಚಿಸಿದ ಅನಂತರ, ನಿಗಮವು ಅಥವಾ ಸ್ಥಳೀಯ ಪ್ರಾಧಿಕಾರವು ಕೊಡಬೇಕೆಂದು ಸರ್ಕಾರವು ಹೇಳಬಹುದಾದಂಥ ವಂತಿಗೆಗಳು, ಮತ್ತು

(ಘ) 26ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಈ ಅಧಿನಿಯಮದ ಉಪಬಂಧಗಳ ಮೇರೆಗೆ, ಪ್ರಾಧಿಕಾರಕ್ಕೆ ಬರಬೇಕಾಗಿರುವ ಮತ್ತು ಸಂದಾಯವಾದ ಅಥವಾ ಅದು ವಸೂಲುಮಾಡಿಕೊಂಡ ಪುರೋಭಿವೃದ್ಧಿ ತೆರಿಗೆ ಮತ್ತು ಇತರ ಹಣ.

**41. ಬೆಂಗಳೂರು ಅಭಿವೃದ್ಧಿ ನಿಧಿಯ ವಿನಿಯೋಗ :–** (1) ಸದರಿ ನಿಧಿಯನ್ನು ಪ್ರಾಧಿಕಾರವು ನ್ಯಾಯವಾಗಿ ಇಟ್ಟುಕೊಳ್ಳತಕ್ಕದ್ದು ಮತ್ತು ಸರ್ಕಾರದ ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗೊಳಪಟ್ಟು, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವ ಬಗ್ಗೆ ಪ್ರಾಸಂಗಿಕವಾಗಿರುವ ವೆಚ್ಚಗಳನ್ನು ಸಂದಾಯ ಮಾಡುವುದಕ್ಕಾಗಿ ಅದನ್ನು ವಿನಿಯೋಗಿಸತಕ್ಕದ್ದು.

(2) ಅಂಥ ವೆಚ್ಚಗಳು, ಇತರ ವಿಷಯಗಳ ಜೊತೆಗೆ, ಈ ಕೆಳಕಂಡವುಗಳನ್ನು ಒಳಗೊಳ್ಳುತ್ತವೆ.

(ಕ) ಈ ಅಧಿನಿಯಮದ ಮೇರೆಗೆ ಪ್ರಾಧಿಕಾರದಲ್ಲಿ ನಿಹಿತವಾದ ಅಥವಾ ನಿಹಿತವಾಗುವ ಅಥವಾ ಅದು ಸ್ವಾಧೀನಪಡಿಸಿಕೊಂಡ ಸ್ವತ್ತಿನ ಬಾಡಿಗೆಗಳನ್ನು ಮತ್ತು ಲಾಭಗಳನ್ನು ಹಾಗೂ ಇತರ ಉತ್ಪತ್ತಿಗಳನ್ನು ವಸೂಲುಮಾಡಲು ಪ್ರತ್ಯೇಕ ಸಿಬ್ಬಂದಿವರ್ಗವನ್ನು ಇಟ್ಟುಕೊಂಡು ಬರುವ ಬಗ್ಗೆ ಖರ್ಚು ಏನಾದರೂ ಇದ್ದರೆ, ಆ ಖರ್ಚು;

(ಖ) ಸ್ವತ್ತುಗಳ ಮೇಲ್ವಿಚಾರಣೆಗಾಗಿ ಅಥವಾ ಇತರೇ ಆದಾಯದ ಉದ್ದೇಶಗಳಿಗಾಗಿ ಅವಶ್ಯವಾಗಿರುವ, ಗೊತ್ತುಪಡಿಸಲಾದ ಸಿಬ್ಬಂದಿವರ್ಗದ ಭಾಗವಾಗಿರದ ಸಣ್ಣ ಮತ್ತು ಇತರ ಸಿಬ್ಬಂದಿ ವರ್ಗಗಳ ಖರ್ಚು,

(ಗ) ಗೊತ್ತುಪಡಿಸಲಾದ ಸಿಬ್ಬಂದಿಯ ಸಂಬಳಗಳನ್ನು ಮತ್ತು ಭತ್ಯೆಗಳನ್ನು ಹಾಗೂ ಎಲ್ಲಾ ಪ್ರಾಸಂಗಿಕ ವೆಚ್ಚಗಳನ್ನು ಒಳಗೊಂಡ ವ್ಯವಸ್ಥಾಪನೆಯ ಖರ್ಚು, ಮತ್ತು

(ಘ) ಪ್ರಾಧಿಕಾರದಲ್ಲಿ ನಿಹಿತವಾದ ಮತ್ತು ವಿನಾಯಿತಿಗೆ ಒಳಪಡದ ಭೂಮಿಯ ಮತ್ತು ಕಟ್ಟಡಗಳ ಮೇಲೆ ಬೆಂಗಳೂರು ನಗರ ಪೌರನಿಗಮ ಅಧಿನಿಯಮ, 1949ರ ಮೇರೆಗೆ ವಿಧಿಸಲಾದ ದರಗಳ ಮತ್ತು ತೆರಿಗೆಗಳ ಸಂಬಂಧವಾಗಿ ಪ್ರಾಧಿಕಾರವು ಮಾಡಿದ ಎಲ್ಲಾ ಸಂದಾಯಗಳು.

(3) ಸರ್ಕಾರಿ ನೌಕರರಲ್ಲದ ವ್ಯಕ್ತಿಗಳು ತಮಗೆ ಮನೆಗಳನ್ನು ಅಥವಾ ಇತರ ಸ್ಥಳಾವಕಾಶವನ್ನು ಒದಗಿಸಲು ಸಾಧ್ಯವಾಗುವಂತೆ ಮಾಡುವ ಉದ್ದೇಶಗಳಿಗಾಗಿ ಕಾಲಕಾಲಕ್ಕೆ ಮತ್ತು ನಿಯಮಿಸಲಾದ ರೀತಿಯಲ್ಲಿ ಪ್ರಾಧಿಕಾರವು ಸದರಿ ನಿಧಿಯಿಂದ ಮುಂಗಡವನ್ನು ಸಹ ಕೊಡಬಹುದು.

**42. ಆದಾಯದ ಮತ್ತು ವೆಚ್ಚದ ವಾರ್ಷಿಕ ಅಂದಾಜನ್ನು ಮಂಡಿಸುವುದು :–** (1) ಪ್ರತಿವರ್ಷ ಫೆಬ್ರವರಿ ಒಂದನೇ ದಿನಾಂಕಕ್ಕಿಂತ ತಡವಾಗಿಯಲ್ಲದ ನಡೆಯಬೇಕಾದ ವಿಶೇಷ ಸಭೆಯಲ್ಲಿ ಬರುವ ಏಪ್ರಿಲ್ 1ನೇ ದಿನಾಂಕದಂದು ಪ್ರಾರಂಭವಾಗುವ ಮುಂದಿನ ವರ್ಷದ ಬಗೆಗಿನ ಆದಾಯದ ಮತ್ತು ವೆಚ್ಚದ ಅಂದಾಜನ್ನು ಕಾಲಕಾಲಕ್ಕೆ ಪ್ರಾಧಿಕಾರವು ನಿರ್ದೇಶಿಸುವಂಥ ವಿವರಗಳೊಂದಿಗೆ ಮತ್ತು ರೂಪದಲ್ಲಿ ಪ್ರಾಧಿಕಾರದ ಮುಂದೆ ಅಧ್ಯಕ್ಷನು ಮಂಡಿಸತಕ್ಕದ್ದು.

(2) ಈ ಅಧಿನಿಯಮವನ್ನು ಸಮರ್ಥವಾಗಿ ಕಾರ್ಯಗತಗೊಳಿಸಲು ಅಂಥ ಅಂದಾಜಿನಲ್ಲಿ ಅವಕಾಶವನ್ನು ಕಲ್ಪಿಸತಕ್ಕದ್ದು ಮತ್ತು ಆದರೆ ಒಂದು ಪ್ರತಿಯನ್ನು ಅಂಚೆಯ ಮೂಲಕ ಅಥವಾ ಅನ್ಯಥಾ, ಆ ಅಂದಾಜನ್ನು ಸಭೆಯಲ್ಲಿ ಮಂಡಿಸಬೇಕಾದ ದಿನಾಂಕಕ್ಕೆ ಕನಿಷ್ಠ ಪಕ್ಷ ಹತ್ತು ದಿನಗಳಿಗೆ ಮುಂಚಿತವಾಗಿ ಪ್ರಾಧಿಕಾರದ ಪ್ರತಿಯೊಬ್ಬ ಸದಸ್ಯನಿಗೂ ಕಳುಹಿಸತಕ್ಕದ್ದು.

**43. ಪ್ರಾಧಿಕಾರವು ಅಂಥ ಅಂದಾಜನ್ನು ಅನುಮೋದಿಸುವುದು ಅಥವಾ ತಿದ್ದುಪಡಿ ಮಾಡುವುದು :–** ತನಗೆ ಹಾಗೆ ಒಪ್ಪಿಸಲಾದ ಅಂದಾಜನ್ನು ಪ್ರಾಧಿಕಾರವು ಪರ್ಯಾಲೋಚಿಸತಕ್ಕದ್ದು ಮತ್ತು ಅದನ್ನು ವ್ಯತ್ಯಾಸಗೊಳಿಸದೇ ಅಥವಾ ತಾನು ಸೂಕ್ತವೆಂದು ಆಲೋಚಿಸುವಂತ ವ್ಯತ್ಯಾಸಗಳಿಗೆ ಒಳಪಟ್ಟು ಅನುಮೋದಿಸತಕ್ಕದ್ದು.

**44. ಅಂದಾಜುಗಳನ್ನು ಮಂಜೂರಾತಿಗಾಗಿ ಸರ್ಕಾರಕ್ಕೆ ಒಪ್ಪಿಸತಕ್ಕದ್ದು :–** ಪ್ರಾಧಿಕಾರವು ಅನುಮೋದಿಸಿದಂತೆ ಆ ಅಂದಾಜನ್ನು ಸರ್ಕಾರಕ್ಕೆ ಒಪ್ಪಿಸತಕ್ಕದ್ದು ಮತ್ತು ಅದು ಅಂಥ ಅಂದಾಜನ್ನು ಅಥವಾ ಅದರ ಯಾವುದೇ ಭಾಗವನ್ನು ಮಂಜೂರು ಮಾಡಬಹುದು ಇಲ್ಲವೇ ನಾಮಂಜೂರು ಮಾಡಬಹುದು ಮತ್ತು ಅದನ್ನು ತಿದ್ದುಪಡಿಗಾಗಿ ವಾಪಸ್ಸು ಮಾಡಬಹುದು. ಹಾಗೆ ವಾಪಸ್ಸು ಮಾಡಲಾದ ಅಂದಾಜನ್ನು ಪ್ರಾಧಿಕಾರವು ತಕ್ಷಣವೇ ತಿದ್ದುಪಡಿ ಮಾಡತಕ್ಕದ್ದು ಮತ್ತು ತಿದ್ದುಪಡಿ ಮಾಡಲಾದ ಅಂದಾಜನ್ನು ಸರ್ಕಾರಕ್ಕೆ ಪುನಃ ಒಪ್ಪಿಸತಕ್ಕದ್ದು.

**45. ಅವಶ್ಯವಾದಾಗ ಪೂರಕ ಅಂದಾಜುಗಳನ್ನು ತಯಾರಿಸಬಹುದು ಮತ್ತು ಒಪ್ಪಿಸಬಹುದು :–** ಯಾವ ವರ್ಷದ ಬಗ್ಗೆ ಯಾವುದೇ ಅಂದಾಜನ್ನು ಮಂಜೂರು ಮಾಡಲಾಗಿದೆಯೋ ಆ ವರ್ಷದ ಯಾವುದೇ ಕಾಲದಲ್ಲಿ ಪೂರಕ ಅಂದಾಜನ್ನು ತಯಾರಿಸುವಂತೆ ಮತ್ತು ತನಗೆ ಒಪ್ಪಿಸುವಂತೆ ಪ್ರಾಧಿಕಾರವು ಮಾಡಬಹುದು. ಅಂಥ ಪ್ರತಿಯೊಂದು ಪೂರಕ ಅಂದಾಜನ್ನು ಪ್ರಾಧಿಕಾರವು ಪರ್ಯಾಲೋಚಿಸತಕ್ಕದ್ದು ಮತ್ತು ಅನುಮೋದಿಸತಕ್ಕದ್ದು ಹಾಗೂ ಸರ್ಕಾರಕ್ಕೆ ಒಪ್ಪಿಸತಕ್ಕದ್ದು.

**46. ವೆಚ್ಚದ ಬಗೆಗಿನ ಉಪಬಂಧಗಳು :–** ಸರ್ಕಾರವು ಮಂಜೂರು ಮಾಡಿದ ಅಂದಾಜಿನಲ್ಲಿ ಅಥವಾ ಪೂರಕ ಅಂದಾಜಿನಲ್ಲಿ ಅಥವಾ ನ್ಯಾಯಾಲಯದ ಡಿಕ್ರಿಯ ಅಥವಾ ತೀರ್ಪಿನ ಮೇರೆಗೆ ಪ್ರಾಧಿಕಾರವು ಸಂದಾಯ

ಮಾಡಬೇಕಾದ ಮೊಬಲಗಿನಲ್ಲಿ ಯಾವುದೇ ಮೊತ್ತವು ಸೇರಿರದ ಹೊರತು, ಅದನ್ನು ಪ್ರಾಧಿಕಾರವು ಅಥವಾ ಅದರ ಪರವಾಗಿ ವೆಚ್ಚ ಮಾಡತಕ್ಕುದಲ್ಲ;

ಪರಂತು, ಹಾಗೆ ಸೇರಿಸಿರದಿದ್ದರೂ, ಯಾವುದೇ ಅನಿರೀಕ್ಷಿತ ವಿದ್ಯಾಮಾನಗಳ ಸಂದರ್ಭದಲ್ಲಿ ಹತ್ತು ಸಾವಿರ ರೂಪಾಯಿಗಳಿಗೆ ಮೀರದ ಮೊತ್ತವನ್ನು ವೆಚ್ಚಮಾಡಬಹುದು ಮತ್ತು ಅಂಥ ಸಂದರ್ಭದಲ್ಲಿ ವೆಚ್ಚಮಾಡಬೇಕಾಗಿ ಬಂದ ವಿದ್ಯಾಮಾನಗಳ ಬಗ್ಗೆ ಮತ್ತು ಆ ವೆಚ್ಚವನ್ನು ಯಾವ ಮೂಲದಿಂದ ಭರಿಸಲು ಉದ್ದೇಶಿಸಲಾಗಿದೆ ಎಂಬ ಬಗ್ಗೆ ಅಧ್ಯಕ್ಷನು ತತ್‌ಕ್ಷಣವೇ ಸರ್ಕಾರಕ್ಕೆ ವರದಿಮಾಡತಕ್ಕದ್ದು;

ಮತ್ತು ಪರಂತು, 45ನೇ ಪ್ರಕರಣದಲ್ಲಿ ಹೇಳಲಾದ ರೀತಿಯಲ್ಲಿ ಅನುಮೋದಿಸಬೇಕಾದ ಮತ್ತು ಮಂಜೂರು ಮಾಡಬೇಕಾದ ಪೂರಕ ಅಂದಾಜಿನಲ್ಲಿ ಅಂಥ ಯಾವುದೇ ವೆಚ್ಚವನ್ನು ಸೇರಿಸತಕ್ಕದ್ದು.

**47. ಲೆಕ್ಕಪರಿಶೋಧನೆ :–** (1) ಸರ್ಕಾರದಿಂದ ನೇಮಿತವಾದ ಲೆಕ್ಕಪರಿಶೋಧಕನು ಪ್ರಾಧಿಕಾರದ ಲೆಕ್ಕಗಳನ್ನು ವಾರ್ಷಿಕವಾಗಿ ಪರಿಶೋಧಿಸತಕ್ಕದ್ದು.

(2) ಲೆಕ್ಕ ಪರಿಶೋಧನೆಯ ಉದ್ದೇಶಕ್ಕಾಗಿ, ಪ್ರಾಧಿಕಾರದ ಎಲ್ಲ ಲೆಕ್ಕಗಳಿಗೆ ಮತ್ತು ಇತರ ದಾಖಲೆಗಳಿಗೆ ಲೆಕ್ಕಪರಿಶೋಧಕನಿಗೆ ಪ್ರವೇಶಾವಕಾಶವಿರತಕ್ಕದ್ದು.

(3) ಲೆಕ್ಕಪರಿಶೋಧನೆಗಾಗಿ ನಿಯಮಿಸಬಹುದಾದಂಥ ಚಾರ್ಜುಗಳನ್ನು ಪ್ರಾಧಿಕಾರವು ತನ್ನ ನಿಧಿಯಿಂದ ಸಂದಾಯ ಮಾಡತಕ್ಕದ್ದು.

**48. ದಸ್ತಾವೇಜನ್ನು ಹಾಜರುಪಡಿಸುವಂತೆ ಮತ್ತು ಸಂಬಂಧಪಟ್ಟ ವ್ಯಕ್ತಿಗಳು ಹಾಜರಾಗುವಂತೆ ಅಗತ್ಯಪಡಿಸಲು ಲೆಕ್ಕಪರಿಶೋಧಕನಿಗಿರುವ ಅಧಿಕಾರ :–** (1) ಲೆಕ್ಕ ಪರಿಶೋಧಕನು,–

(ಕ) ಲೆಕ್ಕಗಳಿಗೆ ಸಂಬಂಧಪಟ್ಟಂತೆ ತಾನು ಸೂಕ್ತವೆಂದು ಆಲೋಚಿಸಬಹುದಾದಂಥ ವೋಚರುಗಳನ್ನು, ವಿವರಪತ್ರಗಳನ್ನು, ವಿವರಣಪಟ್ಟಿಕೆಗಳನ್ನು, ಪತ್ರ ವ್ಯವಹಾರವನ್ನು ಟಿಪ್ಪಣಿಗಳನ್ನು ಅಥವಾ ಇತರ ದಸ್ತಾವೇಜುಗಳನ್ನು ಹಾಜರುಪಡಿಸುವಮತೆ ಬರಹರೂಪದಲ್ಲಿ ಅಗತ್ಯಪಡಿಸಬಹುದು;

(ಖ) ಅಂಥ ವೋಚರುಗಳಿಗೆ, ವಿವರಣಪತ್ರಗಳಿಗೆ, ವಿವರಣ ಪಟ್ಟಿಕೆಗಳಿಗೆ ಪತ್ರ ವ್ಯವಹಾರಕ್ಕೆ, ಟಿಪ್ಪಣಿಗಳಿಗೆ ಅಥವಾ ಇತರ ದಸ್ತಾವೇಜುಗಳಿಗೆ ಅಥವಾ ಪ್ರಾಧಿಕಾರದ ಯಾವುದೇ ಸ್ವತ್ತಿಗೆ ಜವಾಬ್ದಾರನಾಗಿರುವ ಅಥವಾ ಅವುಗಳ ಅಭಿರಕ್ಷೆಯನ್ನು ಅಥವಾ ನಿಯಂತ್ರಣವನ್ನು ಹೊಂದಿರುವ ಪ್ರಾಧಿಕಾರದ ಯಾವುದೇ ಸವೇತನನೌಕರನನ್ನು ಅಥವಾ ಸ್ವತಃ ಅಥವಾ ತನ್ನ ಪಾಲುಗಾರನ ಮೂಲಕ ಪ್ರಾಧಿಕಾರದೊಡನೆ ಅಥವಾ ಅದರ ಅಧೀನದಲ್ಲಿ ಮಾಡಿಕೊಂಡ ಯಾವುದೇ ಕರಾರಿನಲ್ಲಿ ಪ್ರತ್ಯಕ್ಷವಾಗಿ ಅಥವಾ ಅಪ್ರತ್ಯಕ್ಷವಾಗಿ ಯಾವುದೇ ಹಿಸ್ಸೆಯನ್ನು ಅಥವಾ ಹಿತಾಸಕ್ತಿಯನ್ನು ಹೊಂದಿರುವ ಯಾವನೇ ವ್ಯಕ್ತಿಯನ್ನು ಪ್ರಾಧಿಕಾರದ ಕಚೇರಿಯಲ್ಲಿ ತನ್ನ ಮುಂದೆ ಖುದ್ದಾಗಿ ಹಾಜರಾಗಬೇಕೆಂದು ಮತ್ತು ಯಾವುದೇ ಪ್ರಶ್ನೆಗೆ ಉತ್ತರಿಸಬೇಕೆಂದು ಲಿಖಿತರೂಪದಲ್ಲಿ ಅಗತ್ಯಪಡಿಸಬಹುದು.

(ಗ) ಅಧ್ಯಕ್ಷನಿಂದ ಅಥವಾ ಯಾವನೇ ಅಧಿಕಾರಿಯಿಂದ ಅಥವಾ ಸದಸ್ಯನಿಂದ ಯಾವುದೇ ನಿರ್ದಿಷ್ಟಾಂಶದ ಬಗ್ಗೆ ಸ್ಪಷ್ಟೀಕರಣವನ್ನು ಲಿಖಿತರೂಪದಲ್ಲಿ ಅಗತ್ಯವಾಗಿರುವ ಸಂದರ್ಭಗಳಲ್ಲಿ ಅಂಥ ಅಂಶದ ಬಗ್ಗೆ ಸ್ಪಷ್ಟೀಕರಣವನ್ನು ಒದಗಿಸಬೇಕೆಂದು ಅಂಥ ವ್ಯಕ್ತಿಯನ್ನು ಅಗತ್ಯ ಪಡಿಸಬಹುದು.

(2) (1)ನೇ ಉಪ–ಪ್ರಕರಣದ ಮೇರೆಗೆ ಲೆಕ್ಕ ಪರಿಶೋಧಕನು ಮಾಡಿದ ಯಾವುದೇ ಕಡ್ಡಾಯ ಕೋರಿಕೆಯಲ್ಲಿ ಅಂಥ ಕಡ್ಡಾಯ ಕೋರಿಕೆಯನ್ನು ಪಾಲಿಸುವುದಕ್ಕಾಗಿ ಮೂರು ದಿನಗಳಿಗೆ ಕಡಿಮೆಯಿರದ ಸಮಂಜಸ ಅವಧಿಯನ್ನು ನಿರ್ದಿಷ್ಟಪಡಿಸಬಹುದು.

(3) ಲೆಕ್ಕಪರಿಶೋಧನೆಯನ್ನು ಪ್ರಾರಂಭಿಸಲು ತಾನು ಉದ್ದೇಶಿಸುವ ದಿನಾಂಕದ ಬಗ್ಗೆ ಎರಡು ವಾರಗಳಿಗೆ ಕಡಿಮೆಯಿಲ್ಲದಷ್ಟು ಮುಂಚಿತವಾಗಿ ಲೆಕ್ಕ ಪರಿಶೋಧಕನು ಲಿಖಿತ ನೋಟೀಸನ್ನು ಪ್ರಾಧಿಕಾರಕ್ಕೆ ಕೊಡತಕ್ಕದ್ದು:

ಪರಂತು, ಈ ಉಪ–ಪ್ರಕರಣದಲ್ಲಿ ಏನೇ ಇದ್ದರೂ, ಲೆಕ್ಕಪರಿಶೋಧಕನು ತಾನು ಲಿಖಿತ ರೂಪದಲ್ಲಿ ಅಭಿಲೀಖಿಸಬೇಕಾದ ವಿಶೇಷ ಕಾರಣಗಳಿಗಾಗಿ, ಎರಡು ವಾರಗಳಿಗಿಂತ ಕಡಿಮೆ ಅವಧಿಯ ನೋಟೀಸನ್ನು ಕೊಡಬಹುದು ಅಥವಾ ಸರ್ಕಾರವು ಹಾಗೆ ನಿರ್ದೇಶಿಸಿದರೆ ವಿಶೇಷವಾದ ಅಥವಾ ಸವಿವರವಾದ ಲೆಕ್ಕಪರಿಶೋಧನೆಯ ನೋಟೀಸನ್ನು ಕೊಡದೆಯೇ ಪ್ರಾರಂಭಿಸಬಹುದು.

## ಅಧ್ಯಾಯ – VI

## ಪ್ರಾಧಿಕಾರದ ಅಧಿಕಾರಿಗಳು ಮತ್ತು ನೌಕರರು

**49. ಸರ್ಕಾರದ ಮಂಜೂರಾತಿಗಾಗಿ ಒಪ್ಪಿಸಬೇಕಾಗಿರುವ ಅಧಿಕಾರಿಗಳ ಮತ್ತು ನೌಕರರ ಅನುಸೂಚಿ :–** ಈ ಅಧಿನಿಯಮದ ಉದ್ದೇಶಗಳಿಗಾಗಿ ತಾನು ಇಟ್ಟುಕೊಂಡು ಬರುವುದು ಅವಶ್ಯಕವೆಂದು ಮತ್ತು ಯುಕ್ತವೆಂದು ಭಾವಿಸತಕ್ಕ ಅಧಿಕಾರಿಗಳ ಮತ್ತು ಸಿಬ್ಬಂದಿಯ ಅನುಸೂಚಿಯನ್ನು ಪ್ರಾಧಿಕಾರವು ಕಾಲಕಾಲಕ್ಕೆ ಸಿದ್ಧಪಡಿಸತಕ್ಕದ್ದು ಮತ್ತು ಅದನ್ನು ಸರ್ಕಾರದ ಮಂಜೂರಾತಿಗಾಗಿ ಒಪ್ಪಿಸತಕ್ಕದ್ದು. ಅಂಥ ಪ್ರತಿಯೊಬ್ಬ ಅಧಿಕಾರಿಗಾಗಿ ಅಥವಾ ನೌಕರನಿಗಾಗಿ ಪ್ರಾಧಿಕಾರವು ಪ್ರಸ್ತಾಪಿಸಿದ ಸಂಬಳಗಳ, ಫೀಜುಗಳ ಮತ್ತು ಭತ್ಯೆಗಳ ಮೊತ್ತವನ್ನು ಮತ್ತು ಸ್ವರೂಪವನ್ನು ಸಹ ಅನುಸೂಚಿಯಲ್ಲಿ ನಮೂದಿಸತಕ್ಕದ್ದು ಮಂಜೂರಾ ಅನುಸೂಚಿಯಲ್ಲಿ ಸರ್ಕಾರವು ಮಂಜೂರಾತಿಯಿಲ್ಲದೆ ಯಾವ ವ್ಯತ್ಯಾಸವನ್ನು ಮಾಡತಕ್ಕುದಲ್ಲ.

**50. ನೇಮಕ ಇತ್ಯಾದಿಗಳನ್ನು ಯಾರು ಮಾಡತಕ್ಕುದಲ್ಲ :–** (1) 70ನೇ ಪ್ರಕರಣದಲ್ಲಿ ಮೇರೆಗೆ ರಚಿತವಾದ ವಿನಿಮಯಗಳ ಉಪಬಂಧಗಳಿಗೆ ಮತ್ತು 49ನೇ ಪ್ರಕರಣದ ಮೇರೆಗೆ ಸರ್ಕಾರದಿಂದ ಮಂಜೂರಾದ, ತತ್ಕಾಲದಲ್ಲಿ ಜಾರಿಯಲ್ಲಿರುವ ಅನುಸೂಚಿಗೆ ಒಳಪಟ್ಟು ಪ್ರತಿ ತಿಂಗಳಿಗೆ ನೂರ ಐವತ್ತು ರೂಪಾಯಿಗಳಿಗೆ ಮೀರದ ಸಂಬಳವನ್ನು ಪಡೆಯುವ ಅಧಿಕಾರಿಗಳ ಮತ್ತು ನೌಕರನ ಸಂಬಂಧದಲ್ಲಿ (ಪ್ರಾಧಿಕಾರಕ್ಕೆ ಎರವಲಾಗಿ ಕೊಟ್ಟ ಸರ್ಕಾರಿ ಸೇವೆಯಲ್ಲಿನ ಅಧಿಕಾರಿಗಳಾಗಿರದ) ಪ್ರಾಧಿಕಾರದ ಅಧಿಕಾರಗಳನ್ನು ಮತ್ತು ನೌಕರನ್ನು ನೇಮಿಸುವ ಅವರಿಗೆ ಬಡ್ತಿಕೊಡುವ, ಅವರನ್ನು ಅಮಾನತಿನಲ್ಲಿಡುವ, ವಜಾಮಾಡುವ, ಅವರಿಗೆ ಜುಲ್ಮಾನೆ ವಿಧಿಸುವ, ಕಡಿಮೆ ಮಾಡುವ ಅಥವಾ ರಜೆ ಮಂಜೂರು ಮಾಡುವ ಅಧಿಕಾರವನ್ನು ಅಧ್ಯಕ್ಷನು ಚಲಾಯಿಸತಕ್ಕದ್ದು ಮತ್ತು ಇತರ ಪ್ರತಿಯೊಂದು ಸಂದರ್ಭದಲ್ಲಿ ಪ್ರಾಧಿಕಾರವು ಚಲಾಯಿಸತಕ್ಕದ್ದು:

ಪರಂತು, ಪ್ರಾಧಿಕಾರಕ್ಕೆ ಎರವಲು ಕೊಡಲಾಗಿರುವ ಸರ್ಕಾರಿ ಸೇವೆಯಲ್ಲಿನ ಅಧಿಕಾರಿಗಳ ಸಂದರ್ಭದಲ್ಲಿ, ಸಂಬಳ ಬಡ್ತಿಯನ್ನು ಮಂಜೂರು ಮಾಡುವ ಅಥವಾ ತಡೆ ಹಿಡಿಯುವ, ಜುಲ್ಮಾನೆ ವಿಧಿಸುವ ಅಥವಾ ಅಮಾನತುಗೊಳಿಸುವ ಅಧಿಕಾರವನ್ನು ಅಧ್ಯಕ್ಷನು ಚಲಾಯಿಸಬಹುದು ಮತ್ತು ಅಂಥ ಅಧಿಕಾರಿಯು ಸರ್ಕಾರದ ಯಾವ ಇಲಾಖೆಗೆ ಸೇರಿರುವನೋ ಅದಕ್ಕೆ ಸಂಬಂಧಪಟ್ಟ ಇಲಾಖೆಯ ಮುಖ್ಯಾಧಿಕಾರಿಗೆ ಸಂಗತಿಯನ್ನು ವರದಿ ಮಾಡತಕ್ಕದ್ದು.

(2) ಪ್ರಾಧಿಕಾರಕ್ಕೆ ಸೇವೆಯನ್ನು ಎರವಲು ಕೊಡಲಾದ ಸರ್ಕಾರಿ ಸೇವೆಯಲ್ಲಿನ ಅಧಿಕಾರಿಯಾಗಿರು ಪ್ರಾಧಿಕಾರದ ಯಾವನೇ ಅಧಿಕಾರಿಯ ಅಥವಾ ನೌಕರನ ಸೇವೆಯನ್ನು ಅಂಥ ಅಧಿಕಾರಿಯ ಅಥವಾ ನೌಕರನ ಸ್ವಂತ ದುರ್ನಡತೆಯ ಕಾರಣದಿಂದಲ್ಲದೆ ತೆಗೆದು ಹಾಕುವ ಅಥವಾ ನಿವೃತ್ತಿವೇತನ, ಉಪದಾನ ಮತ್ತು ಸಹಾನುಭೂತಿಯ ಭತ್ಯದ ಮೇಲೆ ಅಂಥ ಯಾವನೇ ಅಧಿಕಾರಿಯನ್ನು ಅಥವಾ ನೌಕರನನ್ನು ನಿವೃತ್ತಿಗೊಳಿಸುವುದಕ್ಕೆ ಅನುಮತಿಯನ್ನು ಕೊಡುವ ಅಧಿಕಾರನ್ನು, (1)ನೇ ಉಪ–ಪ್ರಕರಣದ ಉಪಬಂಧಗಳಿಗೊಳಪಟ್ಟು, ಪ್ರಾಧಿಕಾರವು ಮಾತ್ರ ಚಲಾಯಿಸತಕ್ಕದ್ದು.

## ಅಧ್ಯಾಯ – VII

## ಕಲಾ ಆಯೋಗ

**51. ಕಲಾ ಆಯೋಗದ ರಚನೆ :–** (1) ಬೆಂಗಳೂರು ಮಹಾನಗರ ಪ್ರದೇಶಕ್ಕಾಗಿ "ಬೆಂಗಳೂರು ನಗರ ಕಲಾ ಆಯೋಗ" ಎಂಬ ಹೆಸರಿನ ಕಲಾ ಆಯೋಗವನ್ನು ಸರ್ಕಾರವು, ಅಧಿಸೂಚನೆಯ ಮೂಲಕ ರಚಿಸಬಹುದು, ಮತ್ತು ಅದರಲ್ಲಿ ಸರ್ಕಾರವು ನೇಮಿಸಬಹುದಾದಂಥ ಅಧ್ಯಕ್ಷನು ಮತ್ತು ಇತರ ವಿಷಯಗಳ ಜೊತೆಗೆ ದೃಶ್ಯ ಕಲೆಗಳನ್ನು ಅಥವಾ ವಾಸ್ತುಶಿಲ್ಪವನ್ನು ಅಥವಾ ಭಾರತೀಯ ಇತಿಹಾಸವನ್ನು ಅಥವಾ ಪ್ರಾಚ್ಯವಸ್ತು ಶಾಸ್ತ್ರವನ್ನು ಮತ್ತು ಪರಿಸರ ವಿಜ್ಞಾನಗಳನ್ನು ಪ್ರತಿನಿಧಿಸುವ ಇತರ ಸದಸ್ಯರು ಇರತಕ್ಕದ್ದು.

(2) ಕೆಳಕಂಡವುಗಳ ಬಗ್ಗೆ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು ಕಲಾ ಆಯೋಗದ ಕರ್ತವ್ಯವಾಗಿರತಕ್ಕದ್ದು.

(i) ನಗರ ವಿನ್ಯಾಸದ ಮತ್ತು ಅಭಿವೃದ್ಧಿ ಪ್ರದೇಶಗಳ ಪರಿಸರದ ಜೀರ್ಣೋದ್ದಾರವನ್ನು ಮಾಡುವುದು ಮತ್ತು ರಕ್ಷಣೆ ಮಾಡುವುದು;

(ii) ಭವಿಷ್ಯತ್ತಿನ ನಗರ ವಿನ್ಯಾಸವನ್ನು ಮತ್ತು ಪರಿಸರವನ್ನು ಯೋಜಿಸುವುದು ಹಾಗು ಅಭಿವೃದ್ಧಿಗೊಳಿಸುವುದು;

(iii) ಪ್ರಾಚ್ಯವಸ್ತು ವಿಷಯ ಮತ್ತು ಐತಿಹಾಸಿಕ ನಿವೇಶನಗಳನ್ನು ಮತ್ತು ಅತಿಶಯ ನಿಸರ್ಗ ಸೌಂದರ್ಯವನ್ನುಳ್ಳ ನಿವೇಶನಗಳನ್ನು ಜೀರ್ಣೋದ್ದಾರ ಮಾಡುವುದು ಹಾಗೂ ರಕ್ಷಣೆ ಮಾಡುವುದು;

(iv) ಈ ಉದ್ದೇಶಕ್ಕೋಸ್ಕರ ಖರೀದಿಗಾಗಿ ಅಥವಾ ಸ್ವಾಧೀನಪಡಿಸಿಕೊಳ್ಳುವುದಕ್ಕಾಗಿ ಸರ್ಕಾರವು ಅಥವಾ ಯಾವುದೇ ಪ್ರಾಧಿಕಾರವು ಕೊಡಬೇಕಾದ ಅನುದಾನಗಳು ರಿಯಾಯಿತಿಗಳು ಮತ್ತು ಇತರ ರೀತಿಯ ನಷ್ಟ ಪರಿಹಾರದ ವಿಧಾನಗಳು ಮತ್ತು ಅಂಥ ಅನುದಾನಗಳನ್ನು, ರಿಯಾಯಿತಿಗಳನ್ನು ಮತ್ತು ನಷ್ಟ ಪರಿಹಾರವನ್ನು ಯಾವ ಷರತ್ತುಗಳಿಗೆ ಒಳಪಟ್ಟು ಕೊಡಬೇಕು; ಮತ್ತು

(v) ಸರ್ಕಾರವು ಆಯೋಗಕ್ಕೆ ಕಳಿಸಿದ ಇತರ ಯಾವುದೇ ವಿಷಯ;

3) ಕಲಾ ಆಯೋಗವು ಚಲಾಯಿಸಬೇಕಾದ ಅಧಿಕಾರಗಳು ಮತ್ತ ನಿರ್ವಹಿಸಬೇಕಾದ ಪ್ರಕಾರ್ಯಗಳು ಹಾಗೂ ಅನುಸರಿಸಬೇಕಾದ ಪ್ರಕ್ರಿಯೆಯು ನಿಯಮಿಸಬಹುದಾದಂತೆ ಇರತಕ್ಕದ್ದು.

4) ಕಲಾ ಆಯೋಗದ ಶಿಫಾರಸ್ಸುಗಳನ್ನು ಪರ್ಯಾಲೋಚಿಸಿದ ಅನಂತರ ಮತ್ತು ಯಾವುದೇ ಮನವಿಯನ್ನು ಸಲ್ಲಿಸಲು ಪ್ರಾಧಿಕಾರಕ್ಕೆ ಅವಕಾಶಕೊಟ್ಟ ಅನಂತರ, ತಾನು ಸೂಕ್ತವೆಂದು ಆಲೋಚಿಸುವಂಥ ನಿರ್ದೇಶನಗಳನ್ನು ಸರ್ಕಾರವು ಕೊಡಬಹುದು ಮತ್ತು ಅಂಥ ಪ್ರತಿಯೊಂದು ನಿರ್ದೇಶನವನ್ನು ಪ್ರಾಧಿಕಾರವು ಪಾಲಿಸತಕ್ಕದ್ದು.

## ಅಧ್ಯಾಯ – VIII

### ಸಂಕೀರ್ಣ

**52. ಪ್ರವೇಶಾಧಿಕಾರಿಗಳು :–** ಪ್ರಾಧಿಕಾರವು ಯಾವನೇ ವ್ಯಕ್ತಿಯನ್ನು

(ಕ) ಯಾವುದೇ ವಿಚಾರಣೆಯನ್ನು, ಪರಿಶೀಲನೆಯನ್ನು, ಅಳತೆಯನ್ನು ಅಥವಾ ಮೋಜಣಿಯನ್ನು ಮಾಡುವ ಅಥವಾ ಅಂಥ ಭೂಮಿಯ ಅಥವಾ ಕಟ್ಟಡದ ಮಟ್ಟಗಳನ್ನು ತೆಗೆದುಕೊಳ್ಳುವ;

(ಖ) ನಡೆಯುತ್ತಿರುವ ಕಾಮಗಾರಿಗಳನ್ನು ಪರೀಕ್ಷಿಸುವ ಮತ್ತು ಒಳಚರಂಡಿಗಳ ಹಾಗೂ ಚರಂಡಿಗಳ ಮಾರ್ಗವನ್ನು ನಿಶ್ಚಿತಗೊಳಿಸಿಕೊಳ್ಳುವ;

(ಗ) ಒಳಮಣ್ಣನ್ನು ಅಗೆಯುವ ಅಥವಾ ಕೊರೆಯುವ;

(ಘ) ಗಡಿಗಳನ್ನು ಮತ್ತು ಉದ್ದೇಶಿತ ಕಾಮಗಾರಿಯ ಕಾರ್ಯರೇಖೆಗಳನ್ನು ಗುರುತು ಮಾಡುವ;

(ಙ) ಗುರುತು ಹಾಕುವ ಮೂಲಕ ಮತ್ತು ಕಂದಕಗಳನ್ನು ತೋಡುವಮೂಲಕ ಅಂಥ ಮಟ್ಟಗಳನ್ನು, ಗಡಿಗಳನ್ನು ಮತ್ತು ಕಾರ್ಯರೇಖೆಗಳನ್ನು ಗುರುತಿಸುವ;

(ಚ) ಯಾವುದೇ ನಕ್ಷೆಯನ್ನು ಉಲ್ಲಂಘಿಸಿ ಅಥವಾ ಯಾವುದೇ ಷರತ್ತಿಗೆ ಒಳಪಟ್ಟು ಅಂಥ ಅನುಮತಿಯನ್ನು ಕೊಡಲಾಗಿದೆಯೋ ಆ ಯಾವುದೇ ಷರತ್ತನ್ನು ಉಲ್ಲಂಘಿಸಿ ಯಾವುದೇ ಭೂಮಿಯನ್ನು ಅಭಿವೃದ್ಧಿಗೊಳಿಸಲಾಗುತ್ತಿದೆಯೇ ಅಥವಾ ಅಭಿವೃದ್ಧಿಗೊಳಿಸಲಾಗಿದೆಯೇ ಎಂಬುದನ್ನು ನಿಶ್ಚಿತಗೊಳಿಸಿಕೊಳ್ಳುವ; ಅಥವಾ

(ಛ) ಈ ಅಧಿನಿಯಮವನ್ನು ದಕ್ಷತೆಯಿಂದ ಕಾರ್ಯಗತಗೊಳಿಸಲು ಅವಶ್ಯವಾದ ಯಾವುದೇ ಇತರ ಕಾರ್ಯವನ್ನು ಮಾಡುವ ಉದ್ದೇಶಕ್ಕಾಗಿ ಸಹಾಯಕರೊಡನೆ ಅಥವಾ ಕೆಲಸಗಾರರೊಡನೆ ಅಥವಾ ಅವರಿಲ್ಲದೆ ಯಾವುದೇ ಭೂಮಿಯನ್ನು ಅಥವಾ ಕಟ್ಟಡವನ್ನು ಪ್ರವೇಶಿಸಲು ಅಧಿಕೃತಗೊಳಿಸಬಹುದು.

ಪರಂತು :–

(i) ಸೂರ್ಯೋದಯದಿಂದ ಸೂರ್ಯಾಸ್ತದ ನಡುವಣ ಅವಧಿಯಲ್ಲಿ ಹೊರತು ಮತ್ತು ಆ ಭೂಮಿಯ ಅಥವಾ ಕಟ್ಟಡದ ಅಧಿಭೋಗದಾರನಿಗೆ ಅಥವಾ ಆಧಿಭೋಗದಾರನು ಇರದಿದ್ದರೆ, ಒಡೆಯನಿಗೆ ಯುಕ್ತ ನೋಟೀಸನ್ನು ಕೊಡದೆಯೇ ಹಾಗೆ ಪ್ರವೇಶ ಮಾಡತಕ್ಕುದಲ್ಲ;

(ii) ಪ್ರತಿಯೊಂದು ಸಂದರ್ಭದಲ್ಲೂ ಮಹಿಳೆಯರು ಯಾರಾದರೂ ಇದ್ದರೆ ಅವರಿಗೆ ಅಂಥ ಭೂಮಿಯಿಂದ ಅಥವಾ ಕಟ್ಟಡದಿಂದ ಹೊರ ಹೋಗಲು ಸಾಕಷ್ಟು ಅವಕಾಶವನ್ನು ಕೊಡತಕ್ಕದ್ದು;

(iii) ಯಾವ ಉದ್ದೇಶಕ್ಕಾಗಿ ಪ್ರವೇಶ ಮಾಡಲಾಗುತ್ತದೆಯೋ ಆ ಉದ್ದೇಶದ ಅವಶ್ಯಕತೆಗನುಗುಣವಾಗಿರಬಹುದಾದಷ್ಟರ ಮಟ್ಟಿಗೆ; ಪ್ರವೇಶ ಮಾಡಲಿರುವ ಭೂಮಿಯ ಅಥವಾ ಕಟ್ಟಡದ ಅಧಿಬೋಗದಾರರ ಸಾಮಾಜಿಕ ಮತ್ತು ಧಾರ್ಮಿಕ ಆಚರಣೆಗಳಿಗೆ ಯುಕ್ತ ಗಮನವನ್ನು ಕೊಡತಕ್ಕದ್ದು.

**53. ಪ್ರಾಧಿಕಾರದ ನಿರ್ದೇಶನಗಳು :–** (1) ಈ ಅಧಿನಿಯಮದ ಉದ್ದೇಶವನ್ನು ಕಾರ್ಯಗತಗೊಳಿಸುವುದಕ್ಕಾಗಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಗೆ, ಮತ್ತು ನಗರದಲ್ಲಿನ ಅಭಿವೃದ್ಧಿ ಕಾರ್ಯಗಳಿಗೆ ಸಂಬಂಧಿಸಿರುವಂಥ ಇತರ ನಿಕಾಯಗಳಿಗೆ ಪ್ರಾಧಿಕಾರವು ನಿರ್ದೇಶನಗಳನ್ನು ಕೊಡಬಹುದು ಮತ್ತು ಅದನ್ನು ನೆರವೇರಿಸುವುದಕ್ಕಾಗಿ ಅಗತ್ಯವಾಗಿರುವ ಹಣವನ್ನು ಒದಗಿಸಬಹುದು.

(2) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರು. ಅಂಥ ನಿರ್ದೇಶನವನ್ನು ಯಾವ ನಿಕಾಯಕ್ಕೆ ಕೊಡಲಾಗಿದೆಯೋ ಆ ನಿಕಾಯವು ಅದನ್ನು ಪಾಲಿಸತಕ್ಕದ್ದು. ಇದಕ್ಕೆ ತಪ್ಪಿದಲ್ಲಿ, ಈ ಬಗ್ಗೆ ಅವಶ್ಯವಾದ ಕ್ರಮವನ್ನು ಕೈಕೊಳ್ಳುವುದಕ್ಕೆ ಮತ್ತು ಆ ಬಗ್ಗೆ ತಗಲಿದ ಯಾವುದೇ ವೆಚ್ಚವನ್ನು ಸಂಬಂಧಪಟ್ಟ ನಿಕಾಯದಿಂದ ವಸೂಲು ಮಾಡುವುದಕ್ಕೆ ಪ್ರಾಧಿಕಾರವು ಸಕ್ಷಮವಾಗಿರತಕ್ಕದ್ದು.

(3) ಪ್ರಾಧಿಕಾರದ ಮತ್ತು (1)ನೇ ಉಪಪ್ರಕರಣದಲ್ಲಿ ಉಲ್ಲೇಖಿತವಾದ ಮಂಡಳಿಗಳ ಅಥವಾ ಇತರ ನಿಕಾಯಗಳ ನಡುವೆ, ಅವುಗಳಿಗೆ ಕೊಡಲಾದ ನಿರ್ದೇಶನಗಳ ಸಂಬಂಧದಲ್ಲಿ, ಉದ್ಭವಿಸುವ ಯಾವುದೇ ವಿವಾದವನ್ನು ಸರ್ಕಾರವು ತೀರ್ಮಾನಿಸತಕ್ಕದ್ದು ಮತ್ತು ಅದರ ತೀರ್ಮಾನವು ಅಂತಿಮವಾಗಿರತಕ್ಕದ್ದು.

**54. ಕಂಪನಿಗಳಿಂದ ಅಪರಾಧಗಳು :–** (1) ಈ ಅಧಿನಿಯಮದ ಮೇರೆಗೆ ಅಪರಾಧವನ್ನು ಮಾಡುವ ವ್ಯಕ್ತಿಯು ಕಂಪೆನಿಯಾಗಿದ್ದರೆ, ಅಪರಾಧವು ನಡೆದ ಕಾಲದಲ್ಲಿ ಕಂಪೆನಿಯ ಆಡಳಿತವನ್ನು ಹೊಂದಿದ್ದ ಮತ್ತು ಅದರ ವ್ಯವಹಾರಗಳನ್ನು ನಡೆಸುವ ಬಗ್ಗೆ ಕಂಪನಿಗೆ ಹೊಣೆಗಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಕಂಪೆನಿಯನ್ನು ಸಹ ಆ ಅಪರಾಧದ ಬಗ್ಗೆ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅವರು ತಮ್ಮ ವಿರುದ್ಧದ ವ್ಯವಹರಣೆಗೆ ಹಾಗೂ ಅದಕ್ಕನುಗುಣವಾದ ದಂಡನೆಗೆ ಗುರಿಯಾಗತಕ್ಕದ್ದು;

ಪರಂತು, ಈ ಉಪಕರಣದಲ್ಲಿ ಇರುವುದು ಯಾವುದೂ, ಅಪರಾಧವು ನನಗೆ ಗೊತ್ತಿಲ್ಲದಂತೆ ನಡೆಯಿತೆಂದು ಅಥವಾ ಅಂಥ ಅಪರಾಧವು ನಡೆಯವುದನ್ನು ತಡೆಗಟ್ಟಲು ನಾನು ಎಲ್ಲಾ ಯುಕ್ತ ಜಾಗರೂಕತೆಯನ್ನು ವಹಿಸಿದನೆಂದು ಅವನು ರುಜುವಾತುಪಡಿಸಿದರೆ, ಅಂಥ ಯಾವನೇ ವ್ಯಕ್ತಿಯನ್ನು ಈ ಅಧಿನಿಯಮದಲ್ಲಿ ಉಪ ಬಂಧಿತವಾಗಿರುವ ಯಾವುದೇ ದಂಡನೆಗೆ ಗುರಿಯಾಗುವ ಮಾಡತಕ್ಕುದಲ್ಲ.

(2) (1) ನೇ ಉಪಪ್ರಕರಣದಲ್ಲಿ ಏನೇ ಇದ್ದರೂ ಈ ಅಧಿನಿಯಮದ ಮೇರೆಗೆ ಅಪರಾಧವನ್ನು ಕಂಪೆನಿಯು ಮಾಡಿರುವುದಲ್ಲಿ ಮತ್ತು ಆ ಅಪರಾಧವು ಆ ಕಂಪನಿಯು ಯಾವನೇ ನಿರ್ದೇಶಕ, ವ್ಯವಸ್ಥಾಪಕು ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ನಡೆಯಿತೆಂದು ಅಥವಾ ಆ ಅಪರಾಧವು ಅವನ ಯಾವುದೇ ನಿರ್ಲಕ್ಷ್ಯದಿಂದ ಸಂಭವಿಸಿತೆಂದು ಹೇಳಬಹುದೆಂಬುದು ರುಜುವಾತು ಆದಲ್ಲಿ, ಅಂಥ ನಿರ್ದೇಶಕನು ವ್ಯವಸ್ಥಾಪಕನು, ಕಾರ್ಯದರ್ಶಿಯು ಅಥವಾ ಇತರ ಅಧಿಕಾರಿಯು ಸಹ ಈ ಅಪರಾಧದ ದೋಷಿಯೆಂದು ಭಾವಿತನಾಗತಕ್ಕದ್ದು ಮತ್ತು ತನ್ನ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಹಾಗೂ ಅದಕ್ಕನುಗುಣವಾಗಿ ದಂಡಿತನಾಗತ್ಕದ್ದು.

**ವಿವರಣೆ :–** ಈ ಪ್ರಕರಣದ ಉದ್ದೇಶಗಳಿಗಾಗಿ

(ಕ) "ಕಂಪನಿ" ಎಂದರೆ ಒಂದು ನಿಗಮಿತ ನಿಕಾಯ ಮತ್ತು ಇದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ.; ಮತ್ತು

(ಖ) ಫರ್ಮಿನ ಸಂಬಂಧದಲ್ಲಿ "ನಿರ್ದೇಶಕ" ಎಂದರೆ ಆ ಫರ್ಮಿನ ಒಬ್ಬ ಪಾಲುದಾರ.

**55. ಜುಲ್ಮಾನೆಯು ವಸೂಲಾದಾಗ, ಅದನ್ನು ಬೆಂಗಳೂರು ಅಭಿವೃದ್ಧಿ ನಿಧಿಗೆ ಜಮೆ ಮಾಡತಕ್ಕದು :–** ಈ ಅಧಿನಿಯಮದ ಮೇರೆಗಿನ ಪ್ರಾಸಿಕ್ಯೂಷನ್ನಿನಿಂದಾಗಿ ವಸೂಲಾದ ಎಲ್ಲಾ ಜುಲ್ಮಾನೆಗಳನ್ನು ಬೆಂಗಳೂರು ಅಭಿವೃದ್ಧಿಯ ಖಾತೆಗೆ ಸಂದಾಯ ಮಾಡತಕ್ಕದ್ದು.

**56. ಅಪರಾಧಗಳ ರಾಜಿ :–** (1) ಪ್ರಾಧಿಕಾರವು ಅಥವಾ ಪ್ರಾಧಿಕಾರದಿಂದ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಅಧಿಕೃತವಾದ ಯಾವನೇ ವ್ಯಕ್ತಿಯು, ವ್ಯವಹರಣೆಗಳು ಪ್ರಾರಂಭವಾಗುವ ಮುಂಚೆ ಅಥವಾ

ಅನಂತರ ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು ರಾಜಿ ಮಾಡಿ ಕೊಳ್ಳಬಹುದು.

(2) ಅಪರಾಧವನ್ನು ರಾಜಿ ಮಾಡಿಕೊಂಡಿರುವಲ್ಲಿ, ಅಪರಾಧಿಯು, ಅಭಿರಕ್ಷೆಯಲ್ಲಿದ್ದರೆ, ಅವನನ್ನು ವಿಮೋಚನೆ ಮಾಡತಕ್ಕದ್ದು ಮತ್ತು ರಾಜಿ ಮಾಡಿಕೊಳ್ಳಲಾದ ಅಪರಾಧಕ್ಕೆ ಸಂಬಂಧಿಸಿದಂತೆ ಅವನ ವಿರುದ್ಧವಾಗಿ ಯಾವ ಮುಂದಿನ ಕ್ರಮವನ್ನು ಕೈ ಕೊಳ್ಳತಕ್ಕುದಲ್ಲ.

57. **ಪ್ರಾಧಿಕಾರದ ಆದೇಶಗಳ ಮತ್ತು ದಸ್ತಾವೇಜುಗಳ ಅಧಿಪ್ರಮಾಣೀಕರಣ :–** ಪ್ರಾಧಿಕಾರದ ಎಲ್ಲ ಅನುಮತಿಗಳು, ಆದೇಶಗಳು, ತೀರ್ಮಾನಗಳು, ನೋಟೀಸುಗಳು, ಮತ್ತು ಇತರ ದಸ್ತಾವೇಜುಗಳ, ಪ್ರಾಧಿಕಾರದ ಕಾರ್ಯದರ್ಶಿಯ ಅಥವಾ ಈ ಬಗ್ಗೆ ಪ್ರಾಧಿಕಾರದಿಂದ ಅಧಿಕೃತನಾದ ಇತರ ಯಾವುನೇ ಅಧಿಕಾರಿಯ ಸಹಿಯ ಮೂಲಕ ಅಧಿ ಪ್ರಮಾಣಿತವಾಗತಕ್ಕದ್ದು.

58. **ಸದಸ್ಯರು ಮತ್ತು ಅಧಿಕಾರಿಗಳು ಲೋಕ ನೌಕರರಾಗಿರತಕ್ಕದ್ದು :–** ಪ್ರಾಧಿಕಾರದ ಪ್ರತಿಯೊಬ್ಬ ಸದಸ್ಯನು ಮತ್ತು ಪ್ರತಿಯೊಬ್ಬ ಅಧಿಕಾರಿಯು ಮತ್ತು ಇತರ ನಿಯೋಜಕನು ಭಾರತ ದಂಡ ಸಂಹಿತೆಯ 21ನೇ ಪ್ರಕರಣದ ಅರ್ಥ ವ್ಯಾಪ್ತಿಯಲ್ಲಿ ಲೋಕನೌಕರನೆಂದು ಭಾವಿತನಾಗತಕ್ಕದ್ದು.

59. **ನ್ಯಾಯಾಲಯಗಳ ಅಧಿಕಾರವ್ಯಾಪ್ತಿ :–** ಪ್ರಥಮ ದರ್ಜೆಯ ಮ್ಯಾಜಿಸ್ಟ್ರೇಟಿನ ನ್ಯಾಯಾಲಯಕ್ಕಿಂತ ಕಡಿಮೆ ದರ್ಜೆಯ ಯಾವುದೇ ನ್ಯಾಯಾಲಯವೂ, ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು ಅಧಿವಿಚಾರಣೆ ಮಾಡತಕ್ಕುದಲ್ಲ.

60. **ಪ್ರಾಸಿಕ್ಯೂಷನ್ನಿನ ಮಂಜೂರಾತಿ :–** ಪ್ರಾಧಿಕಾರದ ಪೂರ್ವ ಮಂಜೂರಾತಿಯಿದ್ದ ಹೊರತು, ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧಕ್ಕಾಗಿ ಪ್ರಾಸಿಕ್ಯೂಷನನ್ನು ಹೂಡತಕ್ಕುದಲ್ಲ.]

61. **ಸದ್ಭಾವನೆಯಿಂದ ಕೈಕೊಳ್ಳಲಾದ ಯಾವುದೇ ಕ್ರಮದ ರಕ್ಷಣೆ :–** ಈ ಅಧಿನಿಯಮದ ಮೇರೆಗೆ ಅಥವಾ ಅದರ ಮೇರೆಗೆ ಮಾಡಲಾದ ಯಾವುದೇ ನಿಯಮದ ಅಥವಾ ವಿನಿಯಮದ ಮೇರೆಗೆ ಸದ್ಭಾವನೆಯಿಂದ ಮಾಡಲಾದ ಅಥವಾ ಮಾಡಲಾದ ಅಥವಾ ಮಾಡಲು ಉದ್ದೇಶಿಸಲಾದ ಯಾವುದೇ ಕಾರ್ಯದ ಬಗ್ಗೆ ಯಾವುದೇ ದಾವೆಯನ್ನು, ಪ್ರಾಸಿಕ್ಯೂಷನ್‌ನ್ನು ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಯಾವನೇ ವ್ಯಕ್ತಿಯ ವಿರುದ್ಧ ಹೂಡಲು ಅವಕಾಶವಿರತಕ್ಕುದಲ್ಲ.

62. **ಪ್ರತ್ಯಾಯೋಜಿಸುವ ಅಧಿಕಾರ :–** ವಿನಿಯಮಗಳನ್ನು ಮಾಡುವ ಅಧಿಕಾರದ ಹೊರತು, ಈ ಅಧಿನಿಯಮದ ಮೇರೆಗೆ ತಾನು ಚಲಾಯಿಸಬಹುದಾದ ಯಾವುದೇ ಅಧಿಕಾರವನ್ನು ಪ್ರಾಧಿಕಾರದ ಅಧ್ಯಕ್ಷನು ಅಥವಾ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅಧಿಕಾರಿಯು, ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ನಿರ್ಬಂಧಗಳಿಗೆ ಮತ್ತು ಷರತ್ತುಗಳಿಗೊಳಪಟ್ಟು, ಚಲಾಯಿಸಬಹುದೆಂದು ಪ್ರಾಧಿಕಾರವು ಅಧಿಸೂಚನೆಯ ಮೂಲಕ ನಿರ್ದೇಶಿಸಬಹುದು.

63. **ಪುನರೀಕ್ಷಣೆ :–** (1) ಯಾವುದೇ ಆದೇಶದ ಅಥವಾ ವ್ಯವಹರಣೆಗಳ ಕಾನೂನು ಸಮ್ಮತತೆಯ ಅಥವಾ ಔಚಿತ್ಯದ ಬಗ್ಗೆ ತಾನು ಮನದಟ್ಟು ಮಾಡಿಕೊಳ್ಳುವ ಉದ್ದೇಶಕ್ಕಾಗಿ, ಪ್ರಾಧಿಕಾರದ ಅಥವಾ ಪ್ರಾಧಿಕಾರಕ್ಕೆ ಅಧೀನವಾದ ಯಾವನೇ ಅಧಿಕಾರಿಯು ಯಾವುದೇ ವ್ಯವಹರಣೆಗಳ ದಾಖಲೆಗಳನ್ನು ಸರ್ಕಾರವು ತರಿಸಿಕೊಳ್ಳಬಹುದು ಮತ್ತು ಆ ಬಗ್ಗೆ ತಾನು ಸೂಕ್ತವೆಂದು ಆಲೋಚಿಸುವಂಥ ಆದೇಶವನ್ನು ಮಾಡಬಹುದು.

(2) ಯಾವುದೇ ಆದೇಶದ ಅಥವಾ ವ್ಯವಹರಣೆಗಳ ಕಾನೂನು ಸಮ್ಮತತೆಯ ಅಥವಾ ಔಚಿತ್ಯದ ಬಗ್ಗೆ ತಾನು ಮನದಟ್ಟು ಮಾಡಿಕೊಳ್ಳುವ ಉದ್ದೇಶಕ್ಕಾಗಿ, ತನಗೆ ಅಧೀನವಾಗಿರುವ ಯಾವನೇ ಅಧಿಕಾರಿಯ ಯಾವುದೇ ವ್ಯವಹರಣೆಗಳ ದಾಖಲೆಗಳನ್ನು ಪ್ರಾಧಿಕಾರವು ತರಿಸಿಕೊಳ್ಳಬಹುದು ಮತ್ತು ಆ ಬಗ್ಗೆ ತಾನು ಸೂಕ್ತವೆಂದು ಆಲೋಚಿಸುವಂಥ ಆದೇಶವನ್ನು ಮಾಡಬಹುದು.

(3) (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಮೇರೆಗೆ, ತನ್ನ ಮನವಿಯನ್ನು ಸಲ್ಲಿಸಲು ಯಾವನೇ ವ್ಯಕ್ತಿಗೆ ಅವಕಾಶವನ್ನು ಕೊಟ್ಟ ಹೊರತು, ಅವನಿಗೆ ಪ್ರತಿಕೂಲವಾಗುವಂತೆ ಯಾವ ಆದೇಶವನ್ನು ಮಾಡತಕ್ಕುದಲ್ಲ.

**64. ಪ್ರಾಧಿಕಾರದ ವಿರುದ್ಧ ದಾವೆಯ ನೋಟೀಸು :–** ಈ ಅಧಿನಿಯಮದ ಅಥವಾ ಅದರ ಮೇರೆಗೆ ಮಾಡಲಾದ ನಿಯಮಕ್ಕೆ, ವಿನಿಮಯಕ್ಕೆ ಅಥವಾ ಉಪವಿಧಿಗೆ ಅನುಸಾರವಾಗಿ ಮಾಡಲಾದ ಅಥವಾ ಮಾಡಲಾಗಿದೆಯೆಂದು ತಾತ್ಪರ್ಯವಾಗುವ ಯಾವುದೇ ಕಾರ್ಯದ ಬಗ್ಗೆ ಉದ್ದೇಶಿತ ದಾವೆಯ ಅಥವಾ ಇತರ ವ್ಯವಹರಣೆಗಳ, ಮತ್ತು ಅದರ ಕಾರಣದ ಬಗ್ಗೆ ಪ್ರಾಧಿಕಾರಕ್ಕೆ ಲಿಖಿತರೂಪದಲ್ಲಿ ಒಂದು ತಿಂಗಳ ಪೂರ್ವ ನೋಟೀಸನ್ನು ಕೊಡದೆ, ಮತ್ತು ಅಂಥ ದಾವೆಯ ಅಥವಾ ಇತರ ವ್ಯವಹರಣೆಗಳ ಕಾರಣವು ಉಂಟಾದಂದಿನಿಂದ ಆರು ತಿಂಗಳ ಅನಂತರ ಅಥವಾ ಸಾಕಷ್ಟು ಪರಿಹಾರವನ್ನು ನೀಡಿದ ಅನಂತರ ಪ್ರಾಧಿಕಾರದ ಅಥವಾ ಪ್ರಾಧಿಕಾರದ ಯಾವನೇ ಸದಸ್ಯನ ಅಥವಾ ಯಾವನೇ ಅಧಿಕಾರಿಯ ಅಥವಾ ನೌಕರನ ವಿರುದ್ಧ ಅಥವಾ ಪ್ರಾಧಿಕಾರದ ಸದಸ್ಯನ ಅಥವಾ ಅಧಿಕಾರಿಯ ನಿರ್ದೇಶನದ ಮೇರೆಗೆ ಕಾರ್ಯ ನಿರ್ವಹಿಸುತ್ತಿರುವ ಯಾವನೇ ವ್ಯಕ್ತಿಯ ವಿರುದ್ಧ ಯಾವ ದಾವೆಯನ್ನು ಅಥವಾ ಇತರ ವ್ಯವಹರಣೆಗಳನ್ನೂ ಪ್ರಾರಂಭಿಸತಕ್ಕುದಲ್ಲ

**65. ಪ್ರಾಧಿಕಾರಕ್ಕೆ ನಿರ್ದೇಶನಗಳನ್ನು ಕೊಡಲು ಸರ್ಕಾರಕ್ಕಿರುವ ಅಧಿಕಾರ :–** ಈ ಅಧಿನಿಯಮದ ಆದೇಶಗಳನ್ನು ಕಾರ್ಯಗತಗೊಳಿಸಲು ಅವಶ್ಯವೆಂದು ಅಥವಾ ವಿಹಿತವೆಂದು ತಾನು ಅಭಿಪ್ರಾಯಪಡುವಂಥ ನಿರ್ದೇಶನಗಳನ್ನು ಸರ್ಕಾರವು ಪ್ರಾಧಿಕಾರಕ್ಕೆ ಕೊಡಬಹುದು, ಮತ್ತು ಅಂಥ ನಿರ್ದೇಶನಗಳನ್ನು ಪಾಲಿಸುವುದು ಪ್ರಾಧಿಕಾರದ ಕರ್ತವ್ಯವಾಗಿರತಕ್ಕದ್ದು.

**66. ಕರ್ತವ್ಯವನ್ನು ನೆರವೇರಿಸುವಲ್ಲಿ ತಪ್ಪುವುದು :–** (1) ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಪ್ರಾಧಿಕಾರಕ್ಕೆ ವಿಧಿಸಲಾದ ಯಾವುದೇ ಕರ್ತವ್ಯವನ್ನು ನೆರವೇರಿಸುವಲ್ಲಿ ಅದು ತಪ್ಪಿದೆಯೆಂದು ಸರ್ಕಾರಕ್ಕೆ ಮನದಟ್ಟಾದರೆ, ಅದು ಆ ಕರ್ತವ್ಯವನ್ನು ನೆರವೇರಿಸಲು ಒಂದು ಅವಧಿಯನ್ನು ನಿಗದಿಪಡಿಸಬಹುದು.

(2) ಅಂಥ ಕರ್ತವ್ಯವನ್ನು ನೆರವೇರಿಸುವುದಕ್ಕಾಗಿ ನಿಗದಿಪಡಿಸಿದ ಅವಧಿಯೊಳಗೆ ಅದನ್ನು ನೆರವೇರಿಸಲು ಪ್ರಾಧಿಕಾರವು ವಿಫಲವಾಗಿದೆಯೆಂದು ಅಥವಾ ನಿರ್ಲಕ್ಷಿಸಿದೆಯೆಂದ ಸರ್ಕಾರವು ಅಭಿಪ್ರಾಯಪಟ್ಟರೆ, 5ನೇ ಪ್ರಕರಣದಲ್ಲಿ ಏನೇ ಇದ್ದರೂ ನಿಯಮಿಸಲಾದ ರೀತಿಯಲ್ಲಿ ಪ್ರಾಧಿಕಾರವನ್ನು ಸರ್ಕಾರವು ರದ್ದುಗೊಳಿಸುವುದು ಅಥವಾ ಪುನಾರಚನೆ ಮಾಡುವುದು ಕಾನೂನುಬದ್ಧವಾಗಿರತಕ್ಕದ್ದು.

(3) ಪ್ರಾಧಿಕಾರದ ರದಿಯಾತಿಯ ಅನಂತರ, ಮತ್ತು ಅದನ್ನು ಪುನಾರಚನೆ ಮಾಡುವವರೆಗೆ, ಈ ಅಧಿನಿಯಮದ ಮೇರೆಗಿನ ಪ್ರಾಧಿಕಾರದ ಅಧಿಕಾರಗಳನ್ನು ಕರ್ತವ್ಯಗಳನ್ನು ಮತ್ತು ಪ್ರಕಾರ್ಯಗಳನ್ನು ಸರ್ಕಾರವು ಅಥವಾ ಈ ಉದ್ದೇಶಕ್ಕಾಗಿ ಸರ್ಕಾರವು ನೇಮಿಸಬಹುದಾದಂಥ ಅಧಿಕಾರಿಯು ಅಥವಾ ಅಧಿಕಾರಿಗಳು ನಿರ್ವಹಿಸತಕ್ಕದ್ದು.

67. ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ 1961ರ ತಿದ್ದುಪಡಿ :– (1) ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961ರಲ್ಲಿ (ಕರ್ನಾಟಕ ಅಧಿನಿಯಮ, 1863. 11)–

(ಕ) 2ನೇ ಪ್ರಕರಣದಲ್ಲಿ, (7)ನೇ ಖಂಡದ (ಕ) ಉಪಖಂಡದ (1)ನೇ ಬಾಬ್ತಿಗೆ ಬದಲಾಗಿ, ಈ ಕೆಳಕಂಡ ಬಾಬ್ತನ್ನು ಸೇರಿಸತಕ್ಕದ್ದು. ಎಂದರೆ–

(1) "ಬೆಂಗಳೂರು ನಗರದಲ್ಲಿ ಅಡಕವಾಗಿರುವ ಸ್ಥಳೀಯ ಯೋಜನಾ ಪ್ರದೇಶ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಮತ್ತು"

(ಖ) 81–ಕ–ಪ್ರಕರಣದ ಅನಂತರ, ಈ ಕೆಳಕಂಡ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ–

**"81 – ಖ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ರಚನೆಯಿಂದ ಸಂಭವಿಸುವ ಪರಿಣಾಮಗಳು** :– ಈ ಅಧಿನಿಯಮದಲ್ಲಿ ಏನೇ ಇದ್ದರೂ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ 1976 ರ ಮೇರೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ರಚಿತವಾದ ದಿನಾಂಕದಿಂದ ಈ ಕೆಳಕಂಡ ಪರಿಣಾಮಗಳು ಉಂಟಾಗತಕ್ಕದು ಎಂದರೆ :–

(i) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ರಚನೆಯಾದ ದಿನಾಂಕದ ನಿಕಟಪೂರ್ವದಲ್ಲಿ ಬೆಂಗಳೂರು ನಗರದ ನಗರ ಯೋಜನಾ ಪ್ರಾಧಿಕಾರವು ಆ ಯಾವ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿತ್ತೋ ಆ ಪ್ರದೇಶದ ಮೇಲೆ ಅಧಿಕಾರವ್ಯಾಪ್ತಿಯನ್ನುಳ್ಳ ಮತ್ತು ಬೆಂಗಳೂರು ನಗರವನ್ನೊಳಗೊಂಡ ಸ್ಥಳೀಯ ಯೋಜನಾ ಪ್ರದೇಶಕ್ಕೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಸ್ಥಳೀಯ ಯೋಜನಾ ಪ್ರಾಧಿಕಾರವಾಗಿರತಕ್ಕದ್ದು.

(ii) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು, ಬೆಂಗಳೂರು ನಗರಕ್ಕಾಗಿ ರಚಿತವಾದ ಸ್ಥಳೀಯ ಯೋಜನಾ ಪ್ರಾಧಿಕಾರವೆಂಬಂತೆ ಈ ಅಧಿನಿಯಮದ ಮೇರೆಗಿನ ಅಧಿಕಾರಗಳನ್ನು ಚಲಾಯಿಸತಕ್ಕದ್ದು, ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು ಮತ್ತು ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು;

(iii) ನಗರ ಯೋಜನಾ ಪ್ರಾಧಿಕಾರವು ವಿಘಟಿತವಾಗತಕ್ಕದ್ದು ಮತ್ತು ಅಂಥ ವಿಘಟನೆಯಾದ ಮೇಲೆ :–

(ಕ) ಬೆಂಗಳೂರು ನಗರದ ಸ್ಥಳೀಯ ಯೋಜನಾ ಪ್ರಾಧಿಕಾರವು ಮಾಡಿದ ಯಾವುದೇ ಕಾರ್ಯವನ್ನು ಅಥವಾ ಕೈಕೊಂಡ ಯಾವುದೇ ಕ್ರಮವನ್ನು ಮಾಡಲಾದ ಅಥವಾ ಹೊರಡಿಸಲಾದ ಯಾವುದೇ ನೇಮಕವನ್ನು, ಅಧಿಸೂಚನೆಯನ್ನು ಆದೇಶವನ್ನು, ಯೋಜನೆಯನ್ನು ಅಥವಾ ಉಪವಿಧಿಗಳನ್ನು ಒಳಗೊಂಡು), ಕೊಡಲಾದ ಯಾವುದೇ ಪ್ರಾರಂಭಿಕ ಪ್ರಮಾಣಪತ್ರವನ್ನು, ಅಥವಾ ಅನುಮತಿಯನ್ನು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಈ ಅಧಿನಿಯಮದ ಉಪಬಂಧಗಳ ಮೇರೆಗೆ ಮಾಡಿದೆಯೆಂದು, ಕೈಕೊಂಡಿದೆಯೆಂದು, ರಚಿಸಿದೆಯೆಂದು, ಹೊರಡಿಸಿದೆಯೆಂದು ಅಥವಾ ಕೊಟ್ಟಿದೆಯೆಂದು ಭಾವಿಸತಕ್ಕದ್ದು ಮತ್ತು ಈ ಅಧಿನಿಯಮದ ಉಪಬಂಧಗಳ ಮೇರೆಗೆ ಬೆಂಗಳೂರು ಅಭಿವೃದ್ಧಿ, ಪ್ರಾಧಿಕಾರವು ಮಾಡಿದ ಯಾವುದೇ ಕಾರ್ಯದ ಅಥವಾ ಕೈಕೊಂಡ ಯಾವುದೇ ಕ್ರಮದ, ರಚಿಸಿದ ಅಥವಾ ಹೊರಡಿಸಿದ ಯಾವುದೇ ನೇಮಕದ, ಅಧಿಸೂಚನೆಯ, ಆದೇಶದ, ಯೋಜನೆಯ, ಅಥವಾ ಉಪವಿಧಿಯ ಕೊಟ್ಟ ಯಾವುದೇ ಪ್ರಾರಂಭಿಕ ಪ್ರಮಾಣಪತ್ರದ ಅಥವಾ ಅನುಮತಿಯ ಮೂಲಕ ಅದು ರದ್ದಾಗುವವರೆಗೆ ಅದು ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು.

(ಖ) ಬೆಂಗಳೂರು ನಗರದ ಸ್ಥಳೀಯ ಯೋಜನಾ ಪ್ರಾಧಿಕಾರವು, ಅದರೊಡನೆ ಅಥವಾ ಅದರ ಪರವಾಗಿ ಹೊತ್ತುಕೊಂಡು ಎಲ್ಲ ಬಾಧ್ಯತೆಗಳನ್ನು ಮತ್ತು ಹೊಣೆಗಳನ್ನು ಮಾಡಿಕೊಂಡ ಎಲ್ಲ ಕರಾರುಗಳನ್ನು,

ನಿರ್ವಹಿಸಬೇಕೆಂದು ಒಪ್ಪಿಕೊಂಡಿರುವ ಎಲ್ಲಾ ವಿಷಯಗಳನ್ನು ಮತ್ತು ಕಾರ್ಯಗಳನ್ನು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಅದರೊಡನೆ, ಅಥವಾ ಅದರ ಪರವಾಗಿ ಹೊತ್ತುಕೊಂಡಿದೆಯೆಂದು, ಮಾಡಿಕೊಂಡಿದೆಯೆಂದು, ನಿರ್ವಹಿಸಬೇಕೆಂದು ಒಪ್ಪಿಕೊಂಡಿದೆಯೆಂದು ಭಾವಿಸತಕ್ಕದ್ದು.

(ಗ) ಬೆಂಗಳೂರು ನಗರ ಸ್ಥಳೀಯ ಯೋಜನಾ ಪ್ರಾಧಿಕಾರದಲ್ಲಿ ನಿಹಿತವಾದ ಎಲ್ಲ ಚರ ಮತ್ತು ಸ್ಥಿರ ಸ್ವತ್ತುಗಳು ಮತ್ತು ಅದರಲ್ಲಿಯ ಯಾವುದೇ ಸ್ವರೂಪದ ಅಥವಾ ಬಗೆಯ ಎಲ್ಲ ಹಿತಾಸಕ್ತಿಗಳು, ಬೆಂಗಳೂರು ನಗರ ಸ್ಥಳೀಯ ಯೋಜನಾ ಪ್ರಾಧಿಕಾರವು ಬಳಸಿದ್ದ, ಅನುಭೋಗಿಸಿದ್ದ ಅಥವಾ ಹೊಂದಿದ್ದ ಯಾವುದೇ ತರಹದ ಎಲ್ಲ ಹಕ್ಕುಗಳೊಡನೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ನಿಹಿತವಾಗತಕ್ಕದ್ದು.

(ಘ) ಬೆಂಗಳೂರು ನಗರ ಸ್ಥಳೀಯ ಯೋಜನಾ ಪ್ರಾಧಿಕಾರವು ಅಥವಾ ಪ್ರಾಧಿಕಾರದ ವಿರುದ್ಧವಾಗಿ ಹೂಡಿದ ಅಥವಾ ಹೂಡಬಹುದಾದ ಎಲ್ಲ ದಾವೆಗಳನ್ನು, ಪ್ರಾಸಿಕ್ಯೂಷನ್ನುಗಳನ್ನು ಮತ್ತು ಇತರ ಕಾನೂನು ವ್ಯವಹರಣೆಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಅಥವಾ ಪ್ರಾಧಿಕಾರದ ವಿರುದ್ಧವಾಗಿ ಮುಂದುವರಿಸಬಹುದು ಅಥವಾ ಹೂಡಬಹುದು.

**68. ಗೃಹನಿರ್ಮಾಣ ಮಂಡಲಿಯು ಯಾವುದೇ ಗೃಹನಿರ್ಮಾಣ ಯೋಜನೆಯನ್ನು ಕೈಕೊಳ್ಳತಕ್ಕುದಲ್ಲ :–** ಈ ಅಧಿನಿಯಮವು ಜಾರಿಗೆ ಬಂದ ಅನಂತರ, ಕರ್ನಾಟಕ ಗೃಹ ನಿರ್ಮಾಣ ಮಂಡಲಿ ಅಧಿನಿಯಮದ 1962ರ (ಕರ್ನಾಟಕ ಅಧಿನಿಯಮ 1983ರ 10) ಮೇರೆಗೆ ಸ್ಥಾಪಿತವಾದ ಗೃಹನಿರ್ಮಾಣ ಮಂಡಲಿಯು, ಬೆಂಗಳೂರು ಮಹಾನಗರ ಪ್ರದೇಶದೊಳಗಿನ ಯಾವುದೇ ಪ್ರದೇಶದಲ್ಲಿ ಯಾವುದೇ ಗೃಹನಿರ್ಮಾಣ ಯೋಜನೆಯನ್ನು ಕೈಕೊಳ್ಳತಕ್ಕುದಲ್ಲ.

**69. ನಿಯಮಗಳ ರಚನಾಧಿಕಾರ :–** (1) ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಸರ್ಕಾರವು ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಮೇಲೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧೆಬಾರದಂತೆ ಅಂಥ ನಿಯಮಗಳು, ಈ ಕೆಳಕಂಡ ಎಲ್ಲಾ ಅಥವಾ ಯಾವುದೇ ವಿಷಯಗಳ ಬಗ್ಗೆ ಉಪಬಂಧಿಸಬಹುದು, ಎಂದರೆ :–

(ಕ) ಪ್ರಾಧಿಕಾರದ ಮತ್ತು ಈ ಅಧಿನಿಯಮವನ್ನು ಕಾರ್ಯಗತಗೊಳಿಸುವುದಕ್ಕೆ ಸಂಬಂಧಪಟ್ಟ ವ್ಯಕ್ತಿಗಳ ಮಾರ್ಗದರ್ಶನಕ್ಕಾಗಿ ಅಥವಾ ಇದರಲ್ಲಿ ವ್ಯಕ್ತವಾಗಿ ಉಪಬಂಧಿಸಿರದ ಸಂದರ್ಭಗಳ ಬಗ್ಗೆ;

(ಖ) ನಿಗಮದ ಕೌನ್ಸಿಲರುಗಳು ಸದಸ್ಯರನ್ನು ಚುನಾಯಿಸುವ ರೀತಿ;

(ಗ) ಪ್ರಾಧಿಕಾರದ ಅಧ್ಯಕ್ಷನ ಮತ್ತು ಇತರ ಸದಸ್ಯರ ಸೇವಾ ಷರತ್ತುಗಳು;

(ಘ) ಸಮಿತಿಯನ್ನು ನೇಮಿಸುವ ರೀತಿ ಮತ್ತು ಅಂಥ ನೇಮಕದ ಅವಧಿ;

(ಙ) ಯಾವ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು ಪ್ರಾಧಿಕಾರವು ಅಭಿವೃದ್ಧಿ ಯೋಜನೆಯನ್ನು ಅಥವಾ ಕಾಮಗಾರಿಯನ್ನು ಕೈಕೊಳ್ಳಬಹುದು ಮತ್ತು ನಿರ್ವಹಿಸಬಹುದು;

(ಚ) ಯೋಜನೆಯ ಬಗೆಗಿನ ಅರ್ಜಿಯಲ್ಲಿ ನಿರ್ದಿಷ್ಟಪಡಿಸಬೇಕಾದ ವಿವರಗಳು;

(ಛ) ಯಾವ ನಿರ್ಬಂಧಗಳಿಗೆ, ಷರತ್ತುಗಳಿಗೆ ಮತ್ತು ಪರಿಮಿತಿಯೊಳಗೆ ಒಳಪಟ್ಟು ಪ್ರಾಧಿಕಾರವು ಚರ ಮತ್ತು ಸ್ಥಿರಸ್ವತ್ತುಗಳನ್ನು ಗುತ್ತಿಗೆಗೆ ಕೊಡಬಹುದು; ಮಾರಬಹುದು; ಅಥವಾ ವರ್ಗಾವಣೆ ಮಾಡಬಹುದು;

(ಜ) ಪ್ರಾಧಿಕಾರವು ನಿವೇಶನಗಳನ್ನು ಹಂಚುವುದನ್ನು ಅಥವಾ ಹರಾಜಿನ ಮೂಲಕ ಮಾರಾಟ ಮಾಡುವುದನ್ನು ವಿನಿಮಯಗೊಳಿಸುವುದು;

(ಝ) ಪ್ರಾಧಿಕಾರವನ್ನು ಪುನಾರಚಿಸುವ ರೀತಿ;

(ಞ) ನಿಯಮಗಳ ಮೂಲಕ ನಿಯಮಿಸಬೇಕಾದಂಥ ಅಥವಾ ನಿಯಮಿಸಬಹುದಾದಂಥ ಇತರ ಯಾವುದೇ ವಿಷಯಗಳು.

**70. ವಿನಿಮಯಗಳ ರಚನಾಧಿಕಾರ :–** (1) ಈ ಅಧಿನಿಯಮದ ಉದ್ದೇಶಗಳು ಕಾರ್ಯಗತಗೊಳಿಸಲು, ಈ ಅಧಿನಿಯಮದ ಉಪಬಂಧಗಳಿಗೆ ಅಥವಾ ಅದರ ಮೇರೆಗೆ ಮಾಡಲಾದ ನಿಯಮಗಳಿಗೆ ಅಸಂಗತವಲ್ಲದ ವಿನಿಮಯಗಳನ್ನು ಸರ್ಕಾರದ ಪೂರ್ವಾನುಮೋದನೆಯನ್ನು ಪಡೆದು, ಈ ಪ್ರಾಧಿಕಾರವು ರಚಿಸಬಹುದು ಮತ್ತು ಈ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧೆಬಾರದಂತೆ, ಅಂಥ ವಿನಿಯಮಗಳು ಈ ಕೆಳಕಂಡ ವಿಷಯಗಳ ಬಗ್ಗೆ ಉಪಬಂಧಿಸಬಹುದು.

(ಕ) ಪ್ರಾಧಿಕಾರದ ಸಭೆಗಳನ್ನು ಕರೆಯುವುದು ಮತ್ತು ನಡೆಸುವುದು, ಅಂಥ ಸಭೆಗಳನ್ನು ಯಾವ ಕಾಲದಲ್ಲಿ ಮತ್ತು ಯಾವ ಸ್ಥಳದಲ್ಲಿ ನಡೆಸಬೇಕು, ಅಂಥ ಸಭೆಗಳ ಕಾರ್ಯನಿರ್ವಹಣೆಯ ರೀತಿ ಮತ್ತು ಅದರಲ್ಲಿ ಕೋರಂಗೆ ಅವಶ್ಯವಿರುವ ಸದಸ್ಯರ ಸಂಖ್ಯೆ;

(ಖ) ಸಮಿತಿಗಳಿಗೆ ತಿಳುವಳಿಕೆ ಕೊಡುವುದು;

(ಗ) ಪ್ರಾಧಿಕಾರವು ಮಾಡಿಕೊಳ್ಳಬೇಕಾದ ಕರಾರಿನ ಅಥವಾ ಒಪ್ಪಂದದ ನಮೂನೆ;

(ಘ) ಬರಬೇಕಾಗಿರುವುದನ್ನು ವಸೂಲು ಮಾಡುವ ಬಗೆಗಿನ ಆದೇಶಿಕೆಗಳನ್ನು ಜಾರಿಗೊಳಿಸುವುದಕ್ಕಾಗಿ ವ್ಯಕ್ತಿಗಳ ನೇಮಕ;

(ಙ) Iನೇ ಮತ್ತು IIIನೇ ಅಧ್ಯಾಯಗಳ ಮೇರೆಗೆ ಪ್ರಾಧಿಕಾರದ ಪ್ರಕಾರ್ಯಗಳನ್ನು ನೆರವೇರಿಸುವ ಬಗ್ಗೆ ಅನುಸರಿಸಬೇಕಾದ ಪ್ರಕ್ರಿಯೆ.

(ಚ) ಪ್ರಾಧಿಕಾರಕ್ಕೆ ಎರವಲು ಕೊಡಲಾದ ಸರಕಾರಿ ಸೇವೆಯಲ್ಲಿ ಇರುವ ಅಧಿಕಾರಿಗಳಲ್ಲದ, ಪ್ರಾಧಿಕಾರದ ಅಧಿಕಾರಿಗಳ ಮತ್ತು ನೌಕರರ ರಜಾ ಮಂಜೂರಾತಿಯನ್ನು, ರಜಾಭತ್ಯೆಗಳನ್ನು, ನಿವೃತ್ತಿವೇತನವನ್ನು ಮತ್ತು ಉಪದಾನಗಳನ್ನು ಹಾಗೂ ಸೇವಾ ಷರತ್ತುಗಳಿಗೆ ಸಂಬಂಧಪಟ್ಟ ಇತರ ವಿಷಯಗಳನ್ನು ನಿಯಂತ್ರಿಸಬಹುದು;

(ಛ) ಈ ಅಧಿನಿಯಮದ ಮೇರೆಗಿನ ವಿನಿಯಮಗಳ ಮೂಲಕ ನಿಯಮಿಸಬೇಕಾದ ಇತರ ಯಾವುದೇ ವಿಷಯ.

(2) ಈ ಪ್ರಕರಣದ ಮೇರೆಗೆ ರಚಿಸಲಾದ ಯಾವುದೇ ವಿನಿಮಯವನ್ನು ಸರ್ಕಾರವು ಅಧಿಸೂಚನೆಯ ಮೂಲಕ ರದ್ದುಗೊಳಿಸಬಹುದು ಮತ್ತು ತದನಂತರ, ಸದರಿ ವಿನಿಯಮವು ಪರಿಣಾಮಕಾರಿಯಾಗಿರುವುದು ಕೊನೆಗೊಳ್ಳತಕ್ಕದ್ದು.

(3) ಈ ಪ್ರಕರಣದ ಮೇರೆಗೆ ರಚಿಸಲಾದ ಎಲ್ಲ ವಿನಿಯಮಗಳನ್ನು ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸತಕ್ಕದ್ದು.

**71. ಉಪವಿಧಿಗಳ ರಚನಾಧಿಕಾರ :–** (1) ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳಿಗೆ ಅಥವಾ ವಿನಿಯಮಗಳಿಗೆ ಅಸಂಗತವಾಗಿರದ ಉಪವಿಧಿಗಳನ್ನು ಸರ್ಕಾರದ ಅನುಮೋದನೆಯನ್ನು ಪಡೆದು ಪ್ರಾಧಿಕಾರವು ಈ ಕೆಳಗಿನ ವಿಷಯಗಳ ಸಂಬಂಧದಲ್ಲಿ ರಚಿಸಬಹುದು, ಎಂದರೆ :–

(ಕ) ಯಾವುದೇ ಯೋಜನೆಯ ಮೇರೆಗೆ ನಿರ್ಮಿಸಲಾದ ಮನೆಗಳ ವ್ಯವಸ್ಥಾಪನೆ, ಬಳಕೆ ಮತ್ತು ನಿಯಂತ್ರಣ;

(ಖ) ಕೆಳಗಿನ ವಿಷಯಗಳಿಗೆ ಸಂಬಂಧಪಟ್ಟಂತೆ ಕಟ್ಟಡದ ನಿರ್ಮಾಣವನ್ನು ಮತ್ತು ಪುನರ್‌ನಿರ್ಮಾಣವನ್ನು ನಿಯಂತ್ರಿಸುವುದು; ಎಂದರೆ ನಿರ್ಮಾಣಕ್ಕೆ ಮುನ್ನ ನೋಟೀಸನ್ನು ಕೊಡುವುದು, ನಕ್ಷೆಗಳನ್ನು ಒಪ್ಪಿಸುವುದು, ನೆರೆಹೊರೆಯ ಕಟ್ಟಡಗಳೊಂದಿಗಿನ ಮುಂಭಾಗ ರೇಖೆ, ಕಟ್ಟಡದ ಸುತ್ತ ಖಾಲಿಬಿಡಬೇಕಾದ ಸ್ಥಳ, ಅಡಿಪಾಯದ ಮಟ್ಟ ಮತ್ತು ಅಗಲ, ಕಟ್ಟಡದ ದೃಢತೆ, ಉಪಯೋಗಿಸಬೇಕಾದ ಸಾಮಾಗ್ರಿಗಳು ಮತ್ತು ಚರಂಡಿಗಾಗಿ ಹಾಗೂ ವಾಯು ಸಂಚಾರಕ್ಕಾಗಿ ಮಾಡಬೇಕಾದ ಏರ್ಪಾಟು; ಮತ್ತು

(ಗ) ಬಡಾವಣೆಗಳನ್ನು ಮತ್ತು ಲೇಔಟುಗಳನ್ನು ರೂಪಿಸುವುದು ಮತ್ತು ಖಾಸಗಿ ಬೀದಿಗಳನ್ನು ನಿರ್ಮಿಸುವುದು; ಬಡಾವಣೆಗಳನ್ನು ಅಥವಾ ಲೇಔಟನ್ನು ರೂಪಿಸುವ ಮತ್ತು ಖಾಸಗಿ ಬೀದಿಗಳನ್ನು ನಿರ್ಮಿಸುವ ಬಗೆಗಿನ ಅನುಮತಿಗಾಗಿ ಅರ್ಜಿಯ ಜೊತೆಗೆ ಸಲ್ಲಿಸಬೇಕಾಗಿರುವ ಮಾಹಿತಿಯನ್ನು ಮತ್ತು ನಕ್ಷೆಗಳನ್ನು ನಿರ್ಧರಿಸುವುದು; ಮತ್ತು ಬೀದಿಗಳ ಮಟ್ಟ ಮತ್ತು ಅಗಲವನ್ನು ಹಾಗೂ ಅವುಗಳಿಗೆ ಹೊಂದಿಕೊಂಡಿರುವ ಕಟ್ಟಡಗಳ ಎತ್ತರವನ್ನು ನಿಯಂತ್ರಿಸುವುದು.

(2) ಈ ಪ್ರಕರಣದ ಮೇರೆಗೆ ರಚಿಸಲಾದ ಯಾವುದೇ ಉಪವಿಧಿಯನ್ನು ಅಧಿಸೂಚನೆಯ ಮೂಲಕ ಸರ್ಕಾರವು ರದ್ದುಗೊಳಿಸಬಹುದು ಮತ್ತು ತದನಂತರ, ಸದರಿ ಉಪವಿಧಿಯು ಪರಿಣಾಮಕಾರಿಯಾಗಿರುವುದು ಕೊನೆಕೊಳ್ಳತಕ್ಕದ್ದು.

(3) ಈ ಪ್ರಕರಣದ ಮೇರೆಗೆ ರಚಿಸಲಾದ ಎಲ್ಲ ಉಪವಿಧಿಗಳನ್ನು ಸರ್ಕಾರಿ ರಾಜಪತ್ರದಲ್ಲಿ ಮತ್ತು ಬೆಂಗಳೂರು ನಗರದಲ್ಲಿ ಅಧಿಕ ಪ್ರಸಾರದಲ್ಲಿರುವ ಇಂಗ್ಲೀಷ್ ಮತ್ತು ಕನ್ನಡದ ಕನಿಷ್ಟ ಎರಡು ವೃತ್ತಪತ್ರಿಕೆಗಳಲ್ಲಿ ಸಹ ಪ್ರಕಟಿಸತಕ್ಕದ್ದು.

**72. ಈ ಅಧಿನಿಯಮದ ಉಪಬಂಧಗಳ ಉಲ್ಲಂಘನೆಗಾಗಿ ದಂಡ :–** ಈ ಅಧಿನಿಯಮದ ಅಥವಾ ಇದರ ಮೇರೆಗಿನ ನಿಯಮದ ಅಥವಾ ಉಪವಿಧಿಯ ಉಪಬಂಧಗಳನ್ನು ಅಥವಾ ಇದರ ಮೇರೆಗೆ ಮಾಡಲಾದ ಅಥವಾ ಮಂಜೂರಾದ ಯೋಜನೆಯನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯು, 25 ರೂಪಾಯಿಗಳವರೆಗಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು ಮತ್ತು ಉಲ್ಲಂಘನೆಯು ಮುಂದುವರಿಯುತ್ತಿರುವ ಸಂದರ್ಭದಲ್ಲಿ ಈ ಉಲ್ಲಂಘನೆಯ ಮೊದಲನೇಯ ದಿನದ ಅನಂತರ ಯಾವ ಅವಧಿಯವರೆಗೆ ಆ ಉಲ್ಲಂಘನೆಯು ಮುಂದುವರೆಯುವುದೋ ಆ ಅವಧಿಯ ಪ್ರತಿ ದಿನಕ್ಕೆ 5 ರೂ. ಗಳವರೆಗಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**73. ಈ ಅಧಿನಿಯಮವು ಇತರ ಕಾನೂನುಗಳ ಮೇಲೆ ಅಧ್ಯಾರೋಹಿಯಾಗಿರತಕ್ಕದ್ದು :–** ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಇದಕ್ಕೆ ಅಸಂಗತವಾದುದು ಏನೇ ಇದ್ದರೂ, ಈ ಅಧಿನಿಯಮದ ಉಪಬಂಧಗಳು ಪರಿಣಾಮಕಾರಿಯಾಗಿರತಕ್ಕದ್ದು.

**74. ತೊಂದರೆಗಳ ನಿವಾರಣೆ :–** ಈ ಅಧಿನಿಯಮದಲ್ಲಿ ಏನೇ ಇದ್ದರೂ ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದರೆ, ರಾಜಪತ್ರದಲ್ಲಿ ಪ್ರಕಟಿಸುವ ಮೂಲಕ ಸರ್ಕಾರವು ಆ ತೊಂದರೆಯನ್ನು ನಿವಾರಿಸಬಹುದು.

**75. ಪ್ರಾಧಿಕಾರದ ವಿಘಟನೆ :–** ಸರ್ಕಾರವು, ಅಧಿಸೂಚನೆಯ ಮೂಲಕ ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಪ್ರಾಧಿಕಾರವು ವಿಘಟಿತವಾಗತಕ್ಕದ್ದೆಂದು ಘೋಷಿಸಬಹುದು;

ಪರಂತು, ರಾಜ್ಯವಿಧಾನಮಂಡಲದ ಎರಡೂ ಸದನಗಳು ಆ ಬಗ್ಗೆ ನಿರ್ಣಯವನ್ನು ಮಂಡಿಸಿ ಅದನ್ನು ಅಂಗೀಕರಿಸಿದ ಹೊರತು, ಸರ್ಕಾರವು ಅಂಥ ಯಾವುದೇ ಘೋಷಣೆಯನ್ನು ಮಾಡತಕ್ಕದ್ದಲ್ಲ.

(2) (1)ನೇ ಉಪ–ಪ್ರಕರಣದ ಮೇರೆಗಿನ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಿಂದ,–

(ಕ) ಪ್ರಾಧಿಕಾರದಲ್ಲಿ ನಿಹಿತವಾಗಿರುವ ಮತ್ತು ಅದು ವಸೂಲು ಮಾಡಬೇಕಾದ ಎಲ್ಲ ಸ್ವತ್ತುಗಳು, ನಿಧಿಗಳು ಮತ್ತು ಬಾಕಿಗಳು ಸರ್ಕಾರದಲ್ಲಿ ನಿಹಿತವಾಗತಕ್ಕದ್ದು.

(ಖ) ಪ್ರಾಧಿಕಾರದ ವಿರುದ್ಧವಾಗಿ ಯಾವ ಹೊಣೆಗಳ ಬಗ್ಗೆ ಕಾರ್ಯ ಕೈಗೊಳ್ಳಬಹುದೋ ಆ ಎಲ್ಲ ಹೊಣೆಗಳ ಬಗ್ಗೆ ಸರ್ಕಾರದಲ್ಲಿ ನಿಹಿತವಾಗಿರುವ ಮತ್ತು ಅದು ವಸೂಲು ಮಾಡಿರುವ ಸ್ವತ್ತುಗಳ, ನಿಧಿಗಳ ಮತ್ತು ಬಾಕಿಗಳಷ್ಟರಮಟ್ಟಿಗೆ, ಸರ್ಕಾರದ ವಿರುದ್ಧವಾಗಿ ಕ್ರಮವನ್ನು ಜರುಗಿಸುವಂತಿರಬೇಕು.

(3) ಈ ಪ್ರಕರಣದಲ್ಲಿರುವುದು ಯಾವುದೂ, 39ನೇ ಪ್ರಕರಣದ (5)ನೇ ಉಪ–ಪ್ರಕರಣದ ಮೇರೆಗೆ ಖಾತರಿ ಕೊಡಲಾಗಿರುವ ಸಾಲಗಳ ಮತ್ತು ಡಿಬೆಂಚರುಗಳ ಸಂಬಂಧದಲ್ಲಿ ಸರ್ಕಾರಕ್ಕಿರುವ ಹೊಣೆಗೆ ಬಾಧಕವಾಗತಕ್ಕುದಲ್ಲ.

**76. ನಿರಸನ ಮತ್ತು ಉಳಿಸುವಿಕೆಗಳು :–** (1) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸುವ ಬಗ್ಗೆ 3ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸಿದ ಮೇಲೆ, ಬೆಂಗಳೂರು ನಗರ ಮೇಲ್ಪಾಟು ಅಧಿನಿಯಮ 1945 (ಮೈಸೂರು ಅಧಿನಿಯಮ, 1945 ರ 5) ನಿರಸಿತವಾಗತಕ್ಕದ್ದು.

(2) ಹಾಗೆ ನಿರಸಿತವಾದ ಮೇಲೆ, ಸದರಿ ಅಧಿನಿಯಮದ ಮೇರೆಗೆ ರಚಿತವಾದ ಮಂಡಳಿಯು ವಿಘಟಿತವಾಗತಕ್ಕದ್ದು ಮತ್ತು ಅಧ್ಯಕ್ಷನು ಒಳಗೊಂಡು ಅದರ ಎಲ್ಲ ಸದಸ್ಯರೂ ಆ ಪದದಲ್ಲಿರುವುದ ಕೊನೆಗೊಳ್ಳತಕ್ಕದ್ದು.

(3) (2)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, (1)ನೇ ಉಪಪ್ರಕರಣದಲ್ಲಿರುವುದು ಯಾವುದು ಕೆಳಕಂಡವುಗಳನ್ನು ಭಾದಿಸತಕ್ಕುದಲ್ಲ;

(ಕ) ಸದರಿ ಅಧಿನಿಯಮದ ಪೂರ್ವ ಪ್ರವರ್ತನೆ ಅಥವಾ ಅದರ ಮೇರೆಗೆ ಕ್ರಮಬದ್ಧವಾಗಿ ಮಾಡಿದ ಅಥವಾ ಮಾಡಲೆಡೆಗೊಟ್ಟ ಯಾವುದೇ ಕಾರ್ಯ; ಅಥವಾ

(ಖ) ಸದರಿ ಅಧಿನಿಯಮದ ಮೇರೆಗೆ ಅರ್ಜಿಸಲಾದ, ಉಂಟಾದ ಅಥವಾ ಹೊತ್ತುಕೊಂಡ ಯಾವುದೇ ಹಕ್ಕು, ವಿಶೇಷ ಹಕ್ಕು, ಬಾಧ್ಯತೆ ಅಥವಾ ಹೊಣೆ; ಅಥವಾ

(ಗ) ಸದರಿ ಅಧಿನಿಯಮದ ವಿರುದ್ಧವಾಗಿ ಮಾಡಿದ ಯಾವುದೇ ಅಪರಾಧದಲ್ಲಿ ಗುರಿಯಾದ ಯಾವುದೇ ದಂಡ, ಮುಟ್ಟುಗೋಲು ಅಥವಾ ದಂಡನೆ; ಅಥವಾ

(ಘ) ಮೇಲೆ ಹೇಳಲಾದಂತೆ ಯಾವುದೇ ಹಕ್ಕಿನ, ಬಾಧ್ಯತೆಯ, ಹೊಣೆಯ ಮುಟ್ಟುಗೋಲಿನ ಅಥವಾ ದಂಡನೆಯ ಸಂಬಂಧದಲ್ಲಿನ ಯಾವುದೇ ತನಿಖೆ, ಕಾನೂನು ವ್ಯವಹರಣೆ ಅಥವಾ ಕ್ರಮೋಪಾಯ,

ಮತ್ತು ಅಂಥ ಯಾವುದೇ ತನಿಖೆಯನ್ನು, ಕಾನೂನು ವ್ಯವಹರಣೆಯನ್ನು ಅಥವಾ ಕ್ರಮೋಪಾಯವನ್ನು ಹೂಡಬಹುದು, ಮುಂದುವರಿಸಬಹುದು ಅಥವಾ ಜಾರಿಗೊಳಿಸಬಹುದು, ಮತ್ತು ಈ ಅಧಿನಿಯಮವು ಅಧಿನಿಯಮಿತವಾಗಿರದಿದ್ದರೆ ಹೇಗೋ ಹಾಗೆ ಅಂಥ ಯಾವುದೇ ದಂಡನೆಯನ್ನು, ಮುಟ್ಟುಗೋಲನ್ನು, ದಂಡನೆಯನ್ನು ವಿಧಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದ ದಿನಾಂಕಕ್ಕೆ ಮುಂಚೆ ಮತ್ತು ಆ ದಿನಾಂಕದಂದು ಅಸ್ತಿತ್ವದಲ್ಲಿರುವ ಬೆಂಗಳೂರು ನಗರ ಮೇಲ್ಪಾಟು ನ್ಯಾಸಾಧಾರಿ ಮಂಡಲಿಯ ಎಲ್ಲ ಆಸ್ತಿಗಳು, ಹೊಣೆಗಳು, ಮತ್ತು ಅದು ಅಥವಾ ಅದರ ಪರವಾಗಿ ಮಾಡಿಕೊಂಡ ಎಲ್ಲ ಕರಾರುಗಳು, ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೊಳಪಟ್ಟು ಪ್ರಾಧಿಕಾರಕ್ಕೆ ಪಾಪ್ತವಾಗತಕ್ಕದ್ದು;

ಮತ್ತು ಪರಂತು, ಸದರಿ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ಕಾರ್ಯವನ್ನು ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಮಾಡಿದ ಅಥವಾ ಹೊರಡಿಸಿದ ಯಾವುದೇ ನೇಮಕವನ್ನು, ಅಧಿಸೂಚನೆಯನ್ನು, ನಿಯಮವನ್ನು, ವಿನಿಯಮವನ್ನು, ಆದೇಶವನ್ನು ಅಥವಾ ಯೋಜನೆಯನ್ನು ಅಥವಾ ಉಪವಿಧಿಯನ್ನು, ಕೊಡಲಾದ ಯಾವುದೇ ಅನುಮತಿಯನ್ನು ಒಳಗೊಂಡು ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಮಾಡಲಾಗಿದೆಯೆಂದು ಅಥವಾ ಕೈಕೊಳ್ಳಲಾಗಿದೆಯೆಂದು ಭಾವಿಸತಕ್ಕದ್ದು ಮತ್ತು ಈ ಅಧಿನಿಯಮದ ಮೇರೆಗೆ ಮಾಡಿದ ಯವುದೇ ಕಾರ್ಯದ ಅಥವಾ ಕೈಕೊಂಡ ಯಾವುದೇ ಕ್ರಮದ ಮೂಲಕ ರದ್ದಾದ ಹೊರತು ಮತ್ತು ರದ್ದಾಗುವವರೆಗೆ, ಅದು ತದನುಸಾರವಾಗಿ ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು;

ಮತ್ತು ಪರಂತು, ನಿರಸಿತವಾದ ಅಧಿನಿಯಮದ ಯಾವುದೇ ಉಪಬಂಧಕ್ಕೆ ಯಾವುದೇ ಅಧಿನಿಯಮದಲ್ಲಿ ಅಥವಾ ಮಾಡಲಾದ ಯಾವುದೇ ಲಿಖಿತದಲ್ಲಿ ಯಾವುದೇ ಉಲ್ಲೇಖವನ್ನು ಬೇರೆ ಉದ್ದೇಶವು ಕಂಡುಬಂದ ಹೊರತು, ಈ ಅಧಿನಿಯಮದ ಸಂವಾದಿ ಉಪಬಂಧಕ್ಕೆ ಮಾಡಲಾದ ಉಲ್ಲೇಖವೆಂದು ಅರ್ಥೈಸತಕ್ಕದ್ದು.

(4) (1)ನೇ ಉಪಪ್ರಕರಣದ ಉಪಬಂಧಗಳಲ್ಲಿ ಏನೇ ಇದ್ದರೂ,

(ಕ) ಬೆಂಗಳೂರು ನಗರ ಮೇಲ್ಪಾಟು ಅಧಿನಿಯಮ, 1945ರ ಮೇರೆಗೆ ರಚಿತವಾದ ಮಂಡಲಿಯ ಅಧೀನದಲ್ಲಿ ಈ ಅಧಿನಿಯಮದ ಪ್ರಾರಂಭದ ನಿಕಟ ಪೂರ್ವದಲ್ಲಿ ಸೇವೆಯಲ್ಲಿದ್ದ ಪ್ರತಿಯೊಬ್ಬ ಅಧಿಕಾರಿಯು ಮತ್ತು ಇತರ ನೌಕರನು ಅಂಥ ದಿನಾಂಕದಂದು ಮತ್ತು ದಿನಾಂಕದಿಂದ ಪ್ರಾಧಿಕಾರಕ್ಕೆ ವರ್ಗಾಯಿತನಾಗತಕ್ಕದ್ದು ಮತ್ತು ಅದರ ಅಧಿಕಾರಿ ಅಥವಾ ನೌಕರನಾಗತಕ್ಕದ್ದು ಮತ್ತು ಈ ಅಧಿನಿಯಮವು ನಿರಿಸಿತವಾಗದಿದ್ದರೆ ಯಾವ ಅವಧಿಯವರೆಗೆ, ಯಾವ ಪರಿಶ್ರಮಧನದ ಮೇಲೆ ಮತ್ತು ಯಾವ ನಿಬಂಧನೆಗಳ ಹಾಗೂ ಷರತ್ತುಗಳ ಮೇಲೆ ಅವನು ಆ ಪದದಲ್ಲಿರುತ್ತಿದ್ದನೋ ಅವುಗಳ ಮೇಲೆ ಅವನು ಆ ಪದದಲ್ಲಿ ಇರತಕ್ಕದ್ದು ಮತ್ತು ಪ್ರಾಧಿಕಾರವು ಅಂಥ ಅವಧಿಯನ್ನು, ಪರಿಶ್ರಮಧನವನ್ನು ಮತ್ತು ನಿಬಂಧನೆಗಳನ್ನು ಹಾಗೂ ಷರತ್ತುಗಳನ್ನು ಸೂಕ್ತವಾಗಿ ವ್ಯತ್ಯಾಸಗೊಳಿಸಿದ ಹೊರತು ಮತ್ತು ವರೆಗೆ ಅವನು ಹಾಗೆ ಮುಂದುವರಿಯತಕ್ಕದ್ದು;

ಪರಂತು, ಬೆಂಗಳೂರು ನಗರ ಮೇಲ್ಪಾಟು ಅಧಿನಿಯಮ, 1945 ನಿರಸಿತವಾಗುವ ಮುಂಚೆ ಯಾವನೇ ಅಂಥ ಅಧಿಕಾರಿಯು ಅಥವಾ ಇತರ ನೌಕರನು ಸಲ್ಲಿಸಿದ ಯಾವುದೇ ಸೇವೆಯನ್ನು ಪ್ರಾಧಿಕಾರದ ಅಧೀನದಲ್ಲಿ ಸಲ್ಲಿಸಲಾದ ಸೇವೆಯೆಂದು ಭಾವಿಸತಕ್ಕದ್ದು;

ಮತ್ತು ಪರಂತು ಈ ಅಧಿನಿಯಮದ ಮೇರೆಗೆ ತಾನು ಯುಕ್ತವೆಂದು ಅಲೋಚಿಸುವಂಥ ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ ಅಂಥ ಯಾವನೇ ಅಧಿಕಾರಿಯನ್ನು ಅಥವಾ ಇತರ ನೌಕರನನ್ನು ಪ್ರಾಧಿಕಾರವು ನಿಯೋಜಿಸಬಹುದು ಮತ್ತು ಅಂಥ ಪ್ರತಿಯೊಬ್ಬ ಅಧಿಕಾರಿಯು ಅಥವಾ ಇತರ ನೌಕರನು ಆ ಪ್ರಕಾರ್ಯಗಳನ್ನು ತದನುಸಾರವಾಗಿ ನಿರ್ವಹಿಸತಕ್ಕದ್ದು.

(ಖ) ನಿವೇಶನಗಳ ಹಂಚಿಕೆಗೆ ಸಂಬಂಧಿಸಿದ ಬೆಂಗಳೂರು ನಗರ ಮೇಲ್ಪಾಟು (ನಿವೇಶನಗಳ ಹಂಚಿಕೆ) ನಿಯಮಗಳು, 1972 ಮತ್ತು ಬೆಂಗಳೂರು ನಗರ ಮೇಲ್ಪಾಟು (ಮೂಲೆ ನಿವೇಶನಗಳ ಮತ್ತು ವಾಣಿಜ್ಯ ನಿವೇಶನಗಳ ವಿಲೇ) ನಿಯಮಗಳು, 1972 – ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಅದರ ಮೇರೆಗೆ ರದ್ದಾದ ಹೊರತು ಅಥವಾ ವರೆಗೆ ಸದರಿ ನಿಯಮದ ಉಪಬಂಧಗಳು ನಿರಸಿತವಾಗದಿದ್ದರೆ ಹೇಗೋ ಹಾಗೆ, ಜಾರಿಯಲ್ಲಿರುವುದು ಮುಂದಿವರಿಯತಕ್ಕದ್ದು, ಆದರೆ ಮಂಡಲಿಯ ಬಗ್ಗೆ ಮಾಡಲಾದ ಉಲ್ಲೇಖಗಳನ್ನು ಪ್ರಾಧಿಕಾರದ ಬಗ್ಗೆ ಮಾಡಲಾದ ಉಲ್ಲೇಖಗಳೆಂದು ಅರ್ಥೈಸತಕ್ಕದ್ದು.

**77. ಕರ್ನಾಟಕ ಅಧ್ಯಾದೇಶ 1975 ರ 29 ರ ನಿರಸನ :–** (1) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಧ್ಯಾದೇಶ, 1975 (ಕರ್ನಾಟಕ ಅಧ್ಯಾದೇಶ 1975ರ 29) ಈ ಮೂಲಕ ನಿರಸಿತವಾಗಿದೆ.

2. ಹಾಗೆ ನಿರಸಿತವಾಗಿದ್ದರೂ, ಸದರಿ ಅಧ್ಯಾದೇಶದ ಮೇರೆಗೆ ಮಾಡಲಾದ ಯಾವುದೇ ಕಾರ್ಯವನ್ನು ಅಥವಾ ಕೈಕೊಂಡ ಕ್ರಮವನ್ನು, ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಮಾಡಲಾಗಿದೆಯೆಂದು ಅಥವಾ ಕೈಕೊಳ್ಳಲಾಗಿದೆಯೆಂದು ಭಾವಿಸತಕ್ಕದ್ದು.

**ಎ. ಎನ್. ಬ್ಯಾನರ್ಜಿ**
ಕರ್ನಾಟಕ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**(ಎಂ. ಉಮೇಶ್)**
ಸರ್ಕಾರದ ಅಧೀನ ಕಾರ್ಯದರ್ಶಿ
ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ.

**(ಕರ್ನಾಟಕ ಸರ್ಕಾರದಿಂದ ಪ್ರಕಟಿತ)**

**ಭಾನಿ 20/ ರಾಶಾಶಾ/ 2009**